ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಅಕ್ಟೋಬರ್ 2020 ಬೆಲೆ. ರೂ. 5/-

16-10-2020

ಶುಕ್ರವಾರ

ರಾತ್ರಿ:

ದೊಡ್ಡಶೇಷವಾಹನ



## ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರ ನವರಾತ್ರಿ ಬ್ರಹ್ಮೋತ್ಸವಗಳು

## 2020 ಅಕ್ಟೋಬರ್ 16 ರಿಂದ 24 ರ ವರೆಗೆ

## ತಿರುಮಲೆ ಸ್ವಾಮಿಯವರ ಆಲಯದೊಳಗೆ ಏಕಾಂತವಾಗಿ ನಡೆದ ವಾರ್ಷಿಕ ಬ್ರಹ್ಮೋತ್ಸವಗಳಲ್ಲಿ ಸ್ವಾಮಿಯವರಿಗೆ ನಡೆದ ವಿವಿಧ ವಾಹನ ಸೇವೆಗಳ ದೃಶ್ಯಮಾಲಿಕೆ







ಧ್ವಜಾರೋಹಣ, ದೊಡ್ಡಶೇಷವಾಹನ ಸೇವೆಯಲ್ಲಿ ಪಾಲ್ಗೊಂಡ ತಿ.ತಿ.ದೇ. ಉನ್ನತಾಧಿಕಾರಿಗಳು



ತಿರುಮಲೆಗೆ ಸೇರಿದ ಶ್ರೀ ವಿಲ್ಲಿಪುತ್ತೂರು ಗೋದಾದೇವಿಯ ಹೂಮಾಲೆಗಳು



ಆಂಧ್ರಪ್ರದೇಶದ ರಾಜ್ಯದ ಮುಖ್ಯಮಂತ್ರಿಯವರು ಗೌ॥ ಶ್ರೀ.ವೈ.ಎಸ್. ಜಗನ್‌ಮೋಹನ್‌ರೆಡ್ಡಿ ಯವರು ಸ್ವಾಮಿಯವರ ಗರುಡವಾಹನ ಸೇವೆಯಲ್ಲಿ ಪಾಲ್ಗೊಂಡ ದೃಶ್ಯ



ಆಂಧ್ರಪ್ರದೇಶ್ ರಾಷ್ಟ್ರಮುಖ್ಯಮಂತ್ರಿಯವರು ಗೌ॥ ಶ್ರೀ ವೈ.ಎಸ್. ಜಗನ್‌ಮೋಹನ್‌ರೆಡ್ಡಿ ಯವರು ಸ್ವಾಮಿಯವರಿಗೆ ರಾಜ್ಯದ ವತಿಯಿಂದ ರೇಷ್ಮೆ ವಸ್ತ್ರಗಳನ್ನು ಸಮರ್ಪಿಸುತ್ತಿರುವ ದೃಶ್ಯ



ತಿರುಮಲೆಯಲ್ಲಿ ನಡೆದ 'ಸುಂದರಕಾಂಡ ಪಾರಾಯಣ' ದಲ್ಲಿ ಆಂಧ್ರ, ಕರ್ನಾಟಕ ರಾಷ್ಟ್ರಮುಖ್ಯಮಂತ್ರಿ ಯವರು ಗೌ॥ ಶ್ರೀ ವೈ.ಎಸ್. ಜಗನ್‌ಮೋಹನ್‌ರೆಡ್ಡಿ ಯವರು, ಗೌ॥ ಶ್ರೀ ಬಿ.ಎಸ್. ಯಡಿಯೂರಪ್ಪ ರವರು ಪಾಲ್ಗೊಂಡ ದೃಶ್ಯ



ಆಂಧ್ರಪ್ರದೇಶ್ ರಾಷ್ಟ್ರ ಮುಖ್ಯಮಂತ್ರಿಯವರು ಗೌ॥ ಶ್ರೀ ವೈ.ಎಸ್. ಜಗನ್‌ಮೋಹನ್‌ರೆಡ್ಡಿ ಯವರಿಗೆ ತಿ.ತಿ.ದೇ. ಧರ್ಮಕರ್ತ ಮಂಡಳಿ ಅಧ್ಯಕ್ಷರು ಶ್ರೀ ವೈ.ವಿ.ಸುಬ್ಬಾರೆಡ್ಡಿ ಯವರು ಸ್ವಾಮಿಯವರ ಪ್ರಸಾದವನ್ನು ನೀಡುತ್ತಿರುವ ದೃಶ್ಯ



ತಿರುಮಲೆಯಲ್ಲಿ ನಡೆದ 'ಸುಂದರಕಾಂಡ ಪಾರಾಯಣ' ದಲ್ಲಿ ಆಂಧ್ರ, ಕರ್ನಾಟಕ ರಾಷ್ಟ್ರಮುಖ್ಯಮಂತ್ರಿ ಯವರು ಗೌ॥ ಶ್ರೀ ವೈ.ಎಸ್. ಜಗನ್‌ಮೋಹನ್‌ರೆಡ್ಡಿ ಯವರು, ಗೌ॥ ಶ್ರೀ ಬಿ.ಎಸ್. ಯಡಿಯೂರಪ್ಪ ರವರು ಪಾಲ್ಗೊಂಡ ದೃಶ್ಯ

## ಭಗವದ್ಗೀತೆ

ಪಾಂಚಜನ್ಯಂ ಹೃಷೀಕೇಶೋ

ದೇವದತ್ತಂ ಧನಂಜಯಃ।

ಪೌಂಡ್ರಂ ದಧ್ಮೌಮಹಾಶಂಖಂ

ಭೀಮ ಕರ್ಮಾವೃಕೋದರಃ

ಅಧ್ಯಾಯ - 1, ಶ್ಲೋಕ - 15



## ತಾತ್ಪರ್ಯ

ಕೃಷ್ಣನು ಪಾಂಚಜನ್ಯವನ್ನೂ ಅರ್ಜುನನು ದೇವ ದತ್ತವನ್ನೂ ಶತ್ರುಗಳನ್ನು ಎದೆಗೆಡಿಸುವ ಭೀಮನು ಪೌಂಡ್ರವೆಂಬ ದೊಡ್ಡ ಶಂಖವನ್ನೂ ಊದಿದರು.



ಶ್ರೀ ಮಧುರಾಪುರಿ ವಿಹಾರಿಣಿ ಶ್ರೀ ರಾಜ ಮಾತಂಗಿ ಮಾಂಪಾಹಿ

ಪಾಮರಜನಪಾಲಿನಿ ಕಾಮದಹನ ಮೋಹಿನಿ ನಾಮರೂಪ ವಿಮರ್ಶಿನಿ ನಟೇಶ್ವರಿ ಜಗಜ್ಜನನಿ

ಪಾಂಡ್ಯ ರಾಜ ಪೂಜಿತಾಬ್ಜ ಪದಯುಗಳೇ ವ್ರೋಡ್ಯಾಣ ಪೀಠಸ್ಥಿತ ಸಕಲಕಲೇ॥ ಪಾಟಲೀಕುಸುಮ ಪ್ರಿಯೇ

ಪದ್ಮರಾಗ ಸಮಪ್ರಭೇ॥ ಸೋಮ ಸುಂದರೇಶ್ವರ ಪ್ರಿಯೇ ಗುರು ಗುಹ ಸಮುದ್ಭವೇ

ದೀಕ್ಷಿತರು



**ಶ್ರೇಯಾಸ್ಸೂತಿಂ ಸಕೃದಪಿ ದಯೇ ಸಂಮತಾಂ ಯ ಸ್ಸಖೀಂ ತೇ ಶೀತೋದಾರಾಮಲಭತ ಜನಃ ಶ್ರೀನಿವಾಸಸ್ಯ ದೃಷ್ಟಿಮ್।**
**ದೇವಾದೀನಾ ಮಯ ಮನೃಣತಾಂ ದೇಹವತ್ವೇಪಿ ವಿಂದನ್ ಬಂಧಾನ್ಮುಕ್ತೋ ಬಲಿಭಿರನಘೈಃ ಪೂರ್ಯತೇ ತತ್ಪ್ರಯುಕ್ತೈಃ ॥ ೪೯॥**

ಹಿಂದಿನ ಪದ್ಯದಲ್ಲಿ ವೇದದಲ್ಲಿ ಜ್ಞಾನಕ್ಕೆ ಪ್ರಾಧಾನ್ಯವನ್ನು ಕೊಟ್ಟು ಸ್ಮೃತಿಯಿಲ್ಲದೆ ಪರವಶನಾದ ಜೀವನಿಗೂ ಅಂತಿಮಸ್ಮೃತಿಯನ್ನುಂಟು ಮಾಡುವುದೂ ದಯಾ ಕಾರ್ಯವೇ ಎಂದು ನಿರೂಪಿಸಿ, ಈ ಪದ್ಯದಲ್ಲಿ ಪರಮಪುರುಷನಾದ ಶ್ರೀನಿವಾಸನ ಕಟಾಕ್ಷವು ಸರ್ವಕರ್ಮಬಂಧ ವಿಮೋಚಕವೆಂದೂ, ಮೋಕ್ಷ ರೂಪವಾದ ಪರಮ ಪುರುಷಾರ್ಥಪ್ರದವೆಂದೂ , ಅಂತಹ ಪುರುಷಾರ್ಥ ಸಿದ್ಧಿಗೆ ದಯೆಯೇ ಮೂಲಕಾರಣವೆಂದೂ ತಿಳಿಸಿ ದಯೆಯ ಹಿರಿಮೆಯನ್ನು ವರ್ಣಿಸುತ್ತಾರೆ.

ಎಲೈ ದಯೆಯೇ! ಪರಮಪುರುಷನಾದ ಶ್ರೀನಿವಾಸನ ದೃಷ್ಟಿಯು ನಿನ್ನಂತೆಯೇ ಸ್ವಭಾವದಿಂದಲೇ ಕೋಮಲವಾದುದು; ಸಕಲ ಪುರುಷಾರ್ಥಪ್ರದವಾದುದು. ಆದರಿಂದಲೇ, ನಿನ್ನ ಪ್ರೇರಣೆಯಿಂದ ಅಂತಹ ಕಟಾಕ್ಷವು ಯಾವನ ಮೇಲೆ ಬೀಳುವುದೋ ಅವನು ದೇವಋಣ ಋಷಿಋಣ ಮತ್ತು ಪಿತೃ ಋಣಗಳಿಂದ ಶರೀರವಿರುವಾಗಲೇ ಮುಕ್ತನಾಗುವನು. ಬಂಧಮುಕ್ತನಾದುದರಿಂದಲೇ ಸಾಯುಜ್ಯರೂಪವಾದ ಪರಮಾತ್ಮಾನು ಭವರೂಪವಾದ ಆನಂದವನ್ನು ಪಡೆದು ಪರಿಪೂರ್ಣನೂ ನಿತ್ಯ ಸುಖಿಯೂ ಆಗುವನು.

ಮನುಷ್ಯನು ದೇವಾದಿಋಣತ್ರಯಗಳನ್ನು ನೀಗಿಕೊಳ್ಳುವುದಕ್ಕಾಗಿಯೂ 'ಶ್ರುತಿಸ್ಮೃತೀ ಮಮೈವಾಜ್ಞಾ.." ಎಂಬಂತೆ ಪರಮಾತ್ಮನ ಆಜ್ಞೆಯನ್ನು ಉಲ್ಲಂಘಿಸದೆ ಇರುವುದಕ್ಕಾಗಿಯೂ ಕರ್ಮಗಳನ್ನು ಮಾಡಲೇ ಬೇಕು; ಕರ್ಮಗಳನ್ನು ಮಾಡಿದ ಮೇಲೆ ಅವುಗಳ ಫಲಗಳನ್ನು ಅನುಭವಿಸಲೇ ಬೇಕು; ಫಲಗಳನ್ನು ಅನುಭವಿಸುವುದಕ್ಕಾಗಿ ಪುನರ್ಜನ್ಮವನ್ನು ಪಡೆಯಲೇ ಬೇಕು. ಜನ್ಮವನ್ನು ಪಡೆದ ಮೇಲೆ ಋಣವಿಮೋಚನೆಗಾಗಿ ಮತ್ತೆ ಕರ್ಮಗಳನ್ನು ಮಾಡಲೇ ಬೇಕು. ಹೀಗೆ ಜನ್ಮ ಕರ್ಮಗಳ ಶೃಂಖಲೆಯು ಪರಂಪರೆಯಾಗಿ ಪ್ರವಹಿಸುತ್ತಿರುವಲ್ಲಿ ಜೀವನಿಗೆ ಮುಕ್ತಿ ಎಂಬುದು ಹೇಗೆ ಸಾಧ್ಯ? ಅಲ್ಲದೆ , ಹಿಂದಿನ ಪದ್ಯದಲ್ಲಿ ಹೇಳಿರುವಂತೆ ವೇದದ ಕರ್ಮ ಭಾಗಕ್ಕೆ ಪ್ರಾಶಸ್ತ್ಯವನ್ನು ಕೊಡದೆ ಜ್ಞಾನಭಾಗಕ್ಕೆ ಮಾತ್ರ ಪ್ರಾಶಸ್ತ್ಯವನ್ನು ಕೊಟ್ಟರೆ ತನ್ನ ಆಜ್ಞೆಗೇ ವಿರೋಧವಾಗುವುದಲ್ಲವೆ? ಅಂದರೆ ಯಾರು ಯಾರು ಯಾವ ಯಾವ ಫಲವನ್ನು ಅಪೇಕ್ಷಿಸಿ ಎಂತಹ ಕರ್ಮಗಳನ್ನು ಮಾಡುವರೋ ಅವರವರು ಅಂತಂತಹ ಫಲಗಳನ್ನು ಅನುಭವಿಸುತ್ತಾರೆ. ಸಂಸ್ಕಾರ ವಿಶೇಷದಿಂದಲೂ ಭಗವಂತನ ಅವ್ಯಾಜವಾದ ದಯೆಯಿಂದಲೂ ಯಾವನಿಗೆ ಭಗವಂತನಲ್ಲಿ ಪ್ರಪತ್ತಿಯುಂಟಾಗುವುದೋ, ಅವನು ಮಾತ್ರ ಭಗವತ್ಕಟಾಕ್ಷಕ್ಕೆ ಪಾತ್ರನಾಗಿ ಜನ್ಮ ಕರ್ಮಾದಿ ಬಂಧನಗಳಿಂದ ಮುಕ್ತನಾಗುವನು; ಸಶರೀರಿಯಾಗಿಯೇ ಋಣ ಮುಕ್ತನಾಗುವನು ; ಶರೀರವು ಗಲಿತವಾದ ಮೇಲೆ ಸಾಯುಜ್ಯವನ್ನು ಹೊಂದಿ ಪರಮಾನಂದಾನುಭವ ನಿರತನಾಗುವನು. ಆದುದರಿಂದ ಯಾವ ವಿರೋಧವು ಇಲ್ಲವೆಂದೂ ಶಾಸ್ತ್ರಜ್ಞರ ಅಭಿಮತ.

ಈ ರೀತಿಯಾಗಿ ಈ ಪದ್ಯದಲ್ಲಿಯೂ ಪರಮಪುರುಷಾರ್ಥ ಪ್ರದಾಯಕವಾದ ಶಾಸ್ತ್ರ ಪ್ರದಾನವೇ ಸೂಚಿಸಿದಂತಾಯಿತು.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ

ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಶ್ರೀ ಶಾರ್ವರಿನಾಮ ಸಂವತ್ಸರ
ಅಧಿಕ - ನಿಜಆಶ್ವಯುಜ ಮಾಸ ಸಂಚಿಕೆ

ಸಂಪುಟ - 51 ಅಕ್ಟೋಬರ್ 2020 ಸಂಚಿಕೆ - 5



**ಗೌರವ ಸಂಪಾದಕರು**
ಡಾ|| ಕೆ.ಎಸ್. ಜವಹರ್ ರೆಡ್ಡಿ, ಐ.ಎ.ಎಸ್.,
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಆಚಾರ್ಯ.ಕೆ.ರಾಜಗೋಪಾಲನ್, ಪಿ.ಎಚ್.ಡಿ.

**ಸಂಪಾದಕರು**
ಡಾ|| ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು ,ಎಮ್.ಎ.
ವಿಶೇಷಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

## ವಿಷಯಸೂಚಿಕೆ


| | | |
|---|---|---|
| ಸಂಪಾದಕೀಯ | | 6 |
| ದುರ್ಗಾ ಸಪ್ತಶತಿ | - ವೆಂಕಟರಾಘವನ್ .ಎಸ್. | 7 |
| ಸಂಸ್ಕೃತ ಕಲಿಯೋಣ | -ಮಹಾಮಹೋಪಧ್ಯಾಯ ಕಾಶಿ ಕೃಷ್ಣಾಚಾರ್ಯ | 12 |
| ಬ್ರಹ್ಮಗಿರಿಯ ತಲಕಾವೇರಿ ಕ್ಷೇತ್ರದಲ್ಲಿ ತೀರ್ಥೋದ್ಭವ | - ಡಾ|| ಬಿ.ಎಸ್. ಪಾರಿಜಾತ | 13 |
| ಕನಕದಾಸರ ಕಾರ್ಪಣ್ಯ | - ಡಾ|| ವಾಸುದೇವ ಅಗ್ನಿಹೋತ್ರಿ | 17 |
| ಭಕ್ತ ಪ್ರಹ್ಲಾದನ ದಿವ್ಯ ಮಹಿಮೆಗಳು | - ಡಿ. ಎಸ್. ಬದ್ರಿನಾಥ್ | 23 |
| ಪದ ಬಂಧ | - ಪಿ. ಜಿ. ಶ್ರೀನಿವಾಸನ್ | 26 |
| ಮಾತೃಶಕ್ತಿಯ ದಿವ್ಯಾರಾಧನೆಯ ಪರ್ವ | - ಡಾ|| ಗುರುರಾಜ್ ಪೋಶೆಟ್ಟಿ ಹಳ್ಳಿ | 51 |
| ಮೂರು ನರಕದ್ವಾರಗಳು | - ಡಿ.ಎಸ್. ಭೂಮಿಕ | 60 |
| ಮುಳಬಾಗಿಲಿನಿಂದ ಹೊಮ್ಮಿದ | | |
| ಕನ್ನಡ ದಾಸಸಾಹಿತ್ಯ | - ಡಾ|| ಅರಳು ಮಲ್ಲಿಗೆ ಪಾರ್ಥಸಾರಥಿ | 61 |
| ವ್ಯಾಧಿಗಳ ನಿರ್ಮೂಲನಕ್ಕೆ ಚಿತ್ರಮೂಲ | - ಶ್ರೀಮತಿ | 66 |
| ಕನಕಧಾರ ಸ್ತೋತ್ರಗಳು | - ಡಾ|| ಸುಮನ ಬದರೀನಾಥ್ | 68 |
| ಮೊದಲಕಲ್ಲು ಶ್ರೀ ಶೇಷದಾಸರು | - ಡಾ|| ರಾಮಚಂದ್ರದಾಸ್ ಸಿ.ಜೆ. | 73 |


ಮುಖಚಿತ್ರ - ಶ್ರೀದೇವಿ ಭೂದೇವಿ ಸಮೇತ ಶ್ರೀ ಮಲೆಯಪ್ಪ ಸ್ವಾಮಿಯವರು
ಹಿಂಬದಿಚಿತ್ರ - ಹಂಸವಾಹನದ ಮೇಲೆ ವೀಣಾಪಾಣಿಯಾಗಿ ಶ್ರೀ ಮಲೆಯಪ್ಪ ಸ್ವಾಮಿಯವರು

ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

ಇತರ ವಿವರಗಳಿಗೆ
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@tirumala.org
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org ಮೂಲಕ ವೀಕ್ಷಿಸಬಹುದು.

| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿ ವಾರ್ಷಿಕ ಚಂದಾ | ರೂ. 850/- |

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

**ಸಂಪಾದಕೀಯ**

# ಶರನ್ನವರಾತ್ರಿ – ನವರಾತ್ರಿ ಬ್ರಹ್ಮೋತ್ಸವ

ಈ ಶರನ್ನವರಾತ್ರಿ ದೇಶದಾದ್ಯಂತ ಸಡಗರ ಸಂಭ್ರಮದಿಂದ ಆಚರಿಸಿಕೊಳ್ಳುವಂತಹಾ ಪ್ರಮುಖವಾದ ಹಬ್ಬ. ಈ ಪರ್ವದಿನಗಳು ನವರಾತ್ರಿ. ದಸರಾ ಎಂಬ ಹೆಸರುಗಳಿಂದ ಕರೆಯಲ್ಪಡುತ್ತಿದೆ. ಅನೇಕ ಪುರಾಣ ಪ್ರಸಂಗಗಳು ಈ ಹಬ್ಬವನ್ನು ಆಚರಿಸಿಕೊಳ್ಳುವುದಕ್ಕೆ ಪ್ರೇರಕವಾಗಿ ನಿಲ್ಲುತ್ತವೆ. ಮೊದಲಿಗೆ ದುರ್ಗಾದೇವಿ ಮಹಿಷಾಸುರನನ್ನು ಸಂಹಾರ ಮಾಡಿದ್ದರ ಕುರುಹು ಹಾಗೇ ರಾಮನು ದಶಮುಖನ ಸಂಹಾರ ಮಾಡಿದ್ದರ ಕುರುಹು ಹಾಗೇ ಅನೇಕ ಘಟನೆಗಳ ಪ್ರೇರಣೆಯಿಂದ ಈ ಹಬ್ಬವನ್ನು ಆಚರಿಸುವುದು ವಿಶೇಷವಾಗಿದೆ.

ಈ ಶರನ್ನವರಾತ್ರಿಯಲ್ಲಿ ಒಂಬತ್ತು ದಿನಗಳ ಕಾಲ ದುರ್ಗಾದೇವಿಯನ್ನು ಸ್ಮರಿಸಿ ಆಕೆಯನ್ನು ಸಂತೃಪ್ತಿಗೊಳಿಸಿ ಆ ಜಗಜ್ಜನನಿಯ ಕೃಪೆಗೆ ಪಾತ್ರರಾಗುವುದೇ ಮುಖ್ಯ ಉದ್ದೇಶ. ದುರ್ಗಾದೇವಿಗೆ ದಿನಕ್ಕೊಂದು ರೀತಿಯ ಅಲಂಕಾರ. ದಿನಕ್ಕೊಂದು ಬಗೆಯ ನೈವೇದ್ಯ, ಹೀಗೆ ಆ ಲೋಕಮಾತೆಗೆ ಪ್ರೀತಿಕರವಾದವುಗಳನ್ನು ಆಚರಿಸಿ ನಮಗೆ ಶತ್ರುಭಯ ನಾಶ. ಸರ್ವತ್ರ, ವಿಜಯಾಕಾಂಕ್ಷೆಯನ್ನು ಬೇಡುತ್ತಾ. ಹಾಗೆಯೇ ನಮ್ಮೊಳಗಿರುವ ಆಸುರೀಭಾವವನ್ನು ತೊಡೆದು ಹಾಕಿ ಎಲ್ಲೆಡೆ ಸರ್ವರಿಗೂ ಸದ್ಬುದ್ಧಿ, ಸನ್ನಡತೆ, ಸತ್ಪ್ರವರ್ತನೆ ಸತ್ಸಂಗ, ಸಧ್ಭಾವನೆಯನ್ನು ಉಂಟು ಮಾಡುವ ಎಂದು ಹತ್ತು ಹಲವಾರು ರೀತಿಯಲ್ಲಿ ಸ್ಮರಿಸುವಂತಹಾ ವಿಶಿಷ್ಟವಾದ ಪರ್ವಕಾಲ. ಈ ಹಬ್ಬದಲ್ಲಿ ವಿಶೇಷವಾಗಿ ಕುಮಾರಿ ಪೂಜೆ ಅಥವಾ ಕನ್ಯಾ ಪೂಜೆ ವಿಶೇಷ ಮಹತ್ತ್ವ ಪಡೆದುಕೊಂಡಿದೆ. ಈ ಒಂಬತ್ತೂ ದಿನಗಳು ತನ್ಮೂಲಕ ದೇವಿಯ ಕೃಪೆಗೆ ಪಾತ್ರರಾಗಬೇಕು, ಅಥವಾ ಒಂಬತ್ತನೆಯ ದಿನ ಒಂಬತ್ತು ಜನ ಕುಮಾರಿಯರನ್ನು ಕರೆದು ಒಟ್ಟಿಗೇ ಪೂಜಿಸಬಹುದು. ಹೀಗೇ ಒಂಬತ್ತು ದಿನಗಳು ಸಂಭ್ರದಿಂದ ದೇವಿಯ ಪೂಜೆ ಮಾಡುವುದು, ಜೊತೆಗೆ ಹಲವಾರು ಕಡೆಗಳಲ್ಲಿ ಗೊಂಬೆಯನ್ನು ಕೂಡಿಸುವ ಪದ್ಧತಿಯಿದೆ. ಅನೇಕ ರೀತಿಯ ಗೊಂಬೆಗಳನ್ನು ಅಚ್ಚುಕಟ್ಟಾಗಿ , ಅಂದವಾಗಿ ಜೋಡಿಸಿ, ಪಟ್ಟದ ಗೊಂಬೆಗೆ ಅಲಂಕರಿಸಿ ಆ ಗೊಂಬೆಗಳಲ್ಲೇ ದೇವರುಗಳನ್ನು ಕಾಣುವಂತಹ ಅಪುರೂಪವಾದ ಹಬ್ಬ. ಇನ್ನು ಮೂಲಾ ನಕ್ಷತ್ರದಂದು ದೇವಿ ಸರಸ್ವತಿಗೆ ಪೂಜಿಸಿ, ವಿದ್ಯೆಯನ್ನು ಬೇಡುವುದು, ಹಾಗೇ ದುರ್ಗಾಷ್ಟಮಿಯ ದಿನ ದುರ್ಗಾದೇವಿಯ ವಿಶೇಷ ಆರಾಧನೆ ಮಾಡಿ, ಆಕೆ ಮಹಿಷನನ್ನು ಕೊಂದಂತೆ ನಮ್ಮ ಸುತ್ತಲೂ ಇರುವ ದುಷ್ಟ ಶಕ್ತಿಗಳನ್ನು ಸಂಹಾರ ಮಾಡು ಎಂದು ಬೇಡಿಕೊಳ್ಳುವುದು. ಮಹಾನವಮಿಯಂದು ಆಯುಧಗಳನ್ನು ಹಾಗೇ ವಾಹನಗಳ ಪೂಜೆ ಮಾಡುತ್ತೇವೆ. ಹೀಗೆ ಒಂಬತ್ತು ದಿನಗಳ ಕಾಲ ವೈಭವದಿಂದ ಪೂಜೆಯನ್ನು ಮಾಡಿ ಹತ್ತನೆಯ ದಿನ ವಿಜಯದಶಮಿ ಆಚರಣೆ ಮಾಡುವುದು ಸಂಪ್ರದಾಯ.

ಈ ಒಂಬತ್ತೂ ದಿನಗಳ ಕಾಲ ದುರ್ಗಾರಾಧನೆಯ ನಂತರ ಹತ್ತನೆಯ ದಿನ ವಿಜಯದಶಮಿಯನ್ನು ಆಚರಿಸಿದರೆ ಎಲ್ಲಾ ಕಾರ್ಯಗಳಲ್ಲೂ ಜಯ ಕಟ್ಟಿಟ್ಟಬುತ್ತಿ ಎಂಬ ನಂಬಿಕೆ. ಆದ್ದರಿಂದಲೇ ಮುಖ್ಯ ಕಾರ್ಯಗಳನ್ನು ವಿಜಯದಶಮಿಯಂದೇ ಆರಂಭಿಸುತ್ತೇವೆ.

ವಿಜಯದಶಮಿಯಂದು ಶಮೀ ವೃಕ್ಷಕ್ಕೆ ಪೂಜೆ ಮಾಡುವುದು ಪುರಾಣ ಕಾಲದಿಂದಲೂ ಅನೂಚಾನವಾಗಿ ನಡೆದುಕೊಂಡು ಬಂದಿರುವಂತಹಾ ಪದ್ಧತಿ. ಶಮೀ ವೃಕ್ಷ ಅತ್ಯಂತ ಶ್ರೇಷ್ಠವಾದ ವೃಕ್ಷವಾಗಿದ್ದು ಇದರ ಪೂಜೆಯಿಂದ ಆಧ್ಯಾತ್ಮಿಕವಾದ ಅಭಿವೃದ್ಧಿ, ರೋಗ ವಿನಾಶ ಖಂಡಿತ ಎಂದು ಹಿರಿಯರು ನಮಗೆ ಮಾರ್ಗದರ್ಶನ ನೀಡಿದ್ದಾರೆ. ಅಂತೆಯೇ ವಿಜಯದಶಮಿಯ ಸಂಧ್ಯಾಕಾಲದಲ್ಲಿ ಶಮೀ ವೃಕ್ಷಕ್ಕೆ ಪೂಜೆ ಮಾಡುತ್ತೇವೆ. ಕೊನೇ ಪಕ್ಷ ಶಮೀ ಪತ್ರ ಗಳನ್ನಾದರೂ ದೇವರ ಮುಂದೆ ಇರಿಸಿ ಪೂಜಿಸುವುದು ಶ್ರೇಯಸ್ಕರವಾಗಿದೆ.

ಇನ್ನು ಸಪ್ತಗಿರೀಶನ ಸಾನ್ನಿಥ್ಯದಲ್ಲಿ ಈ ನವರಾತ್ರಿಗೆ ಎಲ್ಲಿಲ್ಲದ ವಿಶೇಷತೆ ತಂದು ಕೊಡುವುದು 'ಬ್ರಹ್ಮೋತ್ಸವಗಳು, ಈಗಾಗಲೇ ಅಧಿಕ ಮಾಸದ ಬ್ರಹ್ಮೋತ್ಸವಗಳು ನಡೆದಿದೆ. ಎಂದಿನಂತೆ ನವರಾತ್ರಿಯಲ್ಲಿ ನಡೆಯಲಿರುವ ಬ್ರಹ್ಮೋತ್ಸವ ಹೊಸ ಶೋಭೆ ತಂದು ಕೊಡುತ್ತದೆ. ಏಕೆಂದರೆ ಸ್ವತಃ ದೇವಾನುದೇವತೆಗಳೆಲ್ಲಾ ಈ ಕಲಿಯುಗ ಭೂವೈಕುಂಠಕ್ಕೆ ಆಗಮಿಸಿ ಈ ಉತ್ಸವದಲ್ಲಿ ಪಾಲ್ಗೊಳ್ಳುತ್ತಾರಾದ್ದರಿಂದ ಈ ಉತ್ಸವಗಳು ಅತ್ಯಂತ ಪವಿತ್ರವೆಂದನಿಸಿವೆ. ಶ್ರೀನಿವಾಸನು ಬೇಡಿದ ವರವನು ನೀಡುವ "ಕಲ್ಪವೃಕ್ಷ", ತನ್ಮಯಿಸಿ ಸ್ತುತಿಸುವವರಿಗೆ ಆನಂದರೂಪ. ಇಂತಹ ಸ್ವಾಮಿಯವರ ಹೃದಯದಲ್ಲಿ "ವ್ಯೂಹಲಕ್ಷ್ಮಿ" ಎಂಬ ಹೆಸರಿನಿಂದ ಮಹಾಲಕ್ಷ್ಮೀ ನೆಲೆಸಿದ್ದಾಳೆ. ಅದಕ್ಕೆ ಆತನು ಶ್ರೀನಿವಾಸನಾದನು. ಆದ್ದರಿಂದ ತಿರುಮಲೆಯಲ್ಲಿ ಸ್ವಾಮಿಯವರಿಗೆ ಯಾವುದೇ ಅರ್ಚನೆ ನಡೆದರೂ ಆ ನಂತರವೇ ಹೃದಯ ಲಕ್ಷ್ಮಿಗೆ ಅರ್ಚನೆ ನಡೆಯುತ್ತದೆ. ಇದು ತಿರುಮಲೆ ಕ್ಷೇತ್ರದಲ್ಲಿರುವ ಸಂಪ್ರದಾಯ ಶರನ್ನವರಾತ್ರಿಯಲ್ಲಿ ಸ್ವಾಮಿಯವರು ಅಮ್ಮನವರು ಏಕವಾಗಿರುವ ವೆಂಕಟಾಚಲ ಕ್ಷೇತ್ರದಲ್ಲಿ ನಡೆಯುವ ನವರಾತ್ರಿ ಬ್ರಹ್ಮೋತ್ಸವಗಳನ್ನು ದರ್ಶಿಸಿದರೆ ಸ್ವಾಮಿ ಮತ್ತು ಅಮ್ಮನವರನ್ನು ದರ್ಶಿಸಿದ ಫಲವನ್ನು ಪಡೆಯುವರು. ಕ್ಷೇತ್ರ ಪವಿತ್ರತೆಗೆ ಯಾವುದೇ ರೀತಿಯಲ್ಲಿ ಭಂಗವುಂಟಾಗದೆ. ತ್ರಿಕರಣ ಶುದ್ಧಿಯಾಗಿ ಈ ಕ್ಷೇತ್ರ ಸಂಪ್ರದಾಯಗಳನ್ನು ಆಚರಿಸೋಣ. ಪರಂಧಾಮನಿಗೆ ನಡೆಯುವ ಬ್ರಹ್ಮೋತ್ಸವಗಳಲ್ಲಿ ಪಾಲ್ಗೊಂಡು, ನಿತ್ಯಕಲ್ಯಾಣ ಚಕ್ರವರ್ತಿಯಾದ "ಸಪ್ತಗಿರೀಶ" ನ ಸಂಪೂರ್ಣ ಅನುಗ್ರಹವನ್ನು ಪಡೆಯೋಣ.

'ಶ್ರೀ ವೆಂಕಟೇಶ ಚರಣೌಶರಣಂ ಪ್ರಪದ್ಯೆ'



# ದುರ್ಗಾಸಪ್ತಶತಿ

## ಓಂ ದುಂ ದುರ್ಗಾಯೇ ನಮಃ

- ವೆಂಕಟರಾಘವನ್.ಎಸ್
9845793917

ಮಮ ಸ್ಮರಣಂ ಮಾತ ಬ್ರಹ್ಮಾಂಡನಾಯಕಿ ತವ ಚರಣಂ ಶರಣಂ ಶರಣಂ।
ಯೋಗಾ ಮಾಯೇತಿ ಸ್ಥಿತೇ ಮಾತ ತವ ಚರಣಂ ಶರಣಂ ಶರಣಂ॥
ಪ್ರಕೃತಿ ಮೂಲಾಧಾರ ಜಗನ್ಮಾತ ಈಶ್ವರಿ ಜಗದಂಬಾ ತವಚರಣಂ ಶರಣಂ।
ಭುಕ್ತಿ ಪ್ರದಾಯಿನಿ ಪಾರ್ವತಿ ದೇವಿ ಮಾತ ಭವಾನೀ ತವ ಚರಣಂ ಶರಣಂ ॥
ಅಧಿಷ್ಠಾತ್ರಿ ದೇವಿ ಅಪರ್ಣಾ  ಆದಿ ಪರಾಶಕ್ತಿ ತವಚರಣಂ ಶರಣಂ।
ಜಯ ಜಯಂತಿ ಮಾತ ಕೂಷ್ಮಾಂಡಾದೇವೀ ತವ ಚರಣಂ ಶರಣಂ ॥
ಭಾಗ್ಯ ಪ್ರದಾಯಿನಿ ಶ್ರೀದೇವಿ ಮಹಾಲಕ್ಷ್ಮಿ ತವ ಚರಣಂ ಶರಣಂ ।
ವಿದ್ಯಾದೇವಿ ಮಹಾವಾಣೀ ಶಾಕಾಂಬರಿ ದೇವೀ ತವ ಚರಣಂ ಶರಣಂ ॥
ಖಡ್ಗ ಧಾರಿಣಿ ಕಾಳಿಕಾ ದೇವಿ ಕಾತ್ಯಯನಿ ತವ ಚರಣಂ ಶರಣಂ ।
ವರ ಪ್ರದಾಯಿನಿ ವೈಷ್ಣವಿ ಸಿಂಹವಾಹಿನಿ ತವ ಚರಣಂ ಶರಣಂ ॥
ರಾಕ್ಷಸ ಸಂಹಾರಿಣಿ ಚಾಮುಂಡಿ ಮಂಗಳ ಚಂಡಿಕಾ ತವಚರಣಂ ಶರಣಂ।
ಶರಣು ದೇವೀ ಮಹಿಷಾಸುರಮರ್ದಿನಿ ಶರಣಂ ಶರಣಂ ಶರಣಂ ಮಮ ॥

ಸಕಲ ಚರಾಚರ ಸೃಷ್ಠಿ  ನಡೆಯಲು ಶಕ್ತಿ ಅತ್ಯಗತ್ಯ. ಅನಾದಿಯಿಂದ ಆದಿ ಪರಾಶಕ್ತಿ ಸಕಲ ಚರಾಚರ ಸೃಷ್ಟಿಗೆ ಮೂಲ. ಅನಾದಿ ಅಂದರೆ ಎಲ್ಲರಿಗಿಂತ ಮೊದಲು. ಆದಿ ಶಕ್ತಿ ಜಗತ್ತಿನ ಸೃಷ್ಟಿಕರ್ತೆ, ಸ್ಥಿತಿ ನಿಯಂತ್ರಣಕಾರಿಣಿ ಮತ್ತು ವಿನಾಶ ಕಾರಿಣಿ. ದುರ್ಗಾ ಎಂದರೆ ದುರ್ಗತಿಯ ನಾಶ ಮಾಡುವ ಶಕ್ತಿ ದೇವತೆ. ಸತ್ವರಜಸ್ತಮೋಗುಣಗಳು ಪ್ರಕೃತಿ ಲಕ್ಷಣಗಳು. ಮಾಯಾ, ಶಬಲ, ಬ್ರಹ್ಮ ರೂಪಿಣಿ, ಕಾರಣರೂಪಿ ಸತ್ವರ ಜಸ್ತಮೋಗುಣಗಳ ಸಾಮಾನ್ಯ ಸ್ಥಿತಿಯಿಂದ ಬ್ರಹ್ಮಾಂಡದಲ್ಲಿ ಹಮ್ಮಿರುವವರು ಆದಿಪರಾಶಕ್ತಿ ದೇವಿ. ಈ ಜಗತ್ತಿನಲ್ಲಿ ಜಗನ್ಮಾತೆ ಇಲ್ಲದೆ ಸ್ಥಳವೇ ಇಲ್ಲ. ದೇವಿ ಅಧಿಷ್ಠಾತ್ರಿ. ಓಂಕಾರ ರೂಪಿಣಿ, ಕ್ಲೀಂ ಕಾರ ವಾಸಿನಿ, ಜಗದೇಕ ಮೋಹಿನಿ ಮತ್ತು ಪ್ರಕೃತಿ ಸ್ವರೂಪಿಣಿ ದೇವಿ."ಯಾ ದೇವಿ ಸರ್ವ ಭೂತೇಷು ಶಕ್ತಿ ರೂಪೇಣ ಸಂಸ್ಥಿತಾ, ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ" ಜಗತ್ತಿನ ಸೃಷ್ಟಿಯಲ್ಲಿ ಮಾತೃ ಮೂರ್ತಿ ರೂಪದಲ್ಲಿರುವ ದೇವಿಗೆ ನಮಸ್ಕಾರ, ಮತ್ತೆ ಮತ್ತೆ ವಂದನೆಗಳು ಅಂಬಿಕೆ ಸತ್ಯ ಸ್ವರೂಪಿಣಿ, ಚರಾಚರ ಸೃಷ್ಟಿ ಜಗದಂಬೆ ಯಿಂದಲೇ ನಡೆಯುವುದು.ದೇವಿಯ ಕೃಪೆಯಿಂದಲೇ ಬ್ರಹ್ಮ, ವಿಷ್ಣು, ಮಹೇಶ್ವರರು ಸೃಷ್ಟಿ,  ಸ್ಥಿತಿ, ಲಯ ನಡೆಸುತ್ತಿದ್ದಾರೆ.ತಸ್ಯ ಕಾಚಿತ್ ಸ್ವತಃ ಸಿದ್ಧಾಶಕ್ತಿರ್ಮಾಯೇತಿ ವಿಶ್ರುತಾ! ಸ್ವತಃ ಸಿದ್ಧವಾಗಿ ಮಾಯಾಶಕ್ತಿಯಿಂದ ಜಗತ್ತು ದೇವಿಯಿಂದ ಸೃಷ್ಟಿಸ ಲಾಗಿದೆ. ದೇವಿಯೇ ಸಂಸಾರ ಬಂಧನಕ್ಕೆ ಕಾರಣ.ಬಂಧ ವಿಮುಕ್ತಿ ಕೊಡಲೂ ದೇವಿಯೇ ಕಾರಣ. ದೇವಿ ಪರಮ ವಿದ್ಯಾ ಸ್ವರೂಪಿಣಿ, ಸಕಲ ಶಕ್ತಿವಂತರನ್ನೂ ಶಾಸಿಸುವರು ಜಗದಂಬೆ.

## ಪುರಾಣದಲ್ಲಿ ದೇವಿ ಮಹಾತ್ಮೆ ವರ್ಣನೆ

ಈಶ್ವರೀಯ ತತ್ವ ಸರಳವಾಗಿ ಅರ್ಥವಾಗಲು ಶ್ರೀ ವೇದ ವ್ಯಾಸ ಮಹರ್ಷಿ ಹದಿನೆಂಟು ಮಹಾಪುರಾಣಗಳನ್ನು ರಚಿಸಿದರು. ಇದರಲ್ಲಿ ಒಂದು ಪುರಾಣ ಮಾರ್ಕಂಡೇಯ ಪುರಾಣ. ಮಾರ್ಕಂಡೇಯ ಪುರಾಣದಲ್ಲಿ ಶ್ರೀದೇವೀ ಮಹಾತ್ಮೆ ವರ್ಣಿಸಲಾಗಿದೆ. ಅದೇ ದುರ್ಗಾ ಸಪ್ತಶತಿ. ಸಪ್ತಶತಿ ಎಂದರೆ ಏಳುನೂರು. ದೇವಿ ಮಹಾತ್ಮೆ ಮೇಧಾಋಷಿ ಸುರತ ಮಹಾ ರಾಜರಿಗೆ, ಸಮಾಧಿ ಎನ್ನುವವರಿಗೆ ವಿವರಿಸಿದ್ದಾರೆ. ಅಧ್ಯಾಯ ಗಳಲ್ಲಿ ಏಳುನೂರು ಮಂತ್ರಗಳಿವೆ. ಹೀಗಾಗಿ ಈ ಗ್ರಂಥಕ್ಕೆ ದುರ್ಗಾ ಸಪ್ತಶತಿ ಎಂದು ಹೆಸರು. ಇದು ಮಂತ್ರ ಗರ್ಭಿತವಾದ ಅನುಷ್ಠಾತ್ಮಕ ಗ್ರಂಥ. ಶ್ರೀ ದುರ್ಗಾಚಂಡಿ ಎಂಬ ಹೆಸರಲ್ಲಿ ಶ್ರೀಮಾತೆಯನ್ನು ಪೂಜಿಸುವ ಮಂತ್ರಗಳು ಸಪ್ತಶತಿಯಲ್ಲಿವೆ. ಸಪ್ತಶತಿಯಲ್ಲಿನ ಮಂತ್ರಗಳು ಮೂಲ ಮಂತ್ರಗಳು.

## ದುರ್ಗಾಸಪ್ತಶತಿ ಅಧ್ಯಾಯಗಳು

ಸಪ್ತಶತಿ ಗ್ರಂಥದಲ್ಲಿ ಹದಿಮೂರು ಅಧ್ಯಾಯಗಳಿವೆ ಮತ್ತು ಏಳುನೂರು ಶ್ಲೋಕಗಳಿವೆ. ಮೊದಲನೆಯ ಅಧ್ಯಾಯಪ್ರಥಮ ಚರಿತ್ರ, ಎರಡು, ಮೂರು ನಾಕು ಸೇರಿ ಮಧ್ಯಮ ಚರಿತ್ರ, ಐದ ರಿಂದ ಹದಿಮೂರನೆ ಅಧ್ಯಾಯಗಳು ಉತ್ತರ ಚರಿತ್ರೆಯಾಗಿ ವಿಭ ಜಿಸಲಾಗಿದೆ. ಸಪ್ತಶತಿ ಪಾರಾಯಣ ಮುನ್ನ ದೇವಿ ಪ್ರಾರ್ಥನೆ, ದುರ್ಗ ಅಷ್ಟೋತ್ತರ, ದೇವಿಸ್ತುತಿ, ದೇವ್ಯಾಃ ಕವಚ, ಅರ್ಗಲಾ ಸ್ತೋತ್ರಮ್, ಕೀಲಕಂ, ವೇದೋಕ್ತಂ ರಾತ್ರಿ ಸೂಕ್ತಮ್, ತಂತ್ರೋಕ್ತಂ ರಾತ್ರಿ ಸೂಕ್ತಮ್, ಸಪ್ತಶತಿನ್ಯಾಸಃ ಮಂತ್ರಗಳನ್ನು ಉಚ್ಚರಿಸಿ, ಸಂಕಲ್ಪ ಮಾಡಿಕೊಂಡು ಸಪ್ತಶತಿ ಅಧ್ಯಾಯಗಳ ಪಾರಾಯಣ ಮಾಡಬೇಕು. ಪಾರಾಯಣ ಮಾಡುವ ಮುನ್ನ, ಧೂಪ ನೈವೇದ್ಯವ ಮಾಡಿ, ಅಕ್ಷತೆ ಕೈಯಲ್ಲಿ ಹಿಡಿದು ದೇವಿಯ ಪ್ರಾರ್ಥನೆ ಮಾಡಿ ಪಾರಾಯಣ ಆರಂಭ ಮಾಡಬೇಕು. ಪಾರಾಯಣ ನಂತರ ಕೈಯಲ್ಲಿ ಇಟ್ಟುಕೊಂಡ ಅಕ್ಷತೆ ಕಾಳು ತಮ್ಮ ತಲೆಯ ಮೇಲೆ ಧರಿಸಬೇಕು ಮತ್ತು ಕುಟುಂಬ ವರ್ಗದ ವರಿಗೆ ಕೊಡಬೇಕು. ಅನುದಿನ ಪಾರಾಯಣದ ನಂತರ ದೇವಿಗೆ ನೈವೇದ್ಯ ಸಮರ್ಪಿಸಬೇಕು.

ಯದ್ವತ್ತಂ ಶಕ್ತಿ ಮಾತ್ರೇಣ ಪತ್ರಂ ಪುಷ್ಪಂ ಫಲಂ ಜಲಂ
ನಿವೇದಿತಂಚ ನೈವೇದ್ಯಂ ತದ್ಗ್ರಹಾಣಾನು ಕಂಪಯಾ॥

ಭಕ್ತಿಯಿಂದ ಪತ್ರ ಪುಷ್ಪ, ಫಲ, ಜಲ ತಮ್ಮ ಶಕ್ತ್ಯಾನು ಸಾರವಾಗಿ ದೇವಿಗೆ ನೈವೇದ್ಯ ಮಾಡಬೇಕು.

## ಪ್ರಥಮ ಅಧ್ಯಾಯ :

ಮೇಧಾಋಷಿ ಸುರಥ ಮಹಾರಾಜರಿಗೆ, ಸಮಾಧಿ ಎನ್ನುವ ಹೆಸರಿನ ವೈಶ್ಯರಿಗೆ ಶ್ರೀದೇವಿ ಮಹಾತ್ಮೆ ವರ್ಣಿಸಿ ಮಧುಕೈಟಭ ವಧ ವೃತ್ತಾಂತವನ್ನು ತಿಳಿಸುವರು. ಸುರಥ ಮಹಾರಾಜರು ಧರ್ಮಪಾಲನೆ ಕ್ರಮ ಶಿಕ್ಷಣೆ ಇಂದ ರಾಜ್ಯವ ಆಳುತ್ತಿದ್ದರು. ರಾಜ್ಯ ಕಳೆದುಕೊಂಡು ತಮ್ಮವರೇ ಮೋಸ ಮಾಡಿದ ಕಾರಣ ವೈರಾಗ್ಯದಿಂದ ಅರಣ್ಯದಲ್ಲಿ ಅಲೆಯುತ್ತಿದ್ದರು. ಅದೇ ಸಮಯದಲ್ಲಿ ಸಮಾಧಿ ಎನ್ನುವ ವೈಶ್ಯರು ತನ್ನ ಮಕ್ಕಳು ಲೋಭಾಪೇಕ್ಷೆಗೆ ಒಳಗಾಗಿ ತಂದೆಯನ್ನೇ ಮನೆಯಿಂದ ಹೊರಗೆ ಕಳಿಸಿದರಿಂದ ಅದೇ ಅರಣ್ಯದಲ್ಲಿ ದಿಕ್ಕಿಲ್ಲದೇ ಅಲೆಯು ತ್ತಿದ್ದರು. ಇಬ್ಬರೂ ಒಬ್ಬರೊನ್ನಬ್ಬರು ಮಾತನಾಡಿಸಿಕೊಂಡು ತಮ್ಮ ಕಷ್ಟಗಳನ್ನು ಹಂಚಿಕೊಂಡು ಹತ್ತಿರದ ಮೇಧಾಋಷಿ ಆಶ್ರಮಕ್ಕೆ ಬಂದರು. ತಮ್ಮ ಕಷ್ಟಗಳನ್ನು ಋಷಿಗಳಿಗೆ ತಿಳಿಸಿದರು. ಮೇಧಾಋಷಿ ಆಶ್ರಮವಾಸ ಕೊಟ್ಟು ಇಬ್ಬರಿಗೂ ದೇವಿ ಮಹಾತ್ಮೆ ಬೋಧಿಸಿದರು. ಪ್ರಥಮ ಅಧ್ಯಾಯದಲ್ಲಿ ೧೦೪ ಶ್ಲೋಕಗಳಿವೆ.

## ಎರಡನೇಯ ಅಧ್ಯಾಯ :

ದೇವತೆಗಳ ತೇಜದಿಂದ ದೇವಿ ಪ್ರಾವರ್ಭಿಸುವ ವಿವರಣೆ, ಮಹಿಷಾಸುರ ಸೈನ್ಯ ವಧ ಮುಂತಾದ ಶ್ಲೋಕಗಳಿವೆ.

ತತಃ ಸಮಸ್ತ ದೇವಾನಾಂ ತೇಜೋರಾಶಿಸಮುದ್ಭವಾಮ್
ತಾಂ ವಿಲೋಕ್ಯಮುದಂ ಪ್ರಾಪುರಮರಾ ಮಹಿಷಾರ್ದಿತಾಃ

ದೇವತೆಗಳ ತೇಜಸ್ಸು ಸಮೂಹದಿಂದ ಪ್ರಕಟವಾದ ಜಗ ದಂಬೆಯನ್ನು ಕಂಡು ಮಹಿಷಾಸುರನ ದುಷ್ಟ ಕಾರ್ಯಗಳಿಂದ ನೊಂದ ದೇವತೆಗಳೆಲ್ಲ ಸಂತೋಷಗೊಂಡರು. ದೇವತೆಗಳು ಶಸ್ತ್ರಾಸ್ತ್ರಗಳನ್ನು ದೇವಿಗೆ ಕೊಟ್ಟರು. ಕ್ಷೀರಸಮುದ್ರ ರಾಜ ಕೆಂಪು ದಿವ್ಯವಸ್ತ್ರ, ಹಾರ ಮತ್ತು ಚೂಡಾಮಣಿ, ದೇವಶಿಲ್ಪಿ ವಿಶ್ವಕರ್ಮ ಜಗದಂಬೆಗೆ ನಿರ್ಮಲವಾದ ಕೊಡ್ಲಿ ಆಯುಧ, ವರುಣದೇವ ಕಮಲ, ಹಿಮವಂತರಾಜ ಬಂಗಾರ ವರ್ಣದ ಸಿಂಹ, ಶ್ರೀಹರಿ ಚಕ್ರ, ಬ್ರಹ್ಮ ದೇವರು ಕಮಂಡಲದಲ್ಲಿ ಗಂಗಾಜಲ ಪರಮೇಶ್ವರ ತ್ರಿಶೂಲ, ವರುಣದೇವ ಶಂಖ, ಅಗ್ನಿದೇವ ಶತಾಗ್ನಿ ಗೋಳ, ವಾಯುದೇವ ಬಿಲ್ಲು ಬಾಣ, ಇಂದ್ರದೇವ ವಜ್ರಾಯುಧ, ಘಂಟೆ, ಕುಬೇರ ಬಂಗಾರದ ಪಾತ್ರೆಯಲ್ಲಿ ಮಧು, ಯಮದಂಡಕ, ಪಾಶ, ಖಡ್ಗ, ಢಾಲು, ಗದೆ, ವರುಣ, ಕಮಲ, ಶಂಖ ಮತ್ತು ಸೂರ್ಯ ದೇವರು ತೇಜೋಮಯ ಕಿರಣ ಕೊಟ್ಟರು. ಎರಡನೆಯ ಅಧ್ಯಾಯದಲ್ಲಿ ೬೯ ಶ್ಲೋಕಗಳಿವೆ.



## ಮೂರನೆಯ ಅಧ್ಯಾಯ:

ಸೇನಾಧಿಪತಿ ಸೇರಿ ಮಹಿಷಾಸುರ ಸಂಹಾರ ಶ್ಲೋಕಗಳಿವೆ.

ತತೋ ಹಾಹಾಕೃತಂ ಸರ್ವಂ
ದೈತ್ಯ ಸೈನ್ಯಂ ನನಾಶ ತತ್ ।
ಪ್ರಹರ್ಷಂ ಚ ಪರಂ ಜಗ್ಮುಃ
ಸಕಲಾ ದೇವತಾ ಗಣಾಃ॥

ಮಹಿಷಾಸುರ ವಧೆಯ ನಂತರ ರಾಕ್ಷಸ ಸೈನ್ಯದಲ್ಲಿ ಹಾಹಾಕಾರ ಮೊದಲಾಯಿತು. ರಾಕ್ಷಸ ಸೈನ್ಯವೆಲ್ಲ ಕಣ್ಮರೆ ಆದರು. ದೇವತೆಗಳು ವಿಜಯ ದುಂದುಭಿ ಬಾರಿಸಿ ಆಕಾಶದಿಂದ ಪುಷ್ಪವರ್ಷವನ್ನು ಸುರಿಸಿದರು. ನಮೋ ಜಗನ್ಮಾತೆ! ಎಂದು ಕೀರ್ತಿಸಿದರು. ಮೂರನೆಯ ಅಧ್ಯಾಯದಲ್ಲಿ ೪೪ ಶ್ಲೋಕಗಳಿವೆ.

## ನಾಲ್ಕನೆಯ ಅಧ್ಯಾಯ :

ಇಂದ್ರಾದಿ ದೇವತೆಗಳು ದುರ್ಗಾಮಾತೆಯನ್ನು ಸ್ತುತಿಸುವ ಶ್ಲೋಕಗಳಿವೆ.

ದೇವ್ಯಾ ಯಯಾ ತತಮಿದಂ ಜಗದಾತ್ಮಶಕ್ತ್ಯಾ
ನಿಶ್ಶೇಷ ದೇವಗಣ ಶಕ್ತಿ ಸಮೂಹಮೂರ್ತ್ಯಾ ॥
ತಾಮಂಬಿಕಾಮಖಿಲ ದೇವಮಹರ್ಷಿಪೂಜ್ಯಾಂ
ಭಕ್ತ್ಯಾ ನತಾಃಸ್ಮ ವಿದಧಾತು ಶುಭಾನಿ ಸಾ ನಃ॥

ಸಾಟಿ ಇಲ್ಲದ ಮಹಾಶಕ್ತಿ ಬಲವನ್ನು ಪ್ರಭಾವವನ್ನು ವಿವರಿಸಲು ಆದಿಶೇಷರಿಗೂ ಬ್ರಹ್ಮದೇವರಿಗೂ ಪರಮೇಶ್ವರರಿಗೂ, ಸಾಧ್ಯವಾಗದಿರುವ ಅಂತಹ ಜಗದಂಬ ಚಂಡಿಕಾ ದೇವಿ ಸರ್ವ ಜಗತ್ತನ್ನು ಪೋಷಿಸಲು ಅಮಂಗಳ ಭಯ ತೊಲಗಿಸಲು ಸಂಕಲ್ಪಿಸಲಿ. ೪ ನೆಯ ಅಧ್ಯಾಯದಲ್ಲಿ ೪೨ ಶ್ಲೋಕಗಳಿವೆ.

## ಶ್ರೀಕಾಲಿಕಾಷ್ಟಕಮ್ ಸ್ತೋತ್ರದಲ್ಲಿ ಶಂಕರಾಚಾರ್ಯರು ದೇವಿಯ ಮಹಿಮೆ ವರ್ಣಿಸುತ್ತಾ:

ಮಹಾಮೇಘಕಾಲೀ ಸುರ ಕ್ತಾಪಿ ಶುಭ್ರ ಕದಾಚಿದ್ ವಿಚಿತ್ರಾ ಕೃತಿರ್ಯೋಗಮಾಯಾ ನ ಬಾಲಾ ನ ವೃದ್ಧಾ ನ ಕಾಮಾತುರಾಪಿಸ್ವರೂಪಂ ತ್ವದೀಯಂ ನ ವಿನ್ದನ್ತಿ ದೇವಾಃ "ಮೋಡದಂತೆ ಕಪ್ಪು, ಧಗ ಧಗ ಎನ್ನುವ ಕೆಂಪು ಬಣ್ಣದಂತೆ ಕಂಡು, ನಿರ್ಮಲ ಧವಳ ಕಾಂತಿಯಂತೆ ಇನ್ನು ಕೆಲವಡೆ ಗೋಚರಿಸುವ ವಿವಿಧ ಆಕಾರಗಳನ್ನು ಯೋಗ ಮಾಯೆಯಿಂದ ಧರಿಸುವ, ಬಾಲಕಿಯು ಅಲ್ಲ ವೃದ್ಧ ಮಹಿಳೆಯು ಅಲ್ಲ, ದೇವತೆಗಳಿಗೂ ತಿಳಿಯದ ಭಾವಾತೀತವಾದ ಜಗನ್ಮಾತೆಗೆ ವಂದನೆಗಳು.

## ಐದನೆಯ ಅಧ್ಯಾಯ :

ಶುಂಭ ನಿಶುಂಭ ರಾಕ್ಷಸರು ಅಹಂಕಾರದಿಂದ ಮೂರು ಲೋಕಗಳನ್ನು ಇಂದ್ರ ಪದವಿಯನ್ನು ಅಪಹರಿಸಿದರು. ಇಂದ್ರಾದಿ ದೇವತೆಗಳು ಧರ್ಮರಕ್ಷಣೆ ಮತ್ತು ರಾಕ್ಷಸರ ಬಾರಿಯಿಂದ ರಕ್ಷಿಸಲು ಹಿಮಾಲಯ ಪರ್ವತ ಶ್ರೇಣಿಯ ಬಳಿ ಸೇರಿ ಜಗದಂಬೆಯನ್ನು ಪ್ರಾರ್ಥನೆ ಮಾಡಿದರು. ೫ ನೆ ಯ ಅಧ್ಯಾಯದಲ್ಲಿ ೧೨೯ ಶ್ಲೋಕಗಳಿವೆ.

## ಆರನೆಯ ಅಧ್ಯಾಯ :

ದೈತ್ಯ ರಾಜ ಶುಂಭನ ಸೇನಾಧಿಪತಿ ಧೂಮ್ರಲೋಚನ.ಶುಂಭನ ಆಜ್ಞೆ ಮೇರೆಗೆ ದೇವಿಯ ಜೊತೆ ಯುದ್ಧ ಮಾಡಿ ಹತನಾದನು. ಸೈನ್ಯವೆಲ್ಲ ನಾಶವಾಗಿ ರಕ್ತಪಾತವಾಯಿತು. ೬ನೇ ಯ ಅಧ್ಯಾಯದಲ್ಲಿ ೨೪ ಶ್ಲೋಕಗಳಿವೆ.

## ಏಳನೆಯ ಅಧ್ಯಾಯ:

ಶುಂಭ ನಿಶುಂಭ ದೈತ್ಯರ ಸೇನಾಧಿಪತಿಗಳು ಚಂಡ ಮುಂಡ ಎನ್ನುವ ರಾಕ್ಷಸರು. ದೈತ್ಯನ ಪ್ರೇರಣೆ ಮೇರೆಗೆ ರಣ ಭೂಮಿಗೆ ದೇವಿಯನ್ನು ಎದುರಿಸಲು ಬಂದರು. ದೇವಿ ಸಿಂಹಾರೂಢಿಯಾಗಿ ಕಾಳಿಕ ರೂಪದಲ್ಲಿ ಪ್ರಕಟವಾಗಿ ಅಸುರರನ್ನು ವಧಿಸಿ ಚಾಮುಂಡಿ ನಾಮವ ಪಡೆದರು. ೭ ನೆಯ ಅಧ್ಯಾಯದಲ್ಲಿ ೨೭ ಶ್ಲೋಕಗಳಿವೆ.

## ಎಂಟನೆಯ ಅಧ್ಯಾಯ:

ರಕ್ತಬೀಜ ಮಹಾ ರಾಕ್ಷಸ. ತನ್ನ ದೇಹದ ಒಂದು ರಕ್ತದ ಚುಕ್ಕೆ ಭುವಿಗೆ ತಾಕಿದರೂ ಅನೇಕ ರಕ್ತಬೀಜ ಸೈನ್ಯ

ಉತ್ಪನ್ನವಾಗುವರು. ಅಂತಹ ರಾಕ್ಷಸನನ್ನು ದೇವಿ ತನ್ನ ನಾಲಿಗೆ ಚಾಚಿ ರಕ್ತ ನೆಲ ಸೇರದೆ ಅಸುರನನ್ನು ಅಂತಗೊಳಿಸಿದರು. ೮ನೇಯ ಅಧ್ಯಾಯ್ಯದಲ್ಲಿ ೬೩ ಶ್ಲೋಕಗಳಿವೆ.

### ಒಂಬತ್ತನೆಯ ಅಧ್ಯಾಯ:

ರಕ್ತಬೀಜನ ವಧೆಯಿಂದ ಆಗ್ರಹಗೊಂಡ ನಿಶುಂಭ ಸೇನೆಯ ಸಮೇತ ದೇವಿಯ ಜೊತೆ ಯುದ್ಧ ಮಾಡಲು ಸಿದ್ಧನಾದ. ದೇವಿ ನಿಶುಂಭ ಮತ್ತು ರಾಕ್ಷಸ ಸೇನೆಯನ್ನು ವಧಿಸಿ ರಣಚಂಡಿ ಆದರು. ೯ನೇ ಅಧ್ಯಾಯದಲ್ಲಿ ೪೧ ಶ್ಲೋಕಗಳಿವೆ.

### ಹತ್ತನೆಯ ಅಧ್ಯಾಯ:

ರಕ್ತ ಬೀಜ, ನಿಶುಂಭ, ವಧೆಯಿಂದ ಅಗ್ರಹಗೊಂಡ ಶುಂಭ ಸೇನೆಯ ಸಮೇತ ದೇವಿಯ ಜೊತೆ ಯುದ್ಧ ಮಾಡಲು ಸಿದ್ಧನಾದ. ದೇವಿ ಶುಂಭ ಮತ್ತು ರಾಕ್ಷಸ ಸೇನೆಯನ್ನು ನಾಶಗೊಳಿಸಿದರು. ೧೦ ನೆಯ ಅಧ್ಯಾಯದಲ್ಲಿ ೩೨ ಶ್ಲೋಕಗಳಿವೆ.

### ಹನ್ನೊಂದನೆಯ ಅಧ್ಯಾಯ :

ದೇವತೆಗಳು ದೇವಿಯ ಸ್ತುತಿಸುವುದು ದೇವಿಯ ಸಾಕ್ಷಾತ್ಕಾರ ಮತ್ತು ದೇವಿ ದೇವತೆಗಳಿಗೆ ವರ ಕೊಡುವ ಶ್ಲೋಕಗಳು; ದೇವಿ ಪ್ರಪನ್ನಾರ್ತಿ ಹರೇ! ಪ್ರಸೀದ ಪ್ರಸೀದ ಮಾತರ್ಜಗತೋಽಖಿಲಸ್ಯ।

ಪ್ರಸೀದ ವಿಶ್ವೇಶ್ವರಿ! ಪಾಹಿ ವಿಶ್ವಂ ತ್ವಮೀಶ್ವರೀ ದೇವಿ! ಚರಾಚರಸ್ಯ ॥

ಶರಣಾಗತರ ಪೋಷಿಸುವ ಮಾತೆ, ಭಕ್ತರ ಪ್ರಾರ್ಥನೆ ಕೇಳುವ ದೇವಿ, ಅನುಗ್ರಹಿಸು! ಜಗತ್ತನ್ನೆಲ್ಲ ಪ್ರಸನ್ನಮಯವಾಗಲು ಅನುಗ್ರಹಿಸು, ಮಾತಾ ವಿಶ್ವೇಶ್ವರಿ! ಸಕಲ ವಿಶ್ವವನು ಕಾಪಾಡು. ಜಂಗಮ ಸ್ಥಾವರಾತ್ಮಕವಾದ ಸಕಲ ಬ್ರಹ್ಮಾಂಡ ಪಾಲಿಸುವ ಮಾತೆ, ಅನುಗ್ರಹಿಸು. ೧೧ ನೆಯ ಅಧ್ಯಾಯದಲ್ಲಿ ೫೫ ಶ್ಲೋಕಗಳಿವೆ.

### ಹನ್ನೆರಡನೆಯ ಅಧ್ಯಾಯ:

ದೇವಿ ಚರಿತ್ರೆ ಪಠಣ ಮಹಾತ್ಮೆ ವಿವರಿಸಲಾಗಿದೆ. ಸ್ವತಃ ದೇವಿ ನವರಾತ್ರಿ ಪುಣ್ಯ ದಿನಗಳಲ್ಲಿ ಸಪ್ತಶತಿ ಪಾರಾಯಣ ಮಾಡುವ ಫಲಶ್ರುತಿ ನುಡಿದಿದ್ದಾರೆ. ಸ್ತೋತ್ರ ಪಾರಾಯಣ ಮಾಡುವುದರಿಂದ ಅಥವಾ ಕೇಳುವುದರಿಂದ ಶತ್ರುಭಯ, ಆಯುಧಭಯ, ಅಗ್ನಿಭಯ ಇಲ್ಲದೇ ದೇವಿ ಅನುಗ್ರಹ ಪಡೆದು ಸಮಸ್ತ ಬಾಧೆಗಳಿಂದ ಮುಕ್ತರಾಗಿ ಧನ, ಧಾನ್ಯ, ಪುತ್ರ ಪೌತ್ರ ಪ್ರಾಪ್ತಿ ಆಗುವುದು. ೧೨ ನೆಯ ಅಧ್ಯಾಯದಲ್ಲಿ ೪೧ ಶ್ಲೋಕಗಳಿವೆ.

### ಹದಿಮೂರನೆಯ ಅಧ್ಯಾಯ :

ಸುರಥ ಮಹಾರಾಜರಿಗೆ, ಸಮಾಧಿ ಅವರಿಗೆ ದೇವಿ ಕೊಡುವ ವರಗಳ ಶ್ಲೋಕಗಳು, ಮೇಧಾಋಷಿ ಆಶ್ರಮದಲ್ಲಿ ಸುರಥ ಮಹಾರಾಜ, ಸಮಾಧಿ ದೇವಿ ಮಹಾತ್ಮೆ ಶ್ರವಣ ಮಾಡಿಕೊಂಡು,ದೇವಿಯ ಕುರಿತು ತಪಸ್ಸು ಮಾಡಲು ಪವಿತ್ರ ನದೀ ತೀರಕ್ಕೆ ತೆರಳಿ ತಪಸ್ಸು ಆರಂಭ ಮಾಡಿದರು. ನದೀ ತೀರದ ಮಣ್ಣಿಂದ ದೇವಿಯ ಪ್ರತಿಮೆ ಮಾಡಿ ದೇವಿ ಸೂಕ್ತ ಪಠನೆ ಮಾಡುತ್ತಾ ಭಕ್ತಿ ಇಂದ ತಪಸ್ಸು ಮಾಡುತಲಿದ್ದರು.ದೇವಿ ಪ್ರತ್ಯಕ್ಷವಾಗಿ ವರದಾನ ಕೊಡುವೆ ! ಬೇಡಿಕೊಳ್ಳಿ ಎಂದು ನುಡಿದರು. ಸುರಥ ಮಹಾರಾಜರು ರಾಜ್ಯ ಹಿಂಪಡೆಯಲು ಮತ್ತು ಸದಾ ರಾಜನಾಗಿರಲು ಬೇಡಿಕೊಂಡರು. ಸಮಾಧಿಗೆ ಉತ್ತಮ ಜ್ಞಾನ ಪ್ರಸಾದಿಸಲು ಬೇಡಿಕೊಂಡರು. ಜಗದಂಬ ಸುರಥ ಮಹಾರಾಜರಿಗೆ ರಾಜ್ಯಸಿಗುವುದು, ಈ ಜನ್ಮದ ನಂತರ ಸಾವರ್ಣಿಕ ಮನುವಾಗುವ ವರದಾನ ಕೊಟ್ಟರು.ಸಮಾಧಿಗೆ ಮೋಕ್ಷ ಒದಗುವ ಜ್ಞಾನ ದೇವಿ ಕೊಟ್ಟರು. ದೇವಿ ಮಹಾತ್ಮೆ ಶ್ರವಣ, ತಪಸ್ಸು ಮಾಡಿ ದೇವಿಯ ಅನುಗ್ರಹಕ್ಕೆ ಪಾತ್ರರಾದರು ಸುರಥ ರಾಜ ಮತ್ತು ಸಮಾಧಿ.೧೩ ನೆ ಯ ಅಧ್ಯಾಯದಲ್ಲಿ ೨೯ ಶ್ಲೋಕಗಳಿವೆ.

ಮುಖ್ಯವಾಗಿ ಅನುದಿನ ಪಾರಾಯಣ ಮಾಡಲು ಕೆಲವು ಮಂತ್ರಗಳು ಒಂದನೇ ಅಧ್ಯಾಯದಲ್ಲಿ ೭೦ ರಿಂದ ೮೭ ಶ್ಲೋಕಗಳು ಬ್ರಹ್ಮದೇವರ ಸ್ತುತಿ, ನಾಲ್ಕನೇ ಅಧ್ಯಾಯದಲ್ಲಿ ಶ್ಲೋಕ - ೩ ರಿಂದ ೨೭ ರ ವರೆಗೆ ದೇವತೆಗಳಿಂದ ರಚಿಸಿದ ದುರ್ಗಾಸ್ತೋತ್ರ, ಐದನೆಯ ಅಧ್ಯಾಯದಲ್ಲಿ ೯ ರಿಂದ ೮೨ ರ ವರೆಗೆ ಶ್ಲೋಕಗಳು ಶ್ರೀದೇವಿ ಸ್ತುತಿ ಹನ್ನೊಂದನೆಯ ಅಧ್ಯಾಯದಲ್ಲಿ ೩ ರಿಂದ ೩೫ ರ ವರೆಗೆ ಶ್ಲೋಕಗಳು ದೇವತೆಗಳೆಲ್ಲ ಕಾತ್ಯಾಯನಿ ದೇವಿಯನ್ನು ಸ್ತುತಿಸಿದ ಸ್ತೋತ್ರಗಳು.

ಹದಿಮೂರು ಅಧ್ಯಾಯಗಳು, ೭೦೦ ಶ್ಲೋಕ ದೇವಿಯ ಅಪಾರ ಮಹಿಮೆ, ದೇವತೆಗಳೇ ಪ್ರಾರ್ಥನೆ ಮಾಡಿದ ಆದಿಶಕ್ತಿ ಮಹಿಮೆ, ರಾಕ್ಷಸರ ಸಂಹಾರ, ಸುರಥ ಮತ್ತು ಸಮಾಧಿ ದೇವಿಯ ಕೃಪೆಗೆ ಪಾತ್ರರಾಗಿರುವುದನ್ನು ವಿವರವಾಗಿ ತಿಳಿಯ

ಬಹುದು. ದೇವಿ ಭಕ್ತರಿಗೆ ಕೊಟ್ಟ ರಕ್ಷಣೆ, ಅಭೀಷ್ಟ ಸಿದ್ಧಿ ಮತ್ತು ಆಶ್ವಾಸನೆ ದುರ್ಗಾಸಪ್ತಶತಿ ಗ್ರಂಥ ನಿದರ್ಶನ.

**ನವರಾತ್ರಿ ದುರ್ಗಾಸಪ್ತಶತಿ ಪಾರಾಯಣೆ:**

ಆಶ್ವಯುಜ ಮಾಸದ ಶುಕ್ಲ ಪಕ್ಷ ಪಾಡ್ಯಮಿ ಇಂದ ಒಂಬತ್ತು ದಿನಗಳು ದೇವಿ ನವರಾತ್ರಿ ಆಚರಣೆ. ಒಂಬತ್ತು ದಿನ ಪರಮ ಪವಿತ್ರ ದಿನಗಳು ಮೊದಲನೆಯ ದಿನ ಆರಂಭ ಮಾಡಿ ಒಂಬತ್ತನೆಯ ದಿನದವರೆಗೂ ದುರ್ಗಾ ಸಪ್ತಶತಿ ಪಾರಾಯಣ ಸೂಕ್ತ ಕ್ರಮದಲ್ಲಿ ಮಾಡುವ ಪದ್ಧತಿ ಇದೆ. ಸಾಧ್ಯವಾದಲ್ಲಿ ೧೩ ಅಧ್ಯಾಯಗಳು ಪ್ರತಿ ದಿನ ಪಾರಾಯಣ ಮಾಡಬಹುದು. ಸಮಯ ಅಭಾವ, ಅಡಚಣೆ ಅಥವಾ ಬೇರೆ ಕಾರಣಗಳಿದ್ದಲ್ಲಿ ಪ್ರತೀ ದಿನ ಒಂದು ಅಧ್ಯಾಯ ಅಥವಾ ಎರಡು ಅಧ್ಯಾಯ ಪಾರಾಯಣ ಮಾಡಿ ಒಂಬತ್ತನೆಯ ದಿನ ೧೩ ನೆಯ ಅಧ್ಯಾಯ ಪಾರಾಯಣ ಮುಗಿಸಬೇಕು.ಸಪ್ತಶತಿ ಪಾರಾಯಣ ವಾಚಿಕವಾಗಿರಬೇಕು. ಸ್ಪಷ್ಟವಾಗಿ ಉಚ್ಚಾರಣೆ ಮಾಡಿದಾಗ ಉತ್ತಮ ಎಂದು ಪರಿಗಣಿಸಲಾಗಿದೆ. ಪಾರಾಯಣ ಪರಿಸಮಾಪ್ತವಾದ ಮೇಲೆ ಮುತ್ತೈದೆ ಮನೆಗೆ ಆಹ್ವಾನಿಸಿ ಕೆಂಪು ವಸ್ತ್ರ, ದಕ್ಷಿಣೆ ಕೊಟ್ಟು ಪಾದ ನಮಸ್ಕಾರ ಮಾಡಬೇಕು. ಉತ್ತರ ಭಾರತದ ಪ್ರಾಂತದಲ್ಲಿ ಬಾಲಕಿ ಕನ್ಯೆಯನ್ನು ಮನೆಗೆ ಆಹ್ವಾನಿಸಿ,ಪಾದ ತೊಳೆದು,ಅರಿಶಿನ,ಕುಂಕುಮ ಹಚ್ಚಿ ಬಾಲತ್ರಿಪುರ ಸುಂದರಿ ರೂಪದಲ್ಲಿ ನಮಸ್ಕರಿಸಿ ತಾಂಬೂಲಾದಿ ಸತ್ಕಾರ ಮತ್ತು ಪೂಜೆ ಮಾಡಿದ ನಂತರ ದೇವಿಗೆ ನೈವೇದ್ಯ ಮಾಡಿದ ಭಕ್ಷ್ಯಗಳನ್ನು ದೇವಿ ಸ್ವರೂಪದಲ್ಲಿ ಬಂದ ಕನ್ಯಾಮಣಿಗೆ ಊಟ ಉಪಚಾರ ಮಾಡಿ ನಮಸ್ಕಾರ ಮಾಡಿಕೊಳ್ಳುವ ಆಚಾರವಿದೆ.

**ದೇವಿಯ ಮಹಾತ್ಮೆ**

ದೇವಿಯ ಮಹಿಮೆ ಅಪಾರ.ಧರ್ಮರಾಜರು ಅಜ್ಞಾತವಾಸದಲ್ಲಿ ಯಾರಿಗೂ ಕಾಣದಂತೆ ದೇವಿಯ ಸ್ತೋತ್ರವನ್ನು ಪಠಿಸಿ ಪೂಜೆ ಮಾಡಿದರು. ಪಾಂಡವರು ವಿಜಯದಶಮಿಯಂದು ಆಯುಧಗಳನ್ನು ಬನ್ನಿ ವೃಕ್ಷದಿಂದ ತೆಗೆದುಕೊಂಡು ಕುರುಕ್ಷೇತ್ರಕ್ಕೆ ಸಂಸಿದ್ಧರಾಗಿ ಜಯಗಳಿಸಿದರು.

**ವಸುದೇವರ ದೇವಿ ಉಪಾಸನೆ:**

ಜಾಂಬವಂತನ ಜೊತೆ ಗುಹೆಯಲ್ಲಿ ಶ್ರೀ ಕೃಷ್ಣ ಇಪ್ಪತ್ತೊಂದು ದಿನ ಯುದ್ಧ ಮಾಡುವಾಗ, ವಸುದೇವರು ನಾರದ ಮುನಿಯ ಸೂಚನೆಮೇರೆಗೆ ದೇವಿ ಉಪಾಸನೆ ಮಾಡಿದರು. ಶ್ರೀಕೃಷ್ಣ ಪರಮಾತ್ಮ ಮಣಿಯೊಡನೆ ಕ್ಷೇಮವಾಗಿ ಹೊರ ಬಂದರು.

**ಕಾಳಿದಾಸರಿಗೆ ದೇವಿಯ ಕೃಪೆ:**

ಕಾಳಿದಾಸರಿಗೆ ದೇವಿ ಸಾಕ್ಷಾತ್ಕಾರವಾಗಿ ಬೀಜಾಕ್ಷರವ ನಾಲಿಗೆ ಮೇಲೆ ಬರೆದಾಗ ವಿದ್ಯೆ ಜ್ಞಾನ ಪಡೆದು ಕವಿರತ್ನ, ಮಹಾ ಪಂಡಿತರಾದರು. ವೇದಕಾಲದಲ್ಲಿ ನವರಾತ್ರಿ ಆಚರಣೆ, ಪೂಜೆಯಲ್ಲಿ ದೇವಿ ಗಾಯತ್ರಿ ಆರಾಧನೆಯಿಂದ ಶಕ್ತಿಯನ್ನು ಪಡೆಯಲು ಸಾಧನೆ ಮಾಡುತ್ತಿದ್ದರು.

**ನವರಾತ್ರಿ ದೇವಿ ಅಲಂಕಾರ:**

ಒಂಬತ್ತು ದಿನಗಳಲ್ಲಿ ಬಾಲಾತ್ರಿಪುರಸುಂದರಿ, ಅನ್ನಪೂರ್ಣ, ಲಕ್ಷ್ಮಿ, ಸರಸ್ವತಿ, ಲಲಿತಾ, ರಾಜಾರಾಜೇಶ್ವರಿ, ಗಾಯತ್ರಿ, ದುರ್ಗಾ ರೂಪದಲ್ಲಿ ಪೂಜೆ ಮತ್ತು ದೇವಿಯ ಆಲಯದಲ್ಲಿ ಅಲಂಕಾರ ಮಾಡುವರು. ದೇವಿ ಭಗವತಿ ನಿರ್ಗುಣ ಸ್ವರೂಪಿ. ದೇವತೆಗಳ ಕಾರ್ಯಸಿದ್ಧಿ ಕಾರ್ಯ ನಿರ್ವಹಣಕ್ಕಾಗಿ ಸಗುಣ ರೂಪವನ್ನು ಧರಿಸುವರು.ಭುಕ್ತಿ ಪ್ರದಾಯಿನಿ ಅನ್ನಪೂರ್ಣೇಶ್ವರಿ. ಭಾಗ್ಯಪ್ರದಾಯಿನಿ ಮಹಾಲಕ್ಷ್ಮಿ, ವಿದ್ಯಾಪ್ರದಾಯಿನಿ ಸರಸ್ವತಿ, ಪ್ರಕೃತಿ ಸ್ವರೂಪಿಣಿ ಶಾಕಾಂಬರಿದೇವಿ,ದೇವತೆಗಳಿಗೆ ಹವಿರ್ಭಾಗ ಕೊಡುವ ಸ್ವಾಹಾದೇವಿ,ಇವೆಲ್ಲ ಭಗವತಿಯ ಕೆಲವು ಸ್ವರೂಪಗಳು.ಜಗನ್ಮಾತೆ ಸರ್ವಅಭೀಷ್ಟಗಳನ್ನು ನೆರವೇರಿಸುವರು. ತಾಯಿಯ ಮಡಿಲು ಜಗದಲ್ಲಿ ಪರಮ ಸೌಖ್ಯ ಅತ್ಯಂತ ಸುರಕ್ಷಿತ. ತಾಯಿ ಮಗುವಿಗೆ ಮೊದಲ ಗುರು ಮತ್ತು ದೈವ ಸಮಾನ, ಜನ್ಮ ಕೊಟ್ಟ ತಾಯಿಗೆ ವಂದನೆ, ಬ್ರಹ್ಮಾಂಡನಾಯಕಿ ಜಗನ್ಮಾತೆಗೆ ಶತ ಕೋಟಿ ವಂದನೆಗಳು, ಆತ್ಮ ನಿವೇದನೆ! ನವರಾತ್ರಿ ದಿನಗಳಲ್ಲಿ ದೇವಿ ಭಾಗವತ ಪಾರಾಯಣ,ದುರ್ಗಾ ಸಪ್ತಶತಿ ಪಾರಾಯಣ, ಶ್ರವಣ, ದೇವಿಯ ಪೂಜೆ, ಉಪವಾಸ ಭಕ್ತಿಯಿಂದ ಮಾಡಿ ದೇವಿಯ ಕೃಪೆಗೆ ಪಾತ್ರರಾಗೋಣ.

"ಜಯ ಜಯ ಹೇ ಮಹಿಷಾಸುರಮರ್ದಿನಿ ರಮ್ಯ ಕಪರ್ದಿನಿ ಶೈಲ ಸುತೇ! ಸರ್ವ ಮಂಗಳ ಮಾಂಗಲ್ಯೇ ಶಿವೇ ಸರ್ವಾರ್ಥ ಸಾಧಿಕೇ ಶರಣ್ಯೇತ್ರ್ಯಂಬಕೇ ಗೌರಿ ನಾರಾಯಣೀ ನಮೋಸ್ತುತೇ" !

ಓಂ ಶಾಂತಿ ಶಾಂತಿ ಶಾಂತಿಃ



# ಸಂಸ್ಕೃತ ಕಲಿಯೋಣ -

ರಚನೆ : - ಮಹಾ ಮಹೋಪಾಧ್ಯಾಯ ಕಾಶಿ ಕೃಷ್ಣಾಚಾರ್ಯ
ನಿರ್ವಹಣೆ : - ಮಹಾ ಮಹೋಪಾಧ್ಯಾಯ ಸಮುದ್ರಾಲ ಲಕ್ಷ್ಮಣಯ್ಯ

## ಓದುಗರಿಗೆ ಕೆಲವು ಸೂಚನೆಗಳು

1. ಪ್ರತಿಪಾಠದಲ್ಲಿರುವ ಪದಗಳನ್ನು ಕಂಠಪಾಠ ಮಾಡಬೇಕು. ಓದಿದ ಪಾಠವನ್ನು ಪ್ರತಿನಿತ್ಯವು ಐದು ಅಥವಾ ಹತ್ತು ಸಲ ಬರೆಯಬೇಕು.

2. ಪ್ರತಿ ಪಾಠದಲ್ಲೂ ಕೆಳಗೆ ಅಭ್ಯಾಸಾರ್ಥ ಸಂಸ್ಕೃತದಲ್ಲಿ ಬರೆಯಲಾದ ವಾಕ್ಯಗಳಿಗೆ ಕನ್ನಡದಲ್ಲಿ, ಕನ್ನಡದಲ್ಲಿರುವ ಪದಗಳನ್ನು ಸಂಸ್ಕೃತದಲ್ಲಿ ಬದಲಾಯಿಸಿ ಹೇಳಬೇಕು.

3. ತಮ್ಮ ಮನೆಯಲ್ಲಿಯಾಗಲೀ, ಸಹ ಉಪಾಧ್ಯಾಯರೊಂದಿಗೆ ಸಂಸ್ಕೃತದಲ್ಲಿ ಮಾತನಾಡಬೇಕು. ಅವರನ್ನು ಸಂಸ್ಕೃತ ಭಾಷೆಯಲ್ಲಿ ಮಾತನಾಡುವಂತೆ ಪ್ರೋತ್ಸಾಹಿಸಬೇಕು.

4. ದ್ವಿವಚನ, ಬಹುವಚನ ಗೊತ್ತಿಲ್ಲದಿರುವಾಗ ದ್ವಯ, ತ್ರಯ, ಚತುಷ್ಟನಂತಹ ಪದಗಳನ್ನು ನಾಮವಾಚಕದೊಂದಿಗೆ ಸೇರಿಸಿ ಏಕವಚನವಾಗಿ ಬಳಸಬಹುದು.

55. ಚಿಕ್ಕ ಚಿಕ್ಕ ಕಥೆಗಳು, ಚಿಕ್ಕ ಚಿಕ್ಕ ಸಂಸ್ಕೃತ ವಾಕ್ಯಗಳನ್ನು ಹೇಳುತ್ತಾ ಬರೆಯಬೇಕು.



श्रीलक्ष्मीहयग्रीवो विजयतेतराम्

## बालबोधिनी

श्रीवाजिवदनं ध्यात्वा ध्यात्वा गुरुपदाम्बुजम्।
काशीकृष्णेन विदुषा क्रियते बालबोधिनी।।



### १.प्रथमः पाठः

सः = ಅವನು कुत्र = ಎಲ್ಲಿ अस्ति = ಇದ್ದಾನೆ त्वं = ನೀನು तत्र = ಅಲ್ಲಿ असि = ಇದ್ದೀಯಾ
अहं = ನಾನು अत्र = ಇಲ್ಲಿ अस्मि = ಇದ್ದೇನೆ

१. सः अस्ति २. अहं तत्र अस्मि ३. त्वं कुत्र असि? ४. सः तत्र अस्ति ५.अहं अत्र अस्मि ६.त्वं तत्र असि ७. सः कुत्र अस्ति? ८. सः तत्र अस्ति ९. त्वं अत्र असि १०. अहं कुत्र अस्मि?

1) ಅವನು ಇದ್ದಾನೆ. 2) ನಾನು ಅಲ್ಲಿ ಇದ್ದೀನಿ 3) ನೀನು ಎಲ್ಲಿ ಇದ್ದೀಯಾ 4) ಅವನು ಅಲ್ಲಿ ಇದ್ದಾನೆ 5) ನಾನು ಇಲ್ಲಿ ಇದ್ದೇನೆ. 6) ನೀನು ಅಲ್ಲಿ ಇದ್ದೀಯಾ 7) ಅವನು ಎಲ್ಲಿ ಇದ್ದಾನೆ 8) ಅವನು ಅಲ್ಲಿ ಇದ್ದಾನೆ. 9) ನೀನು ಇಲ್ಲಿ ಇದ್ದೀಯಾ 10) ನಾನು ಎಲ್ಲಿ ಇದ್ದೇನೆ.

**ಉತ್ತರಗಳು**

१.त्वं कुत्र असि? २. अहं अत्र अस्मि ३. सः तत्र अस्ति ४.त्वं अत्र असि ५.अहं कुत्र अस्मि? ६. त्वं असि ७. अहं अस्मि ८. सः अस्ति ९.अहं तत्र अस्मि १०. त्वं तत्र असि।

1) ನೀನು ಎಲ್ಲಿದ್ದೀಯಾ 2) ನಾನು ಇಲ್ಲಿ ಇದ್ದೀನಿ 3) ಅವನು ಅಲ್ಲಿದ್ದಾನೆ. 4) ನೀನು ಇಲ್ಲಿದ್ದೀಯಾ 5) ನಾನು ಎಲ್ಲಿದ್ದೇನೆ. 6) ನೀನಿದ್ದೀಯಾ 7) ನಾನಿದ್ದೇನೆ 8) ಅವನಿದ್ದಾನೆ. 9) ನಾನೆಲ್ಲಿದ್ದೇನೆ 10) ನೀನೆಲ್ಲಿದ್ದೀಯಾ.



# ಬ್ರಹ್ಮಗಿರಿಯ ತಲಕಾವೇರಿ ಕ್ಷೇತ್ರದಲ್ಲಿ ತೀರ್ಥೋದ್ಭವ

- ಡಾ. ಬಿ.ಎಸ್. ಪಾರಿಜಾತ
9008335689




ಲೌಕಿಕ ಪ್ರಗತಿ ಹಾಗೂ ಆಧ್ಯಾತ್ಮಿಕ ಉನ್ನತಿಗಳೆರಡಕ್ಕೂ ನೆರವಾಗುವ ವಿಶೇಷ ಸಾಧನಾ ಮಾರ್ಗವೆಂದರೆ ನಾವು ಕೈಗೊಳ್ಳುವ ನಿಸ್ವಾರ್ಥ ಕಾರ್ಯಗಳು,ಸಮಾಜಮುಖಿ ಆಲೋಚನೆಗಳು, ಸೇವಾಮನೋಭಾವದ ಚಿಂತನೆಗಳು, ಇವುಗಳಿಗೆ ಪೂರಕವಾಗಿ ಪ್ರತಿಯೊಬ್ಬ ಮನುಷ್ಯನು ತನ್ನ ಜೀವಿತಾವಧಿಯಲ್ಲಿ ಕೈಗೊಳ್ಳುವ ಧಾರ್ಮಿಕ ಕಾರ್ಯಗಳು ಮತ್ತು ಧಾರ್ಮಿಕ ಗ್ರಂಥಗಳ ಅಧ್ಯಯನ, ಪವಿತ್ರ ಯಾತ್ರಾ ಸ್ಥಳಗಳ ಭೇಟಿ ಆತ್ಮೋನ್ನತಿಗೆ ಕಾರಣವಾಗುತ್ತದೆ. ಇದರಿಂದ ಮನಸ್ಸಿಗೆ ಶಾಂತಿ ನೆಮ್ಮದಿ ದೊರೆಯುವುದಲ್ಲದೆ, ತಮ್ಮನ್ನು ಹಾಗೂ ಇತರರನ್ನು ಅಜ್ಞಾನದಿಂದ ಜ್ಞಾನದೆಡೆಗೆ ಕೊಂಡೊಯ್ಯಲು ಸಹಕಾರಿಯಾಗುತ್ತದೆ. ಪ್ರಕೃತಿ ಮಾತೆಯ ಮಡಿಲಲ್ಲಿ ಆಶ್ರಯ ಪಡೆದಿರುವ ನಾವು, ಪ್ರತಿಕ್ಷಣವೂ ಆಕೆಯ ಅವಲಂಭಿತರು. ಆಕೆಯ ಕೃಪಾಕಟಾಕ್ಷವಿಲ್ಲದೆ ನಾವಿಲ್ಲ. ಇಂತಹ ಪ್ರಕೃತಿಯ ಪ್ರಮುಖ ಭಾಗ ಜಲಸಂಪತ್ತು. ಇಡೀ ಭೂಮಂಡಲದ ಮೂರು ಭಾಗವನ್ನು ಆವರಿಸಿದೆ. ನಮ್ಮ ನಾಡಿನ ಜಲಸಂಪನ್ಮೂಲಗಳಲ್ಲಿ ನದಿಗಳು ಪ್ರಮುಖ ಪಾತ್ರವಹಿಸುತ್ತವೆ. ನದಿಯೆಂದರೆ ಕೇವಲ ನೀರಷ್ಟೆ ಅಲ್ಲ. ಅದೊಂದು ಜೀವಂತ ಶಕ್ತಿ. ಸಸ್ಯ, ಪ್ರಾಣಿ, ಜಲಚರ, ಮಾನವ ಪ್ರಪಂಚಕ್ಕೆ ಜೀವನಾಧಾರ. ಪುಣ್ಯ ಪಿಯೂಷ ಸ್ತನ್ಯವಾಹಿನಿಗಳಾಗಿವೆ. ನದೀ ಮೂಲ ಹಾಗೂ ಋಷೀ ಮೂಲವನ್ನು ಹುಡುಕಬಾರದೆಂಬ ಮಾತಿದೆ. ನದಿಗಳು ಅನಾದಿಕಾಲದಿಂದಲೂ ನಮ್ಮ ಭವ್ಯ ಸಂಸ್ಕೃತಿಯನ್ನು ಬೆಳೆಸಿ ಉಳಿಸಿರುವ ತೊಟ್ಟಿಲುಗಳಾಗಿವೆ. ಅಂತೆಯೇ ನಮ್ಮ ನಾಡಿನ ಒಂದೊಂದು ನದಿಗೂ ಸ್ವಾರಸ್ಯಕರ ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನೆಲೆ ಇದೆ. ಇಂತಹ ಪೌರಾಣಿಕ ಹಾಗೂ ಐತಿಹಾಸಿಕ ಹಿನ್ನೆಲೆಯನ್ನು ಹೊಂದಿರುವ ಕರ್ನಾಟಕದ ಜೀವ ನದಿಗಳಲ್ಲೊಂದಾದ ಕಾವೇರಿ ನದಿಯ ಉಗಮ ಸ್ಥಾನವಾದ ಬ್ರಹ್ಮಗಿರಿಯ ತಲಕಾವೇರಿ ಕ್ಷೇತ್ರವು ಇತಿಹಾಸದಲ್ಲಿ ತನ್ನದೇ ಆದ ಮಹತ್ವವನ್ನು ಪಡೆದಿದೆ.

ತಲಕಾವೇರಿಯು ಕರ್ನಾಟಕ ರಾಜ್ಯದ ಮಡಿಕೇರಿ ಜಿಲ್ಲೆಯ ಭಾಗಮಂಡಲದ ಬ್ರಹ್ಮಗಿರಿ ಪರ್ವತದಲ್ಲಿದೆ. ಸೂರ್ಯನು ತುಲಾರಾಶಿ ಪ್ರವೇಶಿಸುವ ಪವಿತ್ರ ದಿನವನ್ನು 'ತುಲಾ ಸಂಕ್ರಮಣ' ದಿನವೆಂದು ಹೇಳಲಾಗುತ್ತದೆ. ಪ್ರತೀ ವರ್ಷ ಅಕ್ಟೋಬರ್ ತಿಂಗಳಿನ ತುಲಾಸಂಕ್ರಮಣದ ದಿನ ತಲಕಾವೇರಿಯ ತೀರ್ಥಕುಂಡದಲ್ಲಿ (ಕುಂಡಿಕೆ) ನೀರಿನ ಬುಗ್ಗೆಯಾಗಿ ಶುಭ ಮುಹೂರ್ತ, ಶುಭ ಲಗ್ನದಲ್ಲಿ ತಾಯಿ ಕಾವೇರಿಯ ಉಗಮವಾಗುತ್ತದೆ. ಇದನ್ನು "ತೀರ್ಥೋದ್ಭವ" ವೆಂದು ಕರೆಯಲಾಗುತ್ತದೆ.

ಈ ಪವಿತ್ರ ದಿನದಂದು ಇಲ್ಲಿನ ಕುಂಡಿಕೆಯಲ್ಲಿ ಮೂರು ಬಾರಿ ನೀರಿನ ಬುಗ್ಗೆಯುಂಟಾಗುತ್ತದೆ. ಗಂಗಾ, ಯಮುನಾ, ಗೋದಾವರಿ, ಸರಸ್ವತಿ, ನರ್ಮದಾ, ಸಿಂಧೂ ನದಿಗಳು ಕಾವೇರಿಯನ್ನು ಸೇರುತ್ತವೆಂಬ ನಂಬಿಕೆಯಿದೆ. ಕಾವೇರಿಯು ಇಲ್ಲಿಂದ ಮುಂದಿನ ಕೊಳಗಳನ್ನು ಸೇರಿ, ನಂತರ ಗುಪ್ತಗಾಮಿನಿಯಾಗಿ ಹರಿದು, ಕಣಿವೆಯಲ್ಲಿ ಕಾಣಿಸಿಕೊಂಡು ಕರ್ನಾಟಕದ ವಿವಿಧ ಭಾಗಗಳಲ್ಲಿ ಹರಿಯುತ್ತಾಳೆ. ತನ್ನ ಮಾರ್ಗದಲ್ಲಿ ಪ್ರಸಿದ್ಧ ಕಟ್ಟೆಗಳಾಗಿ, ಜಲಧಾರೆಗಳ ರೂಪದಲ್ಲಿ ಅನೇಕ ಯಾತ್ರಾಸ್ಥಳಗಳನ್ನು ಪವಿತ್ರಗೊಳಿಸುತ್ತಾ, ಕೃಷೀ ಭೂಮಿಯನ್ನು



ಸಮೃದ್ಧಗೊಳಿಸುತ್ತಾಳೆ. ಕಾವೇರಿಯು ಬ್ರಹ್ಮಗಿರಿಯ ಆಚೆಯ ಭಾಗದಲ್ಲಿ ಹರಿದಿದ್ದರೆ ಅರಬ್ಬಿ ಸಮುದ್ರವನ್ನು ಸೇರಿ ಬಿಡುತ್ತಿದ್ದಳು. ಆದರೆ ಭಾಗಮಂಡಲದ ತಲಕಾವೇರಿಯಲ್ಲಿ ಅಂತರ್ಗಾಮಿಯಾಗಿ ಹರಿದು, ಕುಂಡಿಕೆಯಲ್ಲಿ ಬುಗ್ಗೆಯಾಗಿ ಕಾಣಿಸಿಕೊಂಡು, ಮತ್ತೆ ಗುಪ್ತಗಾಮಿನಿಯಾಗಿ ಹರಿದು,ನಂತರ ಕಣಿವೆಯಲ್ಲಿ ಕಾಣಿಸಿ ಕೊಂಡು ಸುಮಾರು ೮೦೨ ಕಿ.ಮೀ.ಗಳಷ್ಟು ದೂರ ಜೀವನದಿಯಾಗಿ ಕ್ರಮಿಸಿ ರೈತಾಪಿಜನರ ಜೀವಜಲವಾಗಿದ್ದಾಳೆ. ಮೈಸೂರು ಜಿಲ್ಲೆಯ ಮೂಲಕ ತಮಿಳುನಾಡಿಗೆ ಹರಿದು ನಂತರ ಬಂಗಾಳಕೊಲ್ಲಿಯನ್ನು ಸೇರುತ್ತಾಳೆ.

### ಪೌರಾಣಿಕ ಹಿನ್ನಲೆ:

ಕಾವೇರಿಯ ಪವಿತ್ರತೆ ಹಾಗೂ ದೈವೀಕತೆಯ ಬಗ್ಗೆ ಆಕ್ಯಾಯಿಕೆಗಳು ಅಗ್ನಿಪುರಾಣ,ಸ್ಕಾಂದಪುರಾಣಗಳಲ್ಲಿನ ಕಾವೇರಿ ಮಹಾತ್ಮೆಯಲ್ಲಿ ವಿವರಿಸಲ್ಪಟ್ಟಿದೆ. ಹಿಂದೆ ಒಮ್ಮೆ ಕಾವೇರನೆಂಬ ರಾಜಶ್ರೀಯು ಬ್ರಹ್ಮನನ್ನು ಕುರಿತು ಸಂತಾನಕ್ಕಾಗಿ ತಪಸ್ಸು ಕೈಗೊಂಡನಂತೆ, ಆತನ ತಪಸ್ಸಿಗೆ ಮೆಚ್ಚಿ ಬ್ರಹ್ಮನು ಸೌಂದರ್ಯವತಿಯಾದ ಒಂದು ಹೆಣ್ಣು ಮಗಳನ್ನು ದಯಪಾಲಿಸಿದನು. ಕಾವೇರನ ಮಗಳಾಗಿ ಬೆಳೆದ ಆಕೆಯು ಕಾವೇರಿ ಎಂಬ ಹೆಸರಿನಿಂದ ಕರೆಯಲ್ಪಟ್ಟಳು. ಒಮ್ಮೆ ಅವಳು ಅಗಸ್ತ್ಯ ಮುನಿಯ ದೃಷ್ಟಿಗೆ ಬೀಳಲು ಆತನು ಅವಳನ್ನು ಕಂಡು ಮೋಹಿತನಾಗಿ ಮದುವೆಯಾಗಲು ಬಯಸಿದನಂತೆ.ಆಗ ಕಾವೇರನು ಯಾವುದೇ ಸಮಯದಲ್ಲೂ ತನ್ನ ಮಗಳನ್ನು ಬಿಟ್ಟು ಆಗಲ ಕೂಡದೆಂಬ ಶರತ್ತನ್ನು ಹಾಕಿದನು. ಅದರಂತೆ ಒಪ್ಪಿ ಅಗಸ್ತ್ಯನು ಕಾವೇರಿಯನ್ನು ವಿವಾಹವಾದನು. ಆದರೆ ಕಾವೇರಿಯು ಈ ಬಂಧನದಿಂದ ಮುಕ್ತಿ ಹೊಂದಿ ಲೋಕ ಕಲ್ಯಾಣಾರ್ಥದಲ್ಲಿ ಜನ್ಮ ಸಾರ್ಥಕಗೊಳಿಸಿಕೊಳ್ಳಬೇಕೆಂಬ ಬಯಕ್ಕೆ ಹೊಂದಿದ್ದಳು. ವಿವಾಹದ ನಂತರ ಪತಿ ಪತ್ನಿಯರು ಒಂದು ಪರ್ಣಕುಟೀರದಲ್ಲಿ ಸಂಸಾರ ಹೂಡಿದರು. ಒಮ್ಮೆ ಅಗಸ್ತ್ಯನು ಬ್ರಾಹ್ಮೀ ಮುಹೂರ್ತದಲ್ಲೆದ್ದು ಭಾಗಮಂಡಲದ ಕನಿಕಾ ನದಿಯಲ್ಲಿ ಸ್ನಾನ ಮಾಡಿ ಭಗಂಡೇಶ್ವರನ್ನು ಪೂಜಿಸಲು ತೆರಳಿದನು. ಮರಳಿ ಬರುವುದು ತಡವಾಯಿತು. ಕಾವೇರಿಯು ತನ್ನ ಮನೋರಥವನ್ನು ಈಡೇರಿಸಿಕೊಳ್ಳಲು ಇದೇ ಸರಿಯಾದ ಸಮಯವೆಂದು ಭಾವಿಸಿ ತಲಕಾವೇರಿಯಲ್ಲಿರುವ ಕುಂಡಿಕೆಯಲ್ಲಿ ಹಾರಿ ನದೀರೂಪ ತಾಳಿ ಜಲರೂಪದ ಬುಗ್ಗೆಯಾಗಿ ಚಿಮ್ಮಿದಳು. ಅದನ್ನು ಕಂಡ ಅಗಸ್ತ್ಯರು ಶಿಷ್ಯರು ತಡೆಯಲು ಗುಪ್ತ ಗಾಮಿನಿಯಾಗಿ ಸಾಗಿದಳು. ವಿಷಯ ತಿಳಿದ ಅಗಸ್ತ್ಯರು ಆಗಮಿಸಿ ತನ್ನ ತಪ್ಪನ್ನು ಕ್ಷಮಿಸುವಂತೆ ಕೇಳಿಕೊಂಡರು. ಮನೆಗೆ ಮರಳುವಂತೆ ಬೇಡಿದರು. ಆಗ ಪತಿಯ ಮನಸ್ಸನ್ನು ನೋಯಿಸಲಾರದೆ ಆಕೆ ಎರಡು ರೂಪ ತಾಳಿದಳಂತೆ. ಒಂದರ್ಧದಲ್ಲಿ ಅಗಸ್ತ್ಯನ ಪತ್ನಿಯಾಗಿ ಇನ್ನೊಂದರ್ಧದಲ್ಲಿ ಲೋಕಪಾವನೆ ಕಾವೇರಿ ನದಿಯಾಗಿ, ಇರುವೆನೆಂದು ನಿರ್ಧರಿಸಿದಳು. ವರ್ಷಕ್ಕೊಮ್ಮೆ ನೀರಿನ ಬುಗ್ಗೆಯಾಗಿ ಕಾಣಿಸಿಕೊಂಡು ನದಿಯಾಗಿ ಹರಿದು, ಭೂ ಮಾತೆಯ ಸೇವೆಯಲ್ಲಿ ತನ್ನ ಜನ್ಮಸಾರ್ಥಕಗೊಳಿಸಿಕೊಳ್ಳುವ ಕಾರ್ಯದಲ್ಲಿ ಯಶಸ್ವಿಯಾಗಿದ್ದಾಳೆ.

### ಸ್ಥಳ ಪುರಾಣ:

ಒಮ್ಮೆ ಪರಶಿವ ಹಾಗೂ ಪಾರ್ವತಿಯರ ವಿವಾಹದ ಸಂದರ್ಭದಲ್ಲಿ ವಿವಾಹದ ಸಾಕ್ಷಿಗಾಗಿ ಉತ್ತರ ಹಾಗೂ ದಕ್ಷಿಣದ ದಿಕ್ಕುಗಳಿಂದ ಅತಿಥಿಗಳ ಆಗಮನವಾಯಿತು. ಕೈಲಾಸ ಪರ್ವತದ ಉತ್ತರ ಭಾಗದಲ್ಲಿ ಒತ್ತಡ ಉಂಟಾಯಿತು. ಆ ಒತ್ತಡವನ್ನು ಸರಿದೂಗಿಸಲು ಪರಶಿವನು ಅಗಸ್ತ್ಯ ಮುನಿಗಳನ್ನು ಕುರಿತು ದಕ್ಷಿಣದ ವಿಂಧ್ಯ ಪರ್ವತದೆಡೆಗೆ ತೆರಳಲು ಸೂಚಿಸಿ, ಕೈಲಾಸ ಪರ್ವತದಲ್ಲಿ ಉಂಟಾಗಿರುವ ಒತ್ತಡವನ್ನು ಕಡಿಮೆ ಮಾಡಲು ತಿಳಿಸಿದನಂತೆ. ಆದರೆ ಅಗಸ್ತ್ಯರಿಗೆ ಇತ್ತ ಶಿವ ಪಾರ್ವತಿಯರ ವಿವಾಹದಲ್ಲಿ ಭಾಗವಹಿಸುವ ಅವಕಾಶ ಕಳೆದುಕೊಳ್ಳಲು ಮನಸ್ಸಿರಲಿಲ್ಲ ಹಾಗೂ ವಿಂಧ್ಯದೆಡೆಗೆ ಹೋಗದಿರಲು ಮನಸ್ಸಿರಲಿಲ್ಲ.ಕೊನೆಗೆ ಅವರೊಂದು ಉಪಾಯ ಮಾಡಿದರು. ಶಿವನನ್ನು ಕುರಿತು ನಾನು ನನ್ನ ಸಂಕಲ್ಪದಂತೆ, ಧಾರ್ಮಿಕ ಕಾರ್ಯ ಮಾಡಲು ಪವಿತ್ರ ತೀರ್ಥದ ಅಗತ್ಯವಿದೆ ಆದಲ್ಲದೆ ನಾನು ಎಲ್ಲೂ ಹೋಗಲಾರೆ ಎಂದರು. ಶಿವನು ಅವರ ಮನದಿಂಗಿತವನ್ನು ಅರಿತು ಒಂದು ಕಮಂಡಲದಲ್ಲಿ ಕಾವೇರಿಯನ್ನು ತುಂಬಿ ಅಗಸ್ತ್ಯರಿಗೆ ನೀಡಿದನಂತೆ. ಅದನ್ನು ಪಡೆದ ಅವರು ವಿಧಿಯಿಲ್ಲದೆ ವಿಂಧ್ಯ ಪರ್ವತ ದೆಡೆಗೆ ಸಾಗಿದರು.ಇತ್ತ ಅದೇ ಸಮಯದಲ್ಲಿ ಇಂದ್ರನು ತಾನು ಎಸಗಿದ ಯಾವುದೋ ಪಾಪ ಕಾರ್ಯ ನಿಮಿತ್ತ ಪವಿತ್ರ ತೀರ್ಥದಲ್ಲಿ ಮಿಂದು ಪಾಪವನ್ನು ತೊಳೆದುಕೊಳ್ಳಲು ಹಾತೊರೆಯುತ್ತಿದ್ದನು. ಪವಿತ್ರ ತೀರ್ಥಕ್ಕಾಗಿ ಹುಡುಕಾಡಲು, ನಾರದರಿಂದ

ಅಗಸ್ತ್ಯರ ಬಳಿಯಿರುವ ಪವಿತ್ರ ತೀರ್ಥದ ಬಗ್ಗೆ ತಿಳಿದನು. ಅವರ ಸಲಹೆ ಮೇರೆಗೆ ಅದನ್ನು ಪಡೆಯಲು ಗಣಪತಿಯ ಸಹಾಯ ಬೇಡಿದನಂತೆ.ಗಣಪತಿಯು ಒಂದು ಕಾಗೆಯ ರೂಪವನ್ನು ಹೊಂದಿ, ಅಗಸ್ತ್ಯರನ್ನು ಹಿಂಬಾಲಿಸಿದನು. ಒಮ್ಮೆ ಅಗಸ್ತ್ಯರು ಧ್ಯಾನಾಸಕ್ತರಾಗಿದ್ದಾಗ ಕಾಗೆಯ ರೂಪಿ ಗಣಪ ಅವರ ಕಮಂಡಲದ ಮೇಲೆ ಕುಳಿತು ಅದನ್ನು ಉರುಳಿಸಿ, ಅದರೊಳಗಿದ್ದ (ಕಾವೇರಿ) ಪವಿತ್ರ ತೀರ್ಥವು ಹರಿಯುವಂತೆ ಮಾಡಿದನು. ಇದನ್ನು ಕಂಡ ಮುನಿಗಳು ಏನಾಗಿದೆಯೆಂದು ತಿಳಿಯುವಷ್ಟರಲ್ಲಿ ಕಾಗೆಯ ರೂಪಿ ಗಣಪನು ಪುಟ ಬಾಲಕನಾಗಿ ಕಾಣಿಸಿ ಕೊಂಡನಂತೆ. ಅಗಸ್ತ್ಯರು ಈ ಕೆಲಸವು ಬಾಲಕನ ತುಂಟತನ ದಿಂದಾಗಿ ದಯೆಯೆಂದು ಭಾವಿಸಿ, ಆತನ ತಲೆಯನ್ನು ತಮ್ಮ ಮುಷ್ಟಿಯಿಂದ ಹಿಡಿದು ಗುದ್ದಲು ಪ್ರಯತ್ನಿಸಲು ಮುಂದಾದಾಗ, ಗಣಪನು ತನ್ನ ನಿಜ ರೂಪವನ್ನು ತೋರಿದನು.ತಾವು ಮಾಡಲು ಹೊರಟಿದ್ದ ತಪ್ಪಿಗಾಗಿ ಪಶ್ಚಾತ್ತಾಪ ಪಟ್ಟು ಗಣಪನಲ್ಲಿ ಕ್ಷಮೆ ಯಾಚಿಸಿದರಂತೆ. ಪರಿಹಾರವಾಗಿ ಅಲ್ಲಿಯೇ ಶಿವ ಹಾಗೂ ಗಣಪನ ಪ್ರತಿಷ್ಠಾಪನೆ ಮಾಡಿ ಪೂಜಿಸಿದರಂತೆ. ಅಲ್ಲಿಯೇ ಇದ್ದ ಅಶ್ವಥ ಮರದ ಬಳಿ ಬ್ರಹ್ಮ, ವಿಷ್ಣು, ಮಹೇಶ್ವರರು ಮುನಿಗಳಿಗೆ ದರ್ಶನವಿತ್ತರಂತೆ. ಅಂದಿನಿಂದ ಕಾವೇರಿಯು ಇಲ್ಲಿ ಲೋಕ ಪಾವನೆಯಾಗಿ ಚಿಮ್ಮಿ ನದಿಯಾಗಿ ಹರಿಯುತ್ತಿದ್ದಾಳೆ.ಈ ಘಟನೆಯ ಸಾಕ್ಷಿಯಾಗಿ ಶಿವ ಮತ್ತು ಗಣಪನ ದೇವಾಲಯ ಗಳು ಇಲ್ಲಿವೆ.

ಮಹಾಭಾರತದ ಆದಿಪರ್ವದಲ್ಲಿ ಅರ್ಜುನನು ತೀರ್ಥಯಾತ್ರೆ ಕೈಗೊಂಡ ಸಂದರ್ಭದಲ್ಲಿ ಈ ನದಿಯಲ್ಲಿ ಮಿಂದನೆಂದು ರಾಜಸೂಯ ಯಾಗದ ಸಂದರ್ಭದಲ್ಲಿ ನಕುಲನು ಇಲ್ಲಿಗೆ ಭೇಟಿಯಿತ್ತನೆಂದು ಹೇಳಲಾಗುತ್ತದೆ.

**ಐತಿಹಾಸಿಕ ಹಿನ್ನೆಲೆ:**

ಹಿಂದೆ ಈ ಪ್ರದೇಶವನ್ನು ಕದಂಬರು, ಗಂಗರು, ಹೊಯ್ಸಳರು, ವಿಜನಗರದೊಡೆಯರು ಆಳ್ವಿಕೆ ನಡೆಸಿದ್ದಾರೆ. ಮಯೂರ ವರ್ಮ,ವೆಂಕಪ್ಪಯ್ಯ,ಲಿಂಗರಾಜ ಶಂಕರನಾರಾಯಣಭಟ್ಟ, ನಂಜರಾಜ, ಪಿರಿಯರಾಜ, ಟಿಪ್ಪುಸುಲ್ತಾನ, ದೊಡ್ಡವೀರ ರಾಜೇಂದ್ರ ಇತರರು ಈ ಪ್ರದೇಶದ ಅಭಿವೃದ್ಧಿಗೆ ಕಾರಣರಾಗಿದ್ದಾರೆ. ಕಾವೇರಿ ನದಿಯು ಹರಿಯುವ ಅನೇಕ ಭಾಗಗಳ ದಡದಲ್ಲಿ ಶ್ರೀರಂಗಪಟ್ಟಣ, ಶಿಂಷಾ, ಶ್ರೀರಂಗಂ, ಕುಂಬಕೋಣಂನಂತಹ ಕ್ಷೇತ್ರಗಳು ಪವಿತ್ರಯಾತ್ರಾ ಸ್ಥಳಗಳಿವೆ. ಚುಂಚನಕಟ್ಟೆ, ಕೆ.ಆರ್.ಎಸ್.ನ ಬೃಂದಾವನ ಗಾರ್ಡನ್, ರಮಣೀಯ ಪ್ರಕೃತಿಯ ಪ್ರೇಕ್ಷಣೀಯ ಸ್ಥಳಗಳು ಈ ನದಿಯ ದಡದಲ್ಲಿವೆ. ಕಾವೇರಿಯು ತನ್ನ ಹರಿವ ಪಥದಲ್ಲಿ ಗಗನಚುಕ್ಕಿ, ಭರಚುಕ್ಕಿ, ಹೊಗೆನಿಕಲ್ ಎಂಬ ಹೆಸರಿನ ರಮಣೀಯ ಜಲಪಾತಗಳ ಸೃಷ್ಟಿಯಲ್ಲೂ ಸುಂದರವಾಗಿ ಕಾಣುತ್ತಾಳೆ. ಈ ನದಿಯಲ್ಲಿ ಮಿಂದು ಪಿತೃದೇವತೆಗಳಿಗೆ ತರ್ಪಣ ನೀಡುವ ಪವಿತ್ರ ಕಾರ್ಯಗಳು ಪ್ರಮುಖ ಧಾರ್ಮಿಕ ಕಾರ್ಯಗಳಲ್ಲಿ ಒಂದಾಗಿದೆ.ಹೇಮಾವತಿ,ಶಿಂಗಿ,ಅರ್ಕಾತಿ, ಕುಂಬಿನಿ, ಭವಾನಿ, ನೋಯ್ಯಾಲ್,ಅಮವರಾತಿಯ ನದಿಗಳು ಕಾವೇರಿಯ ಉಪನದಿಗಳಾಗಿವೆ.

**ಇಲ್ಲಿನ ಪ್ರಮುಖ ದೇವಾಲಯಗಳು ಹಾಗೂ ಪ್ರೇಕ್ಷಣೀಯ ಸ್ಥಳಗಳು:**

**ತಲಕಾವೇರಿ :**

ಇದು ಭಾಗಮಂಡಲದಿಂದ ೨ ಕಿ.ಮೀ. ದೂರದಲ್ಲಿ ಬ್ರಹ್ಮಗಿರಿಯಲ್ಲಿದೆ.ಇದು ಕಾವೇರಿಯ (ಮೂಲ) ಉಗಮ ಸ್ಥಾನವಾಗಿದ್ದು ಸಮುದ್ರ ಮಟ್ಟದಿಂದ ಸುಮಾರು ೧೨೭೬ ಮೀಟರ್ ಎತ್ತರದಲ್ಲಿದೆ. ಭಗಂಡೇಶ್ವರ ಕ್ಷೇತ್ರವೆಂದು ಕರೆಯಲಾಗುತ್ತದೆ. ಇಲ್ಲಿ ಪ್ರತೀವರ್ಷವು ತುಲಾ ಸಂಕ್ರಮಣದ ದಿನ ಇಲ್ಲಿನ ಕುಂಡಿಕೆಯಲ್ಲಿ ಕಾವೇರಿ ತೀರ್ಥೋದ್ಭವವಾಗುತ್ತದೆ. ಸಹಸ್ರಾರು ಸಂಖ್ಯೆಯಲ್ಲಿ ಜನರು ಇಲ್ಲಿಗೆ ಆಗಮಿಸಿ ಈ ಘಟನೆಗೆ ಸಾಕ್ಷಿಯಾಗುತ್ತಾರೆ. ಇದರ ಮುಂಭಾಗದ ಕಲ್ಯಾಣಿಯಲ್ಲಿ ತೀರ್ಥದಲ್ಲಿ ಮಿಂದು ಜನರು ಪಾವನಗೊಳ್ಳುತ್ತಾರೆ.

**ಶಿವನ ದೇವಾಲಯ :**

ವಿಶೇಷ ರೂಪದಲ್ಲಿನ ಶಿವಲಿಂಗವಿರುವ (ಅಗಸ್ತ್ಯೇಶ್ವರ) ಈ ದೇವಾಲಯವು ಸುಂದರವಾಗಿದ್ದು ಪಕ್ಕದಲ್ಲೇ ಇದೆ.

**ವಿನಾಯಕನ ದೇವಾಲಯ:**

ಇಲ್ಲಿನ ಪುಟ್ಟ ಗುಡಿಯೊಳಗಿನ ಗಣಪನು ಇಲ್ಲಿನ ಪ್ರತಿಯೊಂದು ಘಟನೆಗೆ ಸಾಕ್ಷಿಯಾಗಿ ನೆಲೆನಿಂತಿದ್ದಾನೆ.

**ಬ್ರಹ್ಮಗಿರಿ :**

ಈ ಪ್ರದೇಶವು ದೇವಾಲಯಗಳಿಂದ ಬಲಭಾಗದಲ್ಲಿದ್ದು ಅನೇಕ ಮೆಟ್ಟಿಲುಗಳನ್ನು ಹೊಂದಿದೆ. ಇದನ್ನು ಏರಿ ಸಾಗಿದರೆ ಬೆಟ್ಟದ ತುದಿಯನ್ನು ತಲುಪುತ್ತೇವೆ.ಇಲ್ಲಿಂದ ಸುಂದರ ಬೆಟ್ಟಗಳ ಸಾಲಿನ ಪ್ರಾಕೃತಿಕ ಸೊಬಗನ್ನು ಮನದಣಿಯ ಕಾಣಬಹುದು. ಇದು ಸಪ್ತಋಷಿಗಳ ಪಾದ ಸ್ಪರ್ಶವಾದ ಹಾಗೂ ತಪಗೈದ ಪವಿತ್ರ ಸ್ಥಳವಾಗಿದೆ.

**ಭಾಗಮಂಡಲ:**

ಇದು ತಲಕಾವೇರಿಯಿಂದ ಸುಮಾರು ೮ ಕಿ.ಮೀ. ದೂರದಲ್ಲಿದೆ. ಇಲ್ಲಿ ಕಾವೇರಿ ಕನಿಕೆ, ಸುಜ್ಯೋತಿಯ ಸಂಗಮ ಸ್ಥಾನವಿದ್ದು, ದಡದಲ್ಲಿ ಭಗಂಡೇಶ್ವರ, ಗಣಪತಿ, ವಿಷ್ಣು, ಸುಬ್ರಮಣ್ಯ ದೇವಾಲಯಗಳಿವೆ.

ಹಿಂದೆ ಈ ಕ್ಷೇತ್ರಕ್ಕೆ ಪಾಂಡವರು ಭೇಟಿಯಿತ್ತ ಸಮಯದಲ್ಲಿ ಬಲಭೀಮನು ಊಟ ಮಾಡುವ ಸಮಯದಲ್ಲಿ ಆತನಿಗೆ ಸಿಕ್ಕ ಕಲ್ಲೊಂದನ್ನು ಪಕ್ಕಕ್ಕೆ ತೆಗೆದಿಟ್ಟನೆಂದು ಹೇಳಲಾಗುವ ಭೀಮನ ಕಲ್ಲು ಕಾಣಸಿಗುತ್ತದೆ. ಅಂತೆಯೇ ಟಿಪ್ಪು ಈ ಪ್ರದೇಶವನ್ನು ಸುತ್ತುವರೆದ ಸಂದರ್ಭದಲ್ಲಿ ಇಲ್ಲಿಯವರೆಗೂ ಭೇಟಿ ನೀಡಿದನೆಂಬುದಕ್ಕೆ ಇಲ್ಲಿನ ಸಲಾಂ ಕಲ್ಲು ಸಾಕ್ಷಿಯಾಗಿದೆ.

**ಇಲ್ಲಿಗೆ ಹತ್ತಿರವಿರುವ ಇನ್ನಿತರ ಪ್ರಮುಖ ಪ್ರೇಕ್ಷಣೀಯ ಸ್ಥಳಗಳು :**

ಓಂ ಕಾರೇಶ್ವರ ದೇವಾಲಯ, ಅಬ್ಬೆ (ಅಬ್ಬಿ) ಫಾಲ್ಸ್, ಮಡಿಕೇರಿ ಕೋಟೆ, ರಾಜಾಸೀಟ್, ದುಬಾರೆ ಫಾರೆಸ್ಟ್ (ಆನೆಗಳ ಖೆಡ್ಡಾ, ಎಲಿಫೆಂಟ್ಸ್ ಕ್ಯಾಂಪ್), ಕಾವೇರಿ ನಿಸರ್ಗ ಧಾಮ, ಹಾರಂಗಿ ಡ್ಯಾಮ್, ಬೈಲಕುಪ್ಪೆ ಗೋಲ್ಡನ್ ಟೆಂಪಲ್, ಇರುಪ್ಪಾ ಫಾಲ್ಸ್.



ತಿರುಮಲೆ ತಿರುಪತಿ ದೇವಸ್ಥಾನಗಳು

# ತಿರುಚಾನೂರು ಶ್ರೀ ಪದ್ಮಾವತೀ ಅಮ್ಮನವರ ವಾರ್ಷಿಕ ಬ್ರಹ್ಮೋತ್ಸವ

11-11-2020
ರಿಂದ
19-11-2020
ರ ವರೆಗೆ

11-11-2020
ಬುಧವಾರ
ಹಗಲು : ಧ್ವಜಾರೋಹಣ
ರಾತ್ರಿ : ಚಿಕ್ಕಶೇಷವಾಹನ

12-11-2020
ಗುರುವಾರ
ಹಗಲು : ದೊಡ್ಡಶೇಷವಾಹನ
ರಾತ್ರಿ : ಹಂಸವಾಹನ

13-11-2020
ಶುಕ್ರವಾರ
ಹಗಲು : ಮುತ್ತಿನಚಪ್ಪರವಾಹನ
ರಾತ್ರಿ : ಸಿಂಹವಾಹನ

14-11-2020
ಶನಿವಾರ
ಹಗಲು : ಕಲ್ಪವೃಕ್ಷವಾಹನ
ರಾತ್ರಿ : ಹನುಮದ್ವಾಹನ

15-11-2020
ಭಾನುವಾರ
ಹಗಲು : ಪಲ್ಲಕ್ಕಿ ಉತ್ಸವ
ಸಾ॥ : ವಸಂತೋತ್ಸವ
ರಾತ್ರಿ : ಗಜವಾಹನ

16-11-2020
ಸೋಮವಾರ
ಹಗಲು : ಸರ್ವಭೂಪಾಲವಾಹನ
ರಾತ್ರಿ : ಗರುಡವಾಹನ

17-11-2020
ಮಂಗಳವಾರ
ಹಗಲು :ಸೂರ್ಯಪ್ರಭವಾಹನ
ರಾತ್ರಿ : ಚಂದ್ರಪ್ರಭವಾಹನ

18-11-2020
ಬುಧವಾರ
ಹಗಲು : ರಥೋತ್ಸವ
ರಾತ್ರಿ : ಅಶ್ವವಾಹನ

19-11-2020
ಗುರುವಾರ
ಹಗಲು : ಚಕ್ರಸ್ನಾನ
ರಾತ್ರಿ : ಧ್ವಜಾವರೋಹಣ



ಅಮ್ಮನವರ ದರ್ಶನ
ಆನಂದಕರ..
ಆಶ್ಚರ್ಯಕರ..
ಆರೋಗ್ಯಕರ..

# ಕನಕದಾಸರ ಕಾರ್ಪಣ್ಯ



-ಡಾ|| ವಾಸುದೇವ ಅಗ್ನಿಹೋತ್ರಿ

ರಾಷ್ಟ್ರೀಯ ಸಂತ ಕವಿ ಕನಕದಾಸರ ಸಾಮಾಜಿಕ ಸಂವೇದನೆಯ ನೆಲೆಗಳು ಎಂಬ ವಿಚಾರ ಸಂಕಿರಣದಲ್ಲಿ ನಾನು ಮಾತಾಡಬೇಕಾದ ವಿಷಯ ಕನಕದಾಸರ ಕಾರ್ಪಣ್ಯ. ನಾವು ಸಹಜವಾಗಿ ಮಾತನಾಡುತ್ತಿರುವಾಗ ಕಷ್ಟ - ಕಾರ್ಪಣ್ಯ, ದುಃಖ ದುಮ್ಮಾನ, ನೋವು - ನಿರಾಸೆ, ಇಂತಹ ಜೋಡಿ ಶಬ್ದಗಳನ್ನು ಕೇಳುತ್ತಾ - ಬಳಸುತ್ತಾ ಬಂದಿದ್ದೇವೆ. ಈ ಶಬ್ದಗಳು ನಮ್ಮಂತಹ ಸಾಮಾನ್ಯರಿಗೆ ಸಹಜ. ಆದರೆ ಕನಕದಾಸರಂತಹ ಭಕ್ತರಿಗೆ ಸಂತರಿಗೆ ವಿಶೇಷವಾದವುಗಳು, ಕಷ್ಟಕಾರ್ಪಣ್ಯ ದ್ವಿರುಕ್ತಿ ಪದಗಳಲ್ಲ. ಜೋಡಿ ಪದಗಳು ನಿಜ. ಕಷ್ಟಸ್ಯ ಭಾವಃ ಕಾರ್ಪಣ್ಯ ಕಷ್ಟವೆಂದರೆ ಕಾಣುವ ಸಹಿಸಬಹುದಾದ ತೊಂದರೆ ಅಥವಾ ನೋವು ಕಾರ್ಪಣ್ಯವೆಂದರೆ ಕಾಣಲಾಗದ, ಸಹಿಸಲಾಗದ, ಆದರೆ ಅದರಿಂದ ವ್ಯಕ್ತಿತ್ವ ಪಕ್ವವಾಗುವ ಒಂದು ವಿಶಿಷ್ಟ ಆಧ್ಯಾತ್ಮ ಸಂವೇದನೆ ಅದು ಕಾವ್ಯ ರೂಪದಲ್ಲೋ, ಶ್ಲೋಕ ರೂಪದಲ್ಲೊ, ಸಾತ್ವಿಕರಿಂದ ಹೊರ ಹೊಮ್ಮುತ್ತದೆ. ಸಂತರಾದವರು ಶಾಪ ಕೊಡುವುದಿಲ್ಲ. ಅವರು ಪರೋಪಕಾರದ ಹಂತವನ್ನು ದಾಟಿ ಪ್ರಪಂಚದ ಎಲ್ಲ ಕಷ್ಟ ನಷ್ಟಗಳನ್ನು ಸಹಿಸಿ ಅದಕ್ಕೆ ಪ್ರತಿ ರೋಧಿಸದೆ, ಪರ್ಯಾಯ ಹುಡುಕದೇ ಅವೆಲ್ಲವೂ ಪರಮಾತ್ಮನು ಮಾಡಿದ ಪರೀಕ್ಷೆಗಳೆಂದು ತಿಳಿದು ಅವುಗಳಿಂದಲೇ ಪ್ರೇರಣೆ ಹೊಂದಿ ಅವೆಲ್ಲವನ್ನು ಮೀರಿ ನಿಂತ ಮಹಾನುಭಾವರು.

ಇಂತಹ ಹಲವಾರು ಸತ್ಪುರುಷರನ್ನು ಈ ದೇಶ ಕಂಡಿದೆ. ಮುಂದೆಯೂ ಕಾಣಬಹುದು. ಆದರೆ ಅವರನ್ನು ಗುರುತಿಸುವ, ಗೌರವಿಸುವ, ದಾಖಲಿಸುವ ಪ್ರಯತ್ನ ಇಂತಹ ಅಧ್ಯಯನ ಮತ್ತು ಸಂಶೋಧನಾ ಕೇಂದ್ರಗಳು ಮಾಡುತ್ತಿರುವುದು ಶ್ಲಾಘನೀಯ. ಇಲ್ಲಿರುವ ನಾವೆಲ್ಲರೂ ಸಂವಾದಕರನ್ನೊಳಗೊಂಡಂತೆ ಕನ್ನಡ ಸಾಹಿತ್ಯ ಕರ್ನಾಟಕದ ಇತಿಹಾಸ, ಕನ್ನಡ ನಾಡಿನಲ್ಲಿ ಉದಿಸಿದ ಧರ್ಮಗಳು ಸಂಸ್ಕೃತಿ ಮತ್ತು ಅನುಭಾವ ಚಳುವಳಿಗಳನ್ನು ಓದಿ, ಓದಿಸಿ ಬಲ್ಲವರಾಗಿದ್ದೇವೆ. ಈಗಾಗಲೇ ಕೆಲವು ಸ್ಥಾಪಿತ ಮೌಲ್ಯಗಳನ್ನು ದಾಖಲೆಗಳನ್ನು ಅಥವಾ ವಿದ್ವಾಂಸರ ಅಭಿಪ್ರಾಯಗಳನ್ನು ಈಗ ಇಲ್ಲಿ ಇನ್ನಷ್ಟು ಗಂಭೀರವಾಗಿ ಚರ್ಚಿಸಿ ಕನಕದಾಸರ ಜೀವನದ ಅದಕ್ಕಿಂತ ಮುಖ್ಯವಾಗಿ ಅವರು ರಾಷ್ಟ್ರೀಯ ಸಂತರಾಗುವಲ್ಲಿ ಕಾರ್ಪಣ್ಯಗಳನ್ನು ಪ್ರೇರಣೆಯನ್ನಾಗಿ ಮಾಡಿಕೊಂಡ ಸಕಾರಾತ್ಮಕ ಭಕ್ತರೇ ಕನಕದಾಸರೆಂದು ತಿಳಿಸುವುದು ನನ್ನ ಉಪನ್ಯಾಸದ ಪ್ರಬಂಧದ ಉದ್ದೇಶ.

ಯಾವುದೇ ಸಂತರ ಜೀವನ ಮತ್ತು ಸಮಾಜೋ ಆಧ್ಯಾತ್ಮಿಕ ಪರಸ್ಪರ ತಿಳಿಯಲು ದಾಖಲೆಗಳು ಬೇಕೆಂಬುದು ಸತ್ಯ. ಆದರೆ ವಿಶ್ವವೇ ಒಂದು ಪರಿವಾರದ ರೂಪದಲ್ಲಿ ಕಂಡ ದೃಷ್ಟಾರರಿಗೆ ದಾಖಲೆಗಳು ಹುಡುಕುವುದು ಕಷ್ಟ ವಾಗುತ್ತದೆ. ಒಂದು ವೇಳೆ ಸಿಕ್ಕರೂ ಹುಡುಕಿದವರು ಅಥವಾ ಅದನ್ನು ಉಪಯೋಗಿಸುವವರು ತಮ್ಮ ಸ್ವಾರ್ಥ ಹಾಗೂ ರಾಗದ್ವೇಷಗಳಿಗೆ ಅನ್ವಯಿಸಿ ಕೊಂಡಿರುವುದು ಮನುಕುಲದ ಕಥೆ. ಆದರೆ ಕನಕದಾಸರ ಕಥೆಯೇ ಬೇರೆ ವಿದ್ಯಾವಾಚಸ್ಪತಿ ಬನ್ನಂಜೆ ಗೋವಿಂದಾಚಾರ್ಯರು ಹೇಳುವಂತೆ ಕನಕದಾಸರ ಕಾರ್ಪಣ್ಯದ ಜೀವನವು ಭಕ್ತನ



ಬೆನ್ನು ಹತ್ತಿದ ಭಗವಂತನ ಕಥೆ ಇದು ಮಾರ್ಜಾಲ ಕಿಶೋರ ನ್ಯಾಯದಂತೆ. ಈ ಒಂದು ಸಂಕಿರಣದ ಸಮನ್ವಯಾಧಿ ಕಾರಿಗಳು ಈಗಾಗಲೇ ದೂರವಾಣಿಯಲ್ಲಿ ನನಗೆ ಚರ್ಚೆಗೆ ಹೆಚ್ಚು ಅವಕಾಶ ಕೊಡಿ ಎಂದು ಹೇಳಿದ್ದಾರೆ. ಆದರೆ ನಾನೇನಾದರೂ ಹೇಳಬೇಕಲ್ಲ, ನನಗೆ ಕೊಟ್ಟ ಇಪ್ಪತ್ತು ನಿಮಿಷಗಳು ಸೂತ್ರ ರೂಪದಲ್ಲಿ ಕೆಲವು ವಿಷಯಗಳನ್ನು ಮಂಡಿಸುತ್ತೇನೆ ಹಾಗೂ ಇನ್ನೂ ಖಚಿತವಾಗಲೆಂದು ನಮ್ಮ ಹಿರಿಯ ಸ್ನೇಹಿತರಾದ ಡಾ.ಎಂ.ಜೆ.ದೇಶಪಾಂಡೆ, ಅವರ ಸಹಯೋಗದೊಂದಿಗೆ ರೇಖಾಚಿತ್ರ ಹಾಗೂ Color Shade ನಲ್ಲಿಯೂ ಮಾಡಿ ತಂದಿದ್ದೇನೆ. ದಯವಿಟ್ಟು ಗಮನಿಸಿ ನನ್ನ ವಿಚಾರ - ಹೇಳುವುದು ಚಿತ್ರ ತೋರಿಸುವುದು ಮುಗಿದ ಮೇಲೆ ಚರ್ಚಿಸೋಣ.

ಕನಕದಾಸರ ಇಡೀ ಜೀವನವನ್ನು ಹಾಗೂ ಅವರ ಸಂತರಾಗುವ ಉಜ್ಜೀವನವನ್ನು ಈ ಮುಂದೆ ವಿವರಿಸಲಾಗಿದೆ. ಸಾಮಾನ್ಯರಂತೆ ಜೀವನದಲ್ಲಿ ಬಂದೊದಗಿದ ಕೆಲವು ಕಷ್ಟಗಳನ್ನು ನೋಡೋಣ.

೧) ಬಾಲ್ಯದಲ್ಲಿಯೇ ತಂದೆಯ ಸಾವು

2) ೪-೫ ವರ್ಷದವರಿದ್ದಾಗ ಪಾಲಕ ಹನುಮಪ್ಪನ ಆಶ್ರಯದಿಂದ ತಪ್ಪಿಸಿಕೊಳ್ಳುವುದು.

೩) ಊರಿಗೆ ಬಂದಾಗ ನೆಲೆ ಇಲ್ಲದಾಗುವುದು

೪) ಹೆಂಡತಿ ಮತ್ತು ಮಗನ ಸಾವು

೫) ಯುದ್ಧದಲ್ಲಿ ಗಾಯ.

ಆದರೆ ಅವರ ಭಾಗ್ಯ ಇದಕ್ಕಿಂತ ದೊಡ್ಡದ್ದು. ಅದೇನೆಂದರೆ ಕೊಪ್ಪರಿಗೆ ಹೊನ್ನು ಕೊಟ್ಟು ಪುನಃ ಪುನಃ ಕನಸಿನಲ್ಲಿ ಬಂದು ದಾಸನಾಗಲು ಕರೆಯುತ್ತಿರುವ ಹಾಗೂ ಬರುವವರೆಗೆ ಕಾಯುತ್ತಿರುವ ಭಗವಂತ.

ಕನಕದಾಸರು ಬದುಕಿ ಬಾಳಿದ ಮೊದಲಿನ ೬ ದಶಕಗಳು ಧರ್ಮ ಸಾಮ್ರಾಜ್ಯ, ಆಡಳಿತದಲ್ಲಿರುವ ಕಾಲ. ಅದರಲ್ಲೂ ದಾಸ ಸಾಹಿತ್ಯದ ಸುವರ್ಣಯುಗ. ಸಮಗ್ರ ಚಿತ್ರಣವನ್ನು ಅವಲೋಕಿಸಿದ್ದೇ ಆದರೆ ನಮಗೆ ತಿಳಿದುಬಂದಿರುವ ಹಾಗೆ ಸಾಂಪ್ರದಾಯಿಕ ಮನೋವೃತ್ತಿಯಿಂದ ತುಸು ಭಿನ್ನವಾಗಿ ಹಾಡತೊಡಗಿದ ಕನಕದಾಸರ ವಾಣಿ ಆ ಯುಗದ ಹೆಮ್ಮೆ ಎಂದು ಡಾ: ಜಿ.ವರದರಾಜರಾವ್ ಹೇಳಿದ ಮಾತು ಸರಿ ಎನಿಸುತ್ತದೆ.ಎಲ್ಲ ಗೊಂದಲಗಳನ್ನು ದೂರ ಸರಿಸಿ ಕನಕ ದಾಸರು ಕುರುಬರು ಎಂದು ದೃಢವಾಗಿ ಹೇಳಿದವರು ಶ್ರೀಮತಿ ಜ್ಯೋತಿ ಹೊಸೂರ . ಹೀಗಾಗಿ ಕನಕದಾಸರ ಬಗ್ಗೆ ಅಧ್ಯಯನ ಮಾಡುವುದರಿಂದ ದಾಸ ಸಾಹಿತ್ಯದ ಸಮಾಜಿಕ ಒಳ ಹರಿವು ತಿಳಿಯುತ್ತದೆ.

ಕನಕದಾಸರು ಮೂಢ ಸಂಪ್ರದಾಯ ವಿರೋಧಿಗಳಾಗಿದ್ದರು. ಆದರೆ ಸಂಪ್ರದಾಯ ವಿರೋಧಿಗಳಲ್ಲ. ಕಂದಾಚಾರಗಳನ್ನು ವಿರೋಧಿಸುತ್ತಾರೆ. ಆದರೆ ಸದಾಚಾರ ವಿರೋಧಿಗಳಲ್ಲ. ಹಾಗಾದರೆ ಕನಕದಾಸರ ಸಂಪ್ರದಾಯ ಯಾವುದು? ಆಧ್ಯಾತ್ಮಿಕ ಸಾಧನೆಯಲ್ಲಿ ಅವರು ನಡೆದ ದಾರಿ ಯಾವುದು? ಅದನ್ನು ನಡೆಯುವಾಗ ಅವರಿಗೆ ಬಂದೊದಗಿದ ಒಳಪ್ರಶ್ನೆಗಳೇ ಕಾರ್ಪಣ್ಯಗಳು. ಅವರದು ವಿಶಾಲ ಹೃದಯ, ದೂರದೃಷ್ಟಿಕೋನ.

ಪ್ರಾರಂಭದಲ್ಲಿ ಕನಕದಾಸರು ವೀರಶೈವರಿಗೆ ವೀರಶೈವರಾಗಿ ಕಾಣುತ್ತಾರೆ. ಮುಂದೆ ಭಾಗವತರಿಗೆ ಭಾಗವತರಂತೆ ಕಾಣುತ್ತಾರೆ.ನಂತರ ರಾಮಾನುಜ ಪಂಥದವರಿಗೆ ರಾಮಾನುಜ ಪಂಥದವರಾಗಿ ಕಾಣುತ್ತಾರೆ ಕೊನೆಯಲ್ಲಿ ಮಾಧ್ವರಿಗೆ ಮಾಧ್ವರಾಗಿ ಕಾಣುತ್ತಾರೆ.

ಕನಕದಾಸರು ತಮ್ಮ ಆತ್ಮ ಚಕ್ಷುವಿನ ವಿವೇಕದಿಂದ ಮುಂದುವರಿಯುತ್ತಾರೆ. ವಾಸ್ತವವಾಗಿ ಕನಕದಾಸರು ಏನು? ಅವರ ಇಷ್ಟವೇನು? ಎಂದು ಯಾರೂ ಯೋಚಿಸುವುದಿಲ್ಲ. ನಮ್ಮ ಇಷ್ಟವೇ ಅವರ ಇಷ್ಟವೆಂದು ಭ್ರಮಿಸಿ ಬಿಡುತ್ತೇವೆ. ಎಲ್ಲರ ವಾದವು ಸತ್ಯ ಹೌದು. ಸುಳ್ಳೂ ಹೌದು. ಸತ್ಯಕ್ಕೆ ಸುಳ್ಳಿನ ಬೇಲಿ, ಸುಳ್ಳಿಗೆ ಸತ್ಯದ ಮುಖವಾಡ. ಹೀಗಾಗಿ ಎಲ್ಲವೂ ನಿಜ ಆದರೆ ಯಾವುದೂ ಪೂರ್ತಿ ಸತ್ಯ ಅಲ್ಲವೆಂಬ ಬನ್ನಂಜೆಯವರ ಈ ಮಾತು ನಮಗೆ ಮುಂದೆ ಯೋಚಿಸಲು ದಾರಿ ದೀಪವಾಗುತ್ತದೆ.

ಕಾರ್ಪಣ್ಯದ ಮೂಲ ನೆಲೆಯೆಂದರೆ ಕನಕದಾಸರು ವ್ಯವಸ್ಥೆಯ ಒಳಗಡೆಯೇ ಇದ್ದು, ತಮಗಾದ ಅವಮಾನವನ್ನು ನೋವು ಮತ್ತು ಕಷ್ಟಗಳನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಆಗಾಗ ಸಾತ್ವಿಕ ಪ್ರತಿಕ್ರಿಯೆ ನೀಡುತ್ತಾ ತಮ್ಮ ಸಹಜವಾದ ಸ್ವರೂಪ, ಖಚಿತವಾದ ಪ್ರವೃತ್ತಿ ಮತ್ತು ಅದ್ವಿತೀಯವಾದ ಯೋಗ್ಯತೆಗಳಿಂದ ಪ್ರಭಾವ ಬೀರಿದರು. ತಮ್ಮ ಅಂತರಾತ್ಮದ ಕರೆಯನ್ನು ಯಾವಾಗಲೂ ಆಲಿಸುತ್ತಲೇ ಅಸೂಯಾಭಾವದ ಎದುರಾಳಿಗಳನ್ನು ಸಾತ್ವಿಕ ರೂಪದ ಸಾಹಿತ್ಯ ಮಾರ್ಗದಲ್ಲಿ ಉತ್ತರಿಸಿದರು. ಪರ್ಯಾಯ ಮಾರ್ಗ ಹಿಡಿಯಲಿಲ್ಲ. ಅವರು ವ್ಯಾಸರಾಯರ ಶಿಷ್ಯತ್ವ, ಪುರಂದರದಾಸರ ಸ್ನೇಹ, ದಾಸ ಸಾಹಿತ್ಯದ ಸೃಜನಶೀಲತೆ ಬಿಡಲಿಲ್ಲ.

ಕೊರಟಿ ಶ್ರೀನಿವಾಸರಾವ್ ಒಬ್ಬ ಇತಿಹಾಸ ತಜ್ಞರು ಹಾಗೂ ಕಾದಂಬರಿಕಾರರು ವಿಜಯನಗರದ ಇತಿಹಾಸವನ್ನು ಬರೆದವರು. ಇಮ್ಮಡಿ ಪುಲಕೇಶಿ ಎಂಬ ಕೃತಿಯನ್ನು ಬರೆದಿದ್ದಾರೆ.

ಅವರ ಹಲವಾರು ಕೃತಿಗಳು ಚಲನಚಿತ್ರ ರೂಪ ಕಂಡಿವೆ. ಅವರು ಶ್ರೀ ಕನಕದಾಸರು ಎಂಬ ಸುದೀರ್ಘವಾದ ೫೬೦ ಪುಟಗಳ ಜೀವನ ಚರಿತ್ರೆಯನ್ನು ಬರೆದು ೧೯೯೨ ರಲ್ಲಿ ಕಾಗಿ ನೆಲೆಯ ಶ್ರೀ ಕನಕಗುರು ಪೀಠದ ಪ್ರಥಮ ಪೀಠಾಧಿ ಪತಿಗಳಾದ ಶ್ರೀ ಶ್ರೀ ಶ್ರೀ ಬೀರೇಂದ್ರ ಕೇಶವ ತಾರಕಾನಂದಪುರಿ ಮಹಾಸ್ವಾಮಿಗಳ ಸನ್ನಿಧಿಗೆ ಅರ್ಪಿಸುತ್ತಾರೆ ಹಾಗೂ ಸ್ವಾಮೀಜಿ ಗಳು ಮುನ್ನುಡಿಯನ್ನ ಬರೆದಿದ್ದಾರೆ. ಅವರ ವಿದ್ವತ್ ಪೂರ್ಣ ಹೇಳಿಕೆಯ ಪ್ರಕಾರ ಕನಕದಾಸರು ೪- ೫ ವರ್ಷದವರಿದ್ದಾಗ ತಪ್ಪಿಸಿಕೊಂಡು ದಾರಿಹೋಕರಾದ ಗೊರವರ ಜೊತೆ ಹೋಗಿ ಶ್ರೀಶೈಲದ ವೀರಶೈವ ಮಠವೊಂದರಲ್ಲಿ ಶೈವಾಗಮಗಳನ್ನು ಹಾಗೂ ಇತರೆ ಶಾಸ್ತ್ರಗಳನ್ನು ಕಲಿಯುತ್ತಾರೆ. ಅಲ್ಲಿ ವಿದ್ವತ ಗೋಷ್ಠಿವೊಂದರಲ್ಲಿ ಸೋಲುವ ಸಂದರ್ಭದಲ್ಲಿ ಪರಮಾತ್ಮನು ಕನಸಿನಲ್ಲಿ ಬಂದು ನಿನಗೇನು ಬೇಕು ಎಂದು ಕೇಳಿದಾಗ ನನಗೆ ಪಾಣಿನಿಯ ಅಷ್ಟಾಧ್ಯಾಯ ಕಲಿಸು ಎಂದು ಕೇಳುತ್ತಾರೆ. ಇದು ಕನಕದಾಸರಿಗೆ ಬಂದೊದಗಿದ ಪ್ರಥಮ ಕಾರ್ಪಣ್ಯ. ಪರಮಾತ್ಮನು ಕರುಣಿಸಿ ದಾಸನಾಗಲು ಕೇಳುತ್ತಾನೆ. ಆದರೆ ಕನಕದಾಸರು ಒಪ್ಪುವುದಿಲ್ಲ. ಕೆಲ ವರ್ಷಗಳ ನಂತರ ಕನಕ ದಾಸರು ತಾತಾಚಾರ್ಯರ ಸಂಪರ್ಕದಲ್ಲಿ ಬಂದು ರಾಮಾ ನುಜ ತತ್ವದ ಬೆಳಕಿನಲ್ಲಿ ಸಾಹಿತ್ಯ ಸಂಸ್ಕೃತಿ, ವೈದಿಕ ಧರ್ಮ, ಷಡ್ ದರ್ಶನಗಳು ಜೊತೆಗೆ ಪ್ರಸ್ಥಾನತ್ರಯಗಳನ್ನು ಓದುತ್ತಾರೆ. ತಾತಾಚಾರ್ಯರು ಅವರಿಗೆ ಸಾಕಷ್ಟು ಮಾರ್ಗದರ್ಶನ ಮಾಡುತ್ತಾರೆ. ಭಗವಂತ ಕನಸಿನಲ್ಲಿ ಬಂದಾಗ ಕನಕದಾಸರು ತಾತಾಚಾರ್ಯರಲ್ಲಿ ಶಿಷ್ಯರಾಗುವ ಕೋರಿಕೆ ಕೇಳಿದಾಗ ಅದನ್ನೂ ಈಡೇರಿಸಿ ದಾಸನಾಗಲು ಪುನಃ ಪ್ರಸ್ತಾಪಿಸುತ್ತಾನೆ. ಆಗಲೂ ಕನಕದಾಸರು ಒಪ್ಪುವುದಿಲ್ಲ.

ಯುದ್ಧವೊಂದರಲ್ಲಿ ಸೋತು ಗಾಯದಿಂದ ನರಳು ತ್ತಿರುವಾಗ ಭಗವಂತನು ಬಂದು ದಾಸನಾಗುವೆಯಾ ಎಂದು ಕೇಳಿದಾಗ ನನ್ನ ಗಾಯದ ನೋವು ಕಡಿಮೆ ಮಾಡಿಸುವೆಯಾ ಎಂದು ಕೇಳುತ್ತಾನೆ. ಭಗವಂತನು ಸ್ವತಃ ಔಷಧೋಪಚಾರ ಮಾಡಿ ಚೇತರಿಸುವ ಹಾಗೆ ಮಾಡುತ್ತಿರುವಾಗ ಕನಕದಾಸರು ಅರೆ ಪ್ರಜ್ಞೆಯಲ್ಲಿ ಯಾರು ಉಪಚರಿಸುವುದು ವಧೂಟಿಯೇ (ಹೆಂಡತಿ)? ಎಂದಾಗ ಪರಮಾತ್ಮನಿಗೆ ತುಂಬಾ ನಿರಾಶೆಯಾಗಿ ತನ್ನ ನಿಜರೂಪ ಹಾಗೂ ದಾಸರ ನೈಜ ಸ್ವರೂಪ ಜ್ಞಾನವನ್ನು ನೀಡಿ ದಾಸನಾಗಲು ಒಪ್ಪುವಂತೆ ಮಾಡುತ್ತಾನೆ. ಇದು ಅವರ ಮೂರನೇ ಕಾರ್ಪಣ್ಯ.

ನಂತರದ ಅವರ ಪ್ರಯಾಣ ಹಂಪಿಯ ಕಡೆಗೆ ಬರುತ್ತದೆ. ಅನಂತರ ವ್ಯಾಸರಾಯರ ಸಂಪರ್ಕಕ್ಕೆ ಬಂದು ದ್ವೈತ ದರ್ಶನದ ಹಿನ್ನೆಲೆಯಲ್ಲಿ ಕೀರ್ತನೆಗಳನ್ನು ಬರೆಯುತ್ತ ವ್ಯಾಸರಾಯರ ಶಿಷ್ಯರಾಗುತ್ತಾರೆ. ಕೊರಟಿ ಶ್ರೀನಿವಾಸರಾವ್ ಅವರ ಈ ಎಲ್ಲ ವಿಚಾರಗಳನ್ನು ಮುಂಬೈ ವಿಶ್ವವಿದ್ಯಾಲಯದ ಶ್ರೀಮತಿ ಮೇಧಾ ಕುಲಕರ್ಣಿ ಅವರು ಒಪ್ಪಿ ಸಮರ್ಥಿಸಿ, ಎಂ. ಫಿಲ್. ಪದವಿ ಪಡೆದು ಪ್ರಬಂಧವನ್ನು ೨೦೦೭ ರಲ್ಲಿ ಪ್ರಕಟಿಸಿ ದ್ದಾರೆ.

ಈವರೆಗೆ ಬಂದ ಅನೇಕ ವಿದ್ವಾಂಸರಾದ ದೇ.ಜ.ಗೌ. ಕುಷ್ಟಗಿ, ವರದರಾಜರಾವ್, ಕೆ. ಎಂ. ಕೃಷ್ಣರಾವ್ ಮೊದಲಾದ. ಎಲ್ಲ ಹಿರಿಯರು ಕನಕದಾಸರ ಆತ್ಮನಿವೇದನೆ ಮತ್ತು ಸಾಹಿತ್ಯ ಸಾಧನೆ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ.

ಕಾರ್ಪಣ್ಯದ ಮೂಲ ಪ್ರಾರಂಭವಾದದ್ದು ಕನಕದಾಸರ ರಾಜಸ ಸ್ವಭಾವ ಸಾತ್ವಿಕ ಗುಣ, ಮತ್ತು ತಾಮಸ ಸಾಮಾಜಿಕ ಪರಿಸ್ಥಿತಿಯಲ್ಲಿ. ಹೀಗಾಗಿ ಪಾರಿವಾರಿಕ ಕಷ್ಟಗಳ ಜೊತೆ ಬಂದ ವ್ಯಯಕ್ತಿಕ ಕಾರ್ಪಣ್ಯಗಳನ್ನು ಸಹಿಸಿ, ಶೋಧಿಸಿ, ಹೊಂದಿಸಿ, ಅವರು ಅಪ್ಪಟ ಅಪರಂಜಿಯಾದರು. ಇದಕ್ಕೆ ನಿದರ್ಶನವೆಂದರೆ ಯತಿವರೇಣ್ಯರಾದ ವಾದಿರಾಜರು ತುಂಬಾ ಅಭಿಮಾನದಿಂದ ಇವರನ್ನು ಅಭಿನಂಧಿಸಿ ಕೃಷ್ಣ ಭಕ್ತಿಗಾಗಿ ತಬ್ಬಿಕೊಂಡದ್ದು. ಹಾಗೂ ಭಕ್ತ ಕನಕದಾಸರು ಎಂದು ಮಠದಲ್ಲಿ ಘೋಷಣೆ ಮಾಡಿದ್ದು. ಗುರುಗಳಾದ ವ್ಯಾಸರಾಯರು 'ಇವಗೆ ನಾಡೆಲ್ಲ ಹುಡುಕಿದರು ಈಡಾರ ನಾಕಾಣೆ' ಎಂದು ಶ್ಲಾಘಿಸಿದ್ದಾರೆ. ಸ್ನೇಹಿತ ರಾದ ಪುರಂದರದಾಸರು ಕನಕದಾಸರ ಮೇಲೆ ದಯಮಾಡಲು ವ್ಯಾಸಮುನಿ ಮಠದವರೆಲ್ಲ ದೂರಿಕೊಂಬುವರು ಎಂದಿರುವುದು ಗಮನಿಸಬೇಕು.

ಹಿಂದೆ, ಇಂದು ಮತ್ತು ಮುಂದೆಯೂ ಕೂಡಾ ಯಾವುದೇ ಒಬ್ಬ ಸಾಧಕನ ಸಾಧನೆಯ ಬಗ್ಗೆ ಅಸೂಯೆ ಪಡುವವರು - ಅಡ್ಡಿಯಾಗುವರು ಇದ್ದೇ ಇರುತ್ತಾರೆ ಎಂಬುದು ಸತ್ಯ. ಆದರೆ ಅದೇ ಕಾಲದಲ್ಲಿ ಸಹಾಯ ಮಾಡುವವರು, ಅಭಿನಂದಿ ಸುವವರು, ಪ್ರೋತ್ಸಾಹಿಸುವವರು ಕೂಡಾ ಇರುತ್ತಾರೆ. ಅಸೂಯೆ ಪಡುವ ವರ ಕೈಯಲ್ಲಿ ಅಧಿಕಾರ ಇದ್ದರೆ ಅದು ಕಷ್ಟ ಕಾಲ. ಅಭಿನಂದಿ ಸುವವರ ಸಂಖ್ಯೆ ಕಡಿಮೆ ಇದ್ದರೆ ಅದು ಕಾರ್ಪಣ್ಯಕ್ಕೆ ಕಾರಣ ಹೀಗೆ ಕನಕದಾಸರ ಸುಮಾರು ೬ ದಶಕಗಳ ಆಯುಷ್ಯದಲ್ಲಿ ಕಾರ್ಪಣ್ಯಗಳು ಬಹಳ ಬಂದು ಹೋಗುತ್ತವೆ. ಕೃಷ್ಣನು ಭಗವದ್ಗೀತೆಯಲ್ಲಿ ಅರ್ಜುನನಿಗೆ

ಕಾರ್ಪಣ್ಯದೋಷೋಪಹತಸ್ವಭಾವ
ಪೃಚ್ಛಾಮಿ ತ್ವಾಂ ಧರ್ಮಸಂಮೂಢಚೇತಾ ॥೧॥
ಯಚ್ಛ್ರೇಯಃ ಸ್ಯಾನ್ನಿಶ್ಚಿತಂ ಬ್ರೂಹಿ ತನ್ಮೇ
ಶಿಷ್ಯ ಸ್ತೇಹಂ ಶಾಧಿ ಮಾಂ ತ್ವ ಪ್ರಪನ್ನಮ್ ॥೨॥

ಕಷ್ಟವೆಂದರೆ ಗೀತೆಯಲ್ಲಿ ಅರ್ಜುನನಿಗೆ ಕೃಷ್ಣನು ಪಕ್ಕದಲ್ಲಿ ನಿಂತು ವೈರಿಗಳನ್ನು ಹೊಡೆ ನಾನಿದ್ದೇನೆ ನಿನ್ನ ಹಿಂದೆ ಎನ್ನುತ್ತಾನೆ. ಆದರೆ ಕನಕದಾಸರ ವಿಷಯದಲ್ಲಿ ತಿರುಪತಿ ಮೊದಲಾದ ಕಡೆಗಳಲ್ಲಿ ನೀನು ಹೊಡೆಸಿಕೊಳ್ಳುವ ದಾಸನಾದರೆ ನಾನು ಬರುತ್ತೇನೆ, ಎನ್ನುತ್ತಾನೆ. ಆದರೆ ಪ್ರತ್ಯಕ್ಷವಾಗಿ ಪರ ಮಾತ್ಮನನ್ನು ಕಾಣದೇ ಕಾರ್ಪಣ್ಯಕ್ಕೊಳಗಾಗಿ ಪರ ಮಾತ್ಮನಿಗೆ ನಿರೀಕ್ಷಿಸಲು ಹಚ್ಚಿದವರು ಕನಕದಾಸರು. ಕನಕ ದಾಸರ ಸ್ವಭಾವದಲ್ಲಿ ಇರುವ ಸಾಹಸಮಯ ವ್ಯಕ್ತಿತ್ವ, ತ್ಯಾಗ ಮಯ ಜೀವನ, ಪ್ರತಿಭಾ ಸಾಮರ್ಥ್ಯಗಳು ಹೋಗಿ ಅದರ ಬದಲು ಕಾರ್ಪಣ್ಯ ಎಂದರೆ ಹತ ಸ್ವಭಾವ ಬಂದ ಸಂದರ್ಭ ಗಳಲ್ಲಿ ಅವರು ಪುನಃ ಧೈರ್ಯದಿಂದ ಚೇತರಿಸಿಕೊಂಡು ಪರಮಾತ್ಮನ ಅನುಗ್ರಹದಿಂದ ಅವೆಲ್ಲವನ್ನು ಎದುರಿಸಿ ತಮ್ಮನ್ನು ತಾವು ಸಮರ್ಥಿಸಿಕೊಳ್ಳುತ್ತಾರೆ. ಅಂತಹ ಉದಾಹರಣೆ ಗಳೆಂದರೆ

೧)ಬಾಳೆ ಹಣ್ಣಿನ ಪರೀಕ್ಷೆ

೨) ಮೋಕ್ಷಕ್ಕೆ ನಾನು ಹೋದರೆ ಹೋದೇನು

೩) ಪೂಜಾ ಕಾಲದಲ್ಲಿ ನಾಯಿಯು ಬಂದದ್ದು

೪) ಆರತಿ ಮಾಡುವಾಗ ಹಾವು ಬಂದದ್ದು

೫) ಹಿಂದಿನವರಿಗೆ ಮುಂದೆ, ಮುಂದಿನವರಿಗೆ ಹಿಂದೆ ಎಂದದ್ದು ಇತ್ಯಾದಿ...

ಕನಕದಾಸರು ಜೀವನದಲ್ಲಿ ಎಂದೂ ಸಾತ್ವಿಕ ರೋಷ ಬಿಟ್ಟಿಲ್ಲ ತಾಮಸ ಶಾಪ ಕೊಟ್ಟಿಲ್ಲ.

ತಾವು ಕುರುಬರೆಂಬ ಕೀಳರಿಮೆ ಅವರಿಗೆ ಇರಲಿಲ್ಲ. ಅಥವಾ ತಾವು ಗುರುಗಳ ಆತ್ಮೀಯ ಭಕ್ತರೆಂಬ ಗರ್ವವೂ ಇರಲಿಲ್ಲ. ಭಕ್ತಿಯಲ್ಲಿ ಆತ್ಮನಿವೇದನೆ, ಸಾಹಿತ್ಯ ಶಕ್ತಿಯಲ್ಲಿ ವಿಡಂಬನೆ, ಅವರ ಮೂಲ ಗುಣ. ಈ ಕೆಳಗಿನ ಕೀರ್ತನೆಯಲ್ಲಿ ಪರಮಾತ್ಮನ ಪ್ರಾರ್ಥನೆ ಮಾಡುತ್ತ ತಮ್ಮ ಅಸಹಾಯಕತೆಯನ್ನು ನಿವೇದಿಸಿ ರಕ್ಷಿಸಲು ಕೋರುತ್ತಾರೆ.

ದೀನನಾನು ಸಮಸ್ತ ಲೋಕಕೆ
ದಾನಿ ನೀನು , ವಿಚಾರಿಸಲು ಮತಿ,
ಹೀನ ನಾನು ಮಹಾಮಹಿಮ ಕೈವಲ್ಯ ಪತಿನೀನು
ಏನಬಲ್ಲೆನು ನಾನು? ನೆರೆಸು
ಜ್ಞಾನ ಮೂರುತಿ ನೀನು ನಿನ್ನ ಸ
ಮಾನರುಂಟೆ ದೇವ ರಕ್ಷಿಸು ನಮ್ಮನನವರತ

ಕನಕದಾಸರು ಇಂತಹ ೫೫ ಪದ್ಯಗಳನ್ನು ರಚಿಸಿರುವರೆಂದು ದೇ.ಜ.ಗೌ. ಅಭಿಪ್ರಾಯ ಪಡುತ್ತಾರೆ.

ಪ್ರಪಂಚವೆಲ್ಲವೂ ಪರಮಾತ್ಮಮಯ ಎಂದು ಹೇಳಲು ಬಯಲು ಆಲಯದೊಳಗೂ ಆಲಯದೊಳಗೆ ಬಯಲೋ ಎಂದು ಹೇಳುತ್ತ ಎಲ್ಲವೂ ನಿನ್ನೊಳಗೆ ಹರಿಯೇ ಎಂದು ನಿವೇದಿಸು ತ್ತಾರೆ.

ಶ್ರೀಯುತ ಬಿ.ಎಸ್. ಸಣ್ಣಯ್ಯಾ, ಮೋಹನ ತರಂಗಿಣಿಯ ಸಂಪಾದಕರು ಹೇಳುವಂತೆ, ಕನಕದಾಸರು ಪ್ರಸಿದ್ಧರಾದರೂ, ಅವರ ಕಾಲ ಪ್ರಸಿದ್ಧವಾಗಲಿಲ್ಲ. (೧೫೦೯). ಆದರೆ ಅವರ ಅಧ್ಯಯನ, ಅವಲೋಕನ, ಮೆಚ್ಚುವಂತಹವು. ಕನಕ ದಾಸರ ಮೋಹನ ತರಂಗಿಣಿ ಕಾವ್ಯವು, ಸ್ಕಂಧಪುರಾಣ, ವಿಷ್ಣುಪುರಾಣ, ಮಹಾಭಾರತ, ಹರಿವಂಶ, ಮೊದಲಾದ ಮಹಾ ಕೃತಿಗಳ ಕಾವ್ಯ ರೂಪ. ಇದು ಕನಕದಾಸರ ಪಾಂಡಿತ್ಯ, ಪ್ರತಿಭೆ ಮತ್ತು ಅವರ ಕಾರ್ಪಣ್ಯದ ಅನುಭವಗಳನ್ನು ಹೊಂದಿದೆ. ಕನಕದಾಸರು ಶೈವಾಗಮ, ಪಾಣಿನಿ, ಮೊದಲಾದವುಗಳೆಲ್ಲ ಓದಿದರ ಪ್ರಭಾವ ಅವರ ಕೃತಿಗಳಲ್ಲಿ ವ್ಯಕ್ತವಾಗಿದೆ. ಭಾರತೀಯ ಆಧ್ಯಾತ್ಮದಲ್ಲಿನ ಮುಖ್ಯ ದರ್ಶನಗಳ ಬಗ್ಗೆ ತಿಳಿದುಕೊಳ್ಳ ಬೇಕಾದರೆ ಕನಕದಾಸರ ಚರಿತ್ರೆ, ತಿಳಿದು ಕೊಂಡರೆ ಸಾಕು. ಅವರ ತಾತ್ವಿಕ ನೆಲೆಗಟ್ಟು, ವೀರಶೈವ - ಭಾಗವತ, ವಿಶಿಷ್ಟಾದ್ವೈತ ಕೊನೆಯಲ್ಲಿ ದ್ವೈತ ದರ್ಶನಗಳನ್ನು ಅಭ್ಯಸಿಸಿ, ಆಚರಿಸಿ, ಬೋಧಿಸುವಷ್ಟು ಪಾರಂಗತರಾಗಿದ್ದರು.

ಸುಮಾರು ಸಹಸ್ರ ಚದರ ಕಿಲೋಮೀಟರ್ ವ್ಯಾಪ್ತಿಯನ್ನು ತಮ್ಮ ಶತಮಾನದ ಬದುಕಿನಲ್ಲಿ ಓಡಾಡಿದವರು. ಬಾಡ, ಬಂಕಾ ಪೂರ, ಕಾಗಿನೆಲೆ, ಹಿರೇಕೆರೂರ, ಕದರಮಂಡಲಗಿ ಕಮ್ಮೂರು, ಸಂತೇಕಲ್ಲಹಳ್ಳಿ, ಹಂಪಿ, ಬೇಲೂರು, ರಾಯಚೂರು, ಉಡುಪಿ, ತಿರುಪತಿ, ಹೀಗೆ ಓಡಾಡಿದವರು. ದೇಶವೂ ಸುತ್ತಿ ಕೋಶವೂ ಓದಿ ಗುರುಮುಖೇನ ಜ್ಞಾನಗಳಿಸಿ ಅಸೂಯಾಮಯ ಸಹಪಾಠಿಗಳ ಮಧ್ಯದಲ್ಲಿ ಸಂಯಮದಿಂದಿದ್ದು ಶಿಷ್ಯೋತ್ತಮರೆನಿಸಿ ಕೊಂಡವರು. ಅದಕ್ಕಿಂತ ಮಿಗಿಲಾಗಿ ಸಮಕಾಲೀನ ಛಂದಸ್ಸುಗಳಾದ ಸಾಂಗತ್ಯ ಮತ್ತು ಷಟ್ಪದಿಗಳಲ್ಲಿ ಮೋಹನ ತರಂಗಿಣಿ, ಹರಿಭಕ್ತಿಸಾರ, ರಾಮಧ್ಯಾನಚರಿತ್ರೆ, ನಳ ಚರಿತ್ರೆ, ಮೊದಲಾದ ಕಾವ್ಯಗಳನ್ನು ಬರೆದವರು.ಅವರ ಓಡಾಟವೇ ಅವರ ಅನುಭವ. ಅವರ ಕಾರ್ಪಣ್ಯದ ಪರಿಸರವೇ ಅವರ ಪ್ರತಿಭೆಗೆ ಸೆಲೆ ಪರಮಾತ್ಮನ ಒಲುಮೆಯೇ ಎಂದರೆ ಬೆನ್ನು ಬಿಡದ ಬೇತಾಳದಂತೆ ೩ ಸಲ ಕನಸಿನಲ್ಲಿ ಬಂದ ಶ್ರೀ ಹರಿಯೇ ಅವರ ರಕ್ಷಾ ಕವಚ. ಈ ಕೆಳಗಿನ ಕೃತಿಯಲ್ಲಿ ಅದನ್ನು ತಿಳಿಸುತ್ತಾರೆ.

ಊರು ತನಗೊಂದಿಲ್ಲ ಹೊತ್ತಶ
ರೀರಗಳ ಮಿತಿಯಲ್ಲ ತಾ ಸಂ
ಚರಿಸದ ಸ್ಥಳವಿಲ್ಲ ನುಡಿಯದ ಭಾಷೆ ಮತ್ತಿಲ್ಲ
ಬೇರೆ ಹೊಸತೊಂದಿಲ್ಲ, ಉಣ್ಣದ
ಸಾರ ವಸ್ತುಗಳಿಲ್ಲ, ತನುಸಂ
ಚಾರವೀ ಬಗೆಯಾಯ್ತು ರಕ್ಷಿಸುನಮ್ಮನನವರತ..

ಅವರ ನಳಚರಿತ್ರೆಯು ತ್ಯಾಗಮೂಲವಾದ ಶೃಂಗಾರ (ಹರಿಭಕ್ತಿಸಾರ ೮೧) ಕಥೆಯಾದರೆ, ಮೋಹನ ತರಂಗಿಣಿಯು ಭೋಗಮೂಲವಾದ ಶೃಂಗಾರ ಕಥೆ.ರಾಮಧಾನ್ಯ ಚರಿತೆಯು ವಿರೋಧ ಮೂಲವಾದ ಸಾಮಾಜಿಕಕಥೆ ಕೊನೆಯಲ್ಲಿ ಬರೆದ ಹರಿಭಕ್ತಿಸಾರವು ಮನೋವೈಜ್ಞಾನಿಕ ವಿಶ್ಲೇಷಣೆ ಮತ್ತು ಸರ್ವ ಸಮರ್ಪಣಾ ಭಾವದ ಆಧ್ಯಾತ್ಮಿಕ ನಿವೇದನೆಯ ಕಥೆ. ದಾರಿ ತಪ್ಪಿದ ಜನರನ್ನು ನೋಡಿ ಅವರು ಕೆಲವು ಕೀರ್ತನೆಗಳನ್ನು ಹಾಡಿ ಸಮಾಜದ ಜನರಿಗೆ ತಿಳಿಯ ಹೇಳಿದ್ದಾರೆ.

೧) ಎಲ್ಲರೂ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ

೨) ತಲ್ಲಣಿಸದಿರು ಕಂಡ್ಯಾ ತಾಳು ಮನವ

೩) ದಾಸಾರ್ಯರ ದಾಸರ ದಾಸ ನಾನು

೪) ಬಾಗಿಲನು ತೆರೆದು ಸೇವೆಯನು ಕೊಡೊ ಹರಿಯೆ

೫) ಆತನೊಲಿದ ಮೇಲೆ ಯಾತರ ಕುಲವಯ್ಯಾ

೬) ಅಜ್ಞಾನಿಗಳ ಕೂಡ ಅಧಿಕ ಸ್ನೇಹಕ್ಕಿಂತ

೭) ಸತ್ಯವಂತರ ಸಂಗವಿರಲು ತೀರ್ಥವ್ಯಾತಕೆ

೮) ನೀಮಾಯೆಯೊಳಗೋ ನಿನ್ನೊಳು ಮಾಯೆಯೋ

೯) ಆವಬಲವಿದ್ದರೇನು ದೈವಬಲವಿಲ್ಲದವಂಗೆ

೧೦) ಕಣಿಯ ಹೇಳ ಬಂದೆ

೧೧) ತನು ನಿನ್ನದು ಜೀವನ ನಿನ್ನದು.

೧೨) ಹರಿ ನಿನ್ನ ಪದ ಕಮಲ ಕರುಣದಿಂದಲೆ ಎನಗೆ ದೊರಕಿತು

೧೩) ಕಲಿಯುಗದ ಮಹಿಮೆಯನು ಕಂಡಷ್ಟು ಪೇಳುವೆನು

೧೪) ಅಹುದಾದರಹುದೆನ್ನಿ ಇಲ್ಲವಾದರಿಲ್ಲವೆನ್ನಿ

೧೫) ಈಶ ನಿನ್ನ ಚರಣ ಭಜನೆ,...ಇದರಲ್ಲಿ ೨೪ ಕೇಶವ ನಾಮಗಳನ್ನು ಹಾಡಿ ಭಕ್ತರಾಗುತ್ತಾರೆ, ಸಂತರಾಗುತ್ತಾರೆ, ದಾರ್ಶನಿಕರಾಗುತ್ತಾರೆ.

ಅವರು ಕನ್ನಡ ಸಾಹಿತ್ಯ ಲೋಕಕ್ಕೆ ಕೊಟ್ಟ ವಿಶಿಷ್ಟ ಕೊಡುಗೆ ಎಂದರೆ ಮುಂಡಿಗೆಗಳು. ಈ ಮುಂಡಿಗೆಗಳು ಸರಿಯಾಗಿ ಅರ್ಥೈಸಿ ವಿವರಿಸಲು ಎಂಟೆದೆ ಭಂಟರೇ ಬೇಕು. ಆದ್ದರಿಂದಲೇ ಕನಕನನ್ನು ಕೆಣಕಬೇಡ, ಕೆಣಕಿ ತಿಣುಕಬೇಡ - ಎಂಬ ಗಾದೆ ಮಾತೆ ಸಿದ್ಧವಾಯಿತು.

ಒಂದೆರಡು ಪ್ರಮುಖ ಮುಂಡಿಗೆಗಳು ಹೀಗೆ ಪ್ರಾರಂಭವಾಗುತ್ತವೆ.

೧) ಪುಟ್ಟ ದಾಸನು ನಾನಲ್ಲ

೨) ಪರಮ ಪುರುಷ ನೀ ನೆಲ್ಲಿಕಾಯಿ

**ಅನುಬಂಧಗಳು**

**೧**

ಕನಕದಾಸನ ಮೇಲೆ ದಯಮಾಡಲು ವ್ಯಾಸ
................................
.............................................
ಬೊಮ್ಮ ಪುರಂದರವಿಠ್ಠಲನೆನ್ನುತ ಸಾರಿದನು.

**೨**

ಕನಕದಾಸರ ಪಾದ - ವನಜ ಸ್ಮರಿಸುವ
............................................
............................................
ತಾನೊಲಿದು ದರ್ಶನವಿತ್ತ - ಹಿಂದಿರುಗುತ್ತ.

**ಅನುಬಂಧಗಳು - ೩**

ಲೇಸಿನಲಿ ದಾಸರಾದವರಲ್ಲವೋ
..............................
................................
ಬೆಣ್ಣೆ ಮಾತುಗಳಲಿ ಬೋಧಿಸಿದರು

**ಅನುಬಂಧ - ೨**

**ಕನಕದಾಸರ ಪ್ರಮುಖ ಮುಂಡಿಗೆಗಳು**

೧

ಪುಟ್ಟ ದಾಸನು ನಾನಲ್ಲ = ಧ್ರುವರಾಯನು ನಾನಲ್ಲ

ದಿಟ್ಟ ದಾಸನು ನಾನಲ್ಲ = ಪ್ರಹ್ಲಾದರಾಜನು ನಾನಲ್ಲ

ಸಿಟ್ಟು ದಾಸನು ನಾನಲ್ಲ = ದುರ್ವಾಸ ವಿಶ್ವಾಮಿತ್ರ ಭೃಗುಗಳು ನಾನಲ್ಲ

ಸುಟ್ಟ ದಾಸನು ನಾನಲ್ಲ = ಹನುಮಂತ ನಾನಲ್ಲ

ಸುಡಗಾಡು ದಾಸ ನಾನಲ್ಲ = ರುದ್ರನಾಗಲೀ, ಹರಿಶ್ಚಂದ್ರನಾಗಲೀ ಅಲ್ಲ

ಕಷ್ಟದಾಸ ನಾನಲ್ಲ = ಕುಚೇಲ ನಾನಲ್ಲ

ಕೊಟ್ಟ ದಾಸ ನಾನಲ್ಲ = ಬಲಿಚಕ್ರವರ್ತಿ ನಾನಲ್ಲ

ಹೊಟ್ಟೆದಾಸ ನಾನಲ್ಲ = ವೃಕೋದರ ನಾನಲ್ಲ

ಇಟ್ಟಿಗೆ ದಾಸ ನಾನಲ್ಲ = ಪುಂಡಲೀಕ ನಾನಲ್ಲ

ಶಿಷ್ಟ ದಾಸ ನಾನಲ್ಲ = ವಿಭೀಷಣ ನಾನಲ್ಲ

ನಿಷ್ಠದಾಸ ನಾನಲ್ಲ = ರುಕ್ಮಾಂಗದ ಭೀಷ್ಮ ಅಂಬರೀಷ ನಾನಲ್ಲ

ಭ್ರಷ್ಟದಾಸ ನಾನಲ್ಲ = ಅಜಾಮಿಳ ಮಾಧವ ನಾನಲ್ಲ

ಶ್ರೇಷ್ಠದಾಸ ನಾನಲ್ಲ = ಶ್ರೀಮದಾಚಾರ್ಯರು ನಾನಲ್ಲ.

ವಿತ್ತದಾಸ ನಾನಲ್ಲ = ಪುರಂದರದಾಸ ನಾನಲ್ಲ.

ಹುತ್ತದಾಸ ನಾನಲ್ಲ = ವಾಲ್ಮೀಕಿ ನಾನಲ್ಲ.

ನಾನು ಈ ಷೋಡಶ ದಾಸರುಗಳ ದಾಸಾನುದಾಸರ ದಾಸಿಯರ ಮನೆಯ ಮಂಕುದಾಸರ ಮನೆಯ ಶಂಕುದಾಸ ಬಾಡದಾದಿ ಕೇಶವ.

೨

ಪರಮ ಪುರುಷ ನೀ ನೆಲ್ಲಿಕಾಯಿ        ಎಲ್ಲಿ + ಕಾಯಿ

ಪರಮ ಪುರುಷ ನೀ ನೆಲ್ಲಿಕಾಯಿ

ಸರಸಿಯೊಳಗೆ ಕರಿ ಕೂಗಿರೆಕಾಯಿ        ಕೂಗಿ+ಹೀರೆ

ಹಿರಿದು ಮಾಡಿದ ಪಾಪ ನುಗ್ಗೇಕಾಯಿ

ಹರಿ ನಿನ್ನ ಜ್ಞಾನ ಬಾಳೆಕಾಯಿ

ಕರಿರಾಜಗೊಲಿದಂತ ಬದನೆಕಾಯಿ

ಅರಿಷಡ್ವರ್ಗದಿ ಒದಗಲಿ ಕಾಯಿ

ಕ್ರೂರವ್ಯಾಧಿಗಳೆಲ್ಲಾ ಹೀರೆಕಾಯಿ

ಘೋರ ದುಷ್ಕೃತ್ಯಗಳ ತೋರೇಕಾಯಿ

ಭಾರತದ ಕಥೆ ಕರ್ಣ ತುಂಬಿದೆ ಕಾಯಿ

ವಾರಿಜಾಕ್ಷನೆ ಗತಿ ಎಂದಿಪ್ಪೆಕಾಯಿ

ಮುರಹರ ನಿನ್ನನರಿದವರೇ ಕಾಯಿ

ಗುರು ಕರುಣಾಮೃತ ಉಣಿಸೇ ಕಾಯಿ

ಉರುಗಾದಿಪತಿ ಎಂಬ ಹೆಸರಿನ ಕಾಯಿ

ಬಾಡದಾದಿಕೇಶವ ನಿನ್ನ ಮೆತ್ತಿದ ಕಾಯಿ

**ಉಪ ಸಂಹಾರ:**

ಕನಕದಾಸರ ಜೀವನ, ಉಪದೇಶ ಈ ಎರಡೂ ಬಹು ಸರಳ. ಎರಡೂ ನೂರಾರು ವರ್ಷ ಕಳೆದರೂ ಜನ ಜೀವನದ ಮೇಲೆ ಅಚ್ಚೊತ್ತಿವೆ. ಮಹಾರಾಷ್ಟ್ರದ ಏಕನಾಥ, ಕನ್ನಡದ ಕನಕದಾಸ , ಹೀಗೆ ಈ ದೇಶದಲ್ಲಿ ಸಹಸ್ರಾರು ಸಂತರು ಆಗಿ ಹೋಗಿದ್ದರೆ. ಅವರೆಲ್ಲರಂತೆ ಕನಕದಾಸರ ಜೀವನ ಮತ್ತು ಸಾಧನೆಗಳನ್ನು ಅವರ ಕಾರ್ಪಣ್ಯದ ಮೂಲಗಳಿಂದ ನೋಡಿ ಅವರ ಸ್ಥಿತ ಪ್ರಜ್ಞತೆ ಮತ್ತು ಸರ್ವಮಾನ್ಯತೆಗಳನ್ನು ತಿಳಿಸುವುದರಿಂದ ದೇಶಕ್ಕೆ ಧರ್ಮಕ್ಕೆ ಒಳಿತಾಗುತ್ತದೆ. ಇಂದು ದೇಶ ಎದುರಿಸುತ್ತಿರುವ ೨ ಪ್ರಮುಖ ಸಮಸ್ಯೆಗಳೆಂದರೆ ಭ್ರಷ್ಟಾಚಾರ ಮತ್ತು ಭಯೋತ್ಪಾದನೆ ಈ ಎರಡೂ ಸಮಸ್ಯೆಗಳಿಗೆ ದಾಸರ ಜೀವನ ಮತ್ತು ಕೃತಿಗಳಲ್ಲಿ ಉತ್ತರ ಸಿಗುತ್ತದೆ. ಹೀಗಾಗಿ ಇವರು ರಾಷ್ಟ್ರೀಯ ಸಂತರು ಎಂದು ನಾನು ಈ ಪ್ರಬಂಧದ ಮೂಲಕ ತಿಳಿಸಬಯಸುತ್ತೇನೆ. ಇವರು ಸಾಮಾಜಿಕ ನೆಲೆಯಿಂದ ಬಂದ ಸಂವೇದನಶೀಲ ರಾಷ್ಟ್ರೀಯ ಸಂತರೆಂಬುದರಲ್ಲಿ ಸಂದೇಹವಿಲ್ಲ. ಕನಕದಾಸರು ಮೊದಲಿನ ಮೂವತ್ತು ವರ್ಷ ಅಷ್ಟೇನೂ ಕ್ರಿಯಾಶೀಲರಾಗಿರಲಿಲ್ಲ. ಮಧ್ಯದ ಮೂವತ್ತೂ ವರ್ಷ ಕ್ರಿಯಾಶೀಲರೂ ಮತ್ತು ಸನಾತನ ಧರ್ಮ ಅನುಯಾಯಿಗಳೂ ಆಗಿದ್ದರು. ಕೊನೆಯ ಮೂವತ್ತು ವರ್ಷ ಪ್ರತಿಕ್ರಿಯಿಸುತ್ತಾ, ಸಮಾಜವನ್ನು ತಿದ್ದುತ್ತ, ತುಂಬು ಬಾಳು ನಡೆಸಿದ ಮಹಾನ್ ಸಂತರು. ಅವರ ಪ್ರಮುಖ ಸಾಧನೆ ಎಂದರೆ, 'ಈಶ ನಿನ್ನ ಚರಣ ಭಜನೆ ಆಸೆಯಿಂದ ಮಾಡುವೆನು, ದೋಷ ರಾಶಿ ನಾಶ ಮಾಡು ಶ್ರೀಶ ಕೇಶವ ಎಂಬ ೨೪ ದೇವರ ನಾಮದ ಸಂಧ್ಯಾವಂದನದ ಪರ್ಯಾಯ ವ್ಯವಸ್ಥೆಯನ್ನು ಕೊಟ್ಟವರು. ಹೀಗಾಗಿ ಅವರ ಪ್ರಮುಖ ಸಂದೇಶವೆಂದರೆ, ಆತನೊಲಿದ ಮೇಲೆ ಯಾತರ ಕುಲವಯ್ಯ.

## ಭಾಗವತ ಕಥಾಸಾಗರ

# ಭಕ್ತ ಪ್ರಹ್ಲಾದನ ದಿವ್ಯ ಮಹಿಮೆಗಳು

ಡಾ|| ವೈಷ್ಣವಾಂಘ್ರಿಸೇವಕ್‌ದಾಸ್
ಅನುವಾದ : ಡಿ.ಎಸ್.ಬದ್ರಿನಾಥ್



ಗುರುಪುತ್ರರಾದ ಷಂಡಮಾರ್ಕರ ಸಾಂತ್ವನ ನುಡಿಗಳನ್ನು ಕೇಳುತ್ತಲೇ ಹಿರಣ್ಯಕಶಿಪುವಿಗೆ ಕೊಂಚ ಉಪಶಮನ ಉಂಟಾಗಿದೆ. ತನ್ನ ಮಗನು ಹರಿ ಭಕ್ತಿಯನ್ನು ತೊರೆದು, ತಿರುಗಿ ತನ್ನ ಹಾದಿಗೆ ಬರುತ್ತಾನೆಂಬ ಆಸೆಯನ್ನು ಚಿಗುರಿಸಿದೆ. ಇನ್ನು ಪ್ರಹ್ಲಾದನಿಗೆ ಕೇವಲ ಗೃಹಸ್ಥರಾಜರುಗಳ ಧರ್ಮವನ್ನು ಮಾತ್ರವೇ ಹರಿ ಬೋಧಿಸಬೇಕೆಂದು ಆತನು ಆಜ್ಞಾಪಿಸಿದ್ದಾನೆ. ಹಾಗೇ ಆಗಲೆಂದು ಅವರು ಪ್ರಹ್ಲಾದನನ್ನು ತಮ್ಮೊಡನೆ ಆಶ್ರಮಕ್ಕೆ ಕರೆದುಕೊಂಡು ಹೋಗಿದ್ದಾರೆ. ಈ ಬಾರಿ ಗುರುಪುತ್ರರು ಬಹಳಾ ಜಾಗ್ರತೆಯಿಂದ ಪ್ರವರ್ತಿಸುತ್ತಾ ಪ್ರಹ್ಲಾದನಿಗೆ ವಿದ್ಯೆಯನ್ನು ಹೇಳಿಕೊಡುವ ಪ್ರಯತ್ನವನ್ನು ಮಾಡಿದ್ದಾರೆ. ಧರ್ಮಾರ್ಥಕಾಮಗಳ ಕುರಿತು ಎಡೆಬಿಡದೆ ಬೋಧಿಸುತ್ತಾ ಆ ಬಾಲಕನ ಮನಸ್ಸನ್ನು ಪರಿವರ್ತಿಸಲು ಅವರೆಷ್ಟೋ ತೀವ್ರವಾದ ಯತ್ನಗಳನ್ನು ನಡೆಸಿದ್ದಾರೆ. ಆದರೂ ತ್ರಿಗುಣಾತೀತನಾದ ಆತನು ಯಾವುದರಲ್ಲೂ ಆಸಕ್ತಿಯನ್ನು ತೋರಲಿಲ್ಲ. ತ್ರಿಗುಣಾತೀತನಾದವನಿಗೆ ಅವು ಹಿಡಿಸಬಲ್ಲವೇ? ಅದೇಕ್ಕೇ? ಗುರುಗಳು ಹೇಳಿಕೊಡುವ ದ್ವಂದ್ವಪೂರ್ಣ ವಿಷಯಗಳಲ್ಲಿ ಆತನಿಗೆ ಯಾವುದೇ ಆಸಕ್ತಿ ಹುಟ್ಟಲಿಲ್ಲ. ಒಂದು ಬಾರಿ ಗುರುಗಳು ತಮ್ಮ ಸ್ವಂತ ಕಾರ್ಯಗೋಸುಗ ಹೊರಗೆ ಹೋದಾಗ ತನ್ನ ಜೊತೆಗಾರ ರಾಕ್ಷಸ ಬಾಲಕರು ಪ್ರಹ್ಲಾದನನ್ನು ಆಟವಾಡಲು ಕರೆದಿದ್ದಾರೆ. ನಿಜವಾದ ಭಕ್ತರಿಗೆ ಧರ್ಮಪ್ರಚಾರದಲ್ಲೆ ಪ್ರಸನ್ನತೆಯುಂಟಾಗುತ್ತದೆ. ಈ ವಿಧವಾಗಿ ಪ್ರಚಾರ ಮಾಡುವ ಭಕ್ತನು ಭಗವಂತನಿಗೆ ಅತ್ಯಂತ ಪ್ರಿಯಪುತ್ರನಾಗುತ್ತಾನೆ ರಾಕ್ಷಸಬಾಲರು ತಮ್ಮೊಡನೆ ಆಡಲು ಕರೆದಾಗ, ಅಚ್ಯುತನನ್ನೇ ಹೃದಯಲ್ಲೆಲ್ಲಾ ತುಂಬಿಕೊಂಡ ಪ್ರಹ್ಲಾದನು ತನ್ನ ಸಹಪಾಠಿಗಳಿಗೆ ಭಕ್ತಿ ಬೋಧನೆಯನ್ನು ಮಾಡಲು ಮೊದಲಿಟ್ಟಿದ್ದಾನೆ.

ಮಿತ್ರರುಗಳಿರಾ ! ಬುದ್ಧಿವಂತನಾದವನು ತನ್ನ ಕೌಮಾರ್ಯದಿಂದಲೇ ಭಾಗವತಧರ್ಮವನ್ನು ಅನುಸರಿಸಲಾರಂಭಿಸಬೇಕು. ಮಾನವ ಜನ್ಮ ಇತರ ಜನ್ಮಗಳಂತೆ ತಾತ್ಕಾಲಿಕವೇ ಆದರೂ ಭಕ್ತಿಯೋಳಗೆ ನಿರ್ವಹಣೆಗೆ ಎಷ್ಟೋ ಅನುಕೂಲಕರವಾದುದು. ಆದ್ದರಿಂದ ಇದು ಎಷ್ಟೋ ಅರ್ಥಪೂರ್ಣವಾದುದು. ಇಂದ್ರಿಯಗಳಿಂದ ದೊರಕುವ ಸುಖವು ಯಾವುದೇ ಜನ್ಮದಲ್ಲಾದರೂ ಸಿಗಬಲ್ಲದು. ಅದೇ ರೀತಿಯಲ್ಲಿ ಕೇಳದೆಯೇ ದುಃಖವೂ ಸಹ ಬಂದೊದಗುತ್ತದೆ ಎಂಬುದನ್ನು ಅರಿಯಿರಿ. ಮನುಷ್ಯನಿಗಿರುವ ನೂರು ವರ್ಷದ ಆಯುಷ್ಯದಲ್ಲಿ ಸ್ವಲ್ಪ ಭಾಗ ನಿದ್ರೆಯಲ್ಲೇ ಕಳೆದು ಹೋಗುತ್ತದೆ. ಆದ್ದರಿಂದ ವಾಸ್ತವದಲ್ಲಿ ಮನುಷ್ಯನ ಆಯುವು ಕೇವಲ ಎಂಭತ್ತು ವರ್ಷಗಳೇ ಎಂದು ತಿಳಿಯಿರಿ. ಅದರಲ್ಲಿಯೂ ಮೊದಲ ಹತ್ತು ವರ್ಷ ಬಾಲ್ಯದಲ್ಲಿ ಕಳೆದು ಬಿಡುತ್ತವೆ. ನಂತರದ ಹತ್ತು ವರ್ಷ ಆಟಪಾಠಗಳಲ್ಲಿ ಕಳೆದು ಹೋಗುತ್ತದೆ. ಇನ್ನು ಮುದಿತನದಲ್ಲಿ ಮಿಕ್ಕೆರಡು ದಶಕಗಳು ವ್ಯರ್ಥವಾಗಿ ಸಂದು ಹೋಗುತ್ತವೆ. ತೃಪ್ತಿತರದ ಕಾಮದಿಂದ ಮಿಕ್ಕ ಆಯುಷ್ಯವು ಕಳೆದು ಹೋಗುತ್ತದೆ. ಆದ್ದರಿಂದ ಇಂದ್ರಿಯ ನಿಗ್ರಹ ಇರದ ವ್ಯಕ್ತಿ ತನ್ನನ್ನು ತಾನೇ ಹೇಗೆ ಮುಕ್ತಿಯಡೆಗೆ ಕೊಂಡೊಯ್ಯಬಲ್ಲನು? ಸಂಸಾರಾಸಕ್ತನು ಸದಾ ಸ್ನೇಹಪಾಶ ಬದ್ಧನಾಗಿರುತ್ತಾನೆ. ಧನವೆನ್ನುವುದು ಜೇನಿಗಿಂತ ಸಿಹಿಯಾದುದು. ಧನ ಸಂಪಾದನೆಗಾಗಿ ವ್ಯಕ್ತಿ ತನ್ನ ಪ್ರಾಣವನ್ನೇ ಪಣವನ್ನಾಗಿಡುತ್ತಾನೆ. ಮಿತ್ರರುಗಳಿರಾ! ದಾನವಪುತ್ರರುಗಳಿರಾ. ಭಗವದ್ಭಕ್ತಿಯಿಲ್ಲದವರು ಭವಬಂಧ ಪಾಶದಲ್ಲಿ

ಸಿಲುಕಿರುತ್ತಾರೆ. ವಾಸ್ತವದಲ್ಲಿ ಅಂತಹವರೇ ದಾನವರೆಂದು ಕರೆಯಲ್ಪಡುತ್ತಾರೆ.ನೀವು ದಾನವ ಸಂತಾನವೇ ಆದರೂ ಅಂತ ಹವುರುಗಳಿಂದ ದೂರವಿದ್ದು, ನಾರಾಯಣನನ್ನು ಆಶ್ರಯಿಸಿ, ವಿಷ್ಣು ಪಾದಪದ್ಮಗತಿಯೇ ಶ್ರೇಷ್ಠವೆಂದು ತಿಳಿಯುವುದೇ ವಿಶೇಷವಾದುದೆಂದು ನಾನು ಭಾವಿಸುತ್ತೇನೆ. ಆದರೂ ನಾರದರಂತಹ ಸಾಧು ಪುರುಷನ ಕರುಣೆಯಿಲ್ಲದೇ ಇಂತಹ ದಿವ್ಯ ಜ್ಞಾನ ಬೋಧನೆಯಾಗದು. ನಾನು ಈ ಜ್ಞಾನವನ್ನು ಆ ಮಹನೀಯ ಮೂಲಕವೇ ಪಡೆದಿದ್ದೇನೆ.

ಭಕ್ತ ಪ್ರಹ್ಲಾದನ ಈ ಮಾತುಗಳನ್ನು ಕೇಳುತ್ತಲೇ ರಾಕ್ಷಸ ಬಾಲಕರುಗಳಿಗೆ ಸಂದೇಹವುಂಟಾಗಿದೆ. ತಮ್ಮ ಸಂದೇಹವನ್ನವರು. ನಿಷ್ಕಪಟವಾಗಿ ಹೊರಹಾಕುತ್ತಾ " ಪ್ರಹ್ಲಾದ! ನಾವೇ ಆಗಲೀ, ನೀನೇ ಆಗಲೀ ಷಂಡಮಾರ್ಕರ ಹೊರತು ಬೇರೆ ಗುರುಗಳಿಗೆ ಬಗ್ಗೆಲಾಗುವುದಲ್ಲವಲ್ಲ! ನಾವೆಲ್ಲರೂ ಬಾಲಕರು. ಗುರುಗಳು ನಮ್ಮನ್ನು ನಿಯಂತ್ರಿಸುವವರು. ಅಷ್ಟಕ್ಕೂ ಅಂತಪುರದಲ್ಲಿ ವಾಸಿಸುವ ನಿನಗೆ ಮಹಾತ್ಮರ ಸಾಂಗತ್ಯವು ದುರ್ಲಭವಲ್ಲವೇ? ಸೌಮ್ಯನೇ! ಅಂತಹುದರಲ್ಲಿ ನಿನಗೆ ನಾರದರ ದ್ವಾರಾ ಈ ದಿವ್ಯ ಜ್ಞಾನವನ್ನು ಕೇಳುವ ಸಂದರ್ಭ ಹೇಗೆ ಬಂತು ? ಈ ವಿಷಯದಲ್ಲಿ ನಮಗೆ ಸಂದೇಹ ನಿವೃತ್ತಿ ನೀನು ಮಾಡಬೇಕಾದುದೇ" ಎಂದು ಉತ್ಸಾಹದಿಂದ ಕೇಳಿದ್ದಾರೆ.

ರಾಕ್ಷಸ ಬಾಲಕರು ಈ ರೀತಿಯಾಗಿ ಕೇಳುತ್ತಲೇ ಭಕ್ತ ಪ್ರಹ್ಲಾದನು ತನ್ನ ಗುರುಗಳಾದ ನಾರದಮುನಿ ಬೋಧಿಸಿದ ಉಪದೇಶಗಳನ್ನು ಸ್ಮರಿಸಿ ಜರಗಿದ ಕಥೆಯನ್ನು ತಿಳಿಸಿದ್ದಾನೆ. ಪ್ರಹ್ಲಾದನು ಹೇಳುವ ವಿಷಯಗಳನ್ನು ಬಾಲಕರು ಕಿವಿನಿಮಿರಿಸಿ ಕೇಳಿದ್ದಾರೆ.ಪ್ರಹ್ಲಾದನು ಸಹಾ ತನ್ನ ಜೇನನುಡಿಗಳಿಂದ ಕಥೆಯನ್ನು ಹೇಳುವಂಥವನಾಗಿದ್ದಾನೆ. "ನನ್ನ ತಂದೆ ಅಮರನಾಗುವ ವಾಂಛೆಯಿಂದ ತಪಸ್ಸಿಗಾಗಿ ಮಂದರಾಚಲಕ್ಕೆ ಹೋದಾಗ ಇಂದ್ರಾದಿ ದೇವತೆಗಳು ಅದನ್ನು ಅವಕಾಶವನ್ನಾಗಿ ಕಲ್ಪಿಸಿಕೊಂಡು ದಾನವರ ಮೇಲೆ ದಂಡೆತ್ತಿ ಬಂದಿದ್ದಾರೆ. ದೇವತೆಗಳ ದಾಳಿಗೆ ಅಸುರರು ಎದುರು ನಿಲ್ಲದೇ ಓಡಿದ್ದಾರೆ. ಮನೆ ಬಾಗಿಲುಗಳನ್ನು ಬಿಟ್ಟು ಚದುರಿದ್ದಾರೆ. ಆಗ ದೇವತೆಗಳು ನನ್ನ ತಂದೆಯ ಅರಮನೆಯನ್ನು ಆಕ್ರಮಿಸಿ ಎಲ್ಲವನ್ನು ಕೊಳ್ಳೆ ಹೊಡೆದಿದ್ದಾರೆ. ದೇವೇಂದ್ರನು ನನ್ನ ತಾಯಿಯನ್ನು ಬಂಧಿಸಿದ್ದಾನೆ. ಆಗ ನನ್ನ ತಾಯಿ ಬೇಡನ ಬಾಣಕ್ಕೆ ಸಿಲುಕಿದ ಹಕ್ಕಿಯಂತೆ ವಿಲವಿಲ ಒದ್ದಾಡಿದ್ದಾಳೆ ಆದರೂ ವಜ್ರಾಯುಧ ದಾರಿಯಾದ ಇಂದ್ರನು ನನ್ನ ತಾಯಿಯನ್ನು ಬಲವಂತವಾಗಿ ಎತ್ತಿಕೊಂಡು ಹೋಗಿದ್ದಾನೆ. ಅಷ್ಟರಲ್ಲಿ ನಾರದಮುನಿ ಆತನಿಗೆ ಎದುರುಗೊಂಡು 'ಆಕೆಯನ್ನೇಕೆ ಅಷ್ಟು ನಿರ್ದಾಕ್ಷಿಣ್ಯವಾಗಿ ಎಳೆದುಕೊಂಡು ಹೋಗುತ್ತಿರುವೆ ಎಂದು ಕೇಳಿದ್ದಾರೆ.

"ಆಕೆ ಹಿರಣ್ಯ ಕಶಿಪುವಿನ ಪತ್ನಿಯೆಂದೂ, ಆಕೆಯ ಗರ್ಭದಲ್ಲಿ ಹಿರಣ್ಯಕಶಿಪುವಿನ ಬೀಜವಿರುವುದೆಂದು ಇಂದ್ರನು ಉತ್ತರಿಸಿದ್ದಾನೆ. ಪ್ರಸವವಾಗುವವರೆಗೂ ಆಕೆ ತನ್ನ ಅಧೀನದಲ್ಲಿರ ಬೇಕೆಂದು ನಂತರ ಆಕೆಯನ್ನು ಬಿಡುವುದಾಗಿ ಹೇಳುತ್ತಲೇ ನಾರದ ಮಹರ್ಷಿ ಆತನಿಗೆ ಬುದ್ಧಿವಾದ ಹೇಳಿದ್ದಾರೆ. ಆಕೆಯ ಗರ್ಭದಲ್ಲಿರುವುದು ಮಹಾಭಾಗವತನೆಂದೂ, ಆತನನ್ನು ಕೊಲ್ಲುವುದು ಇಂದ್ರನಿಂದ ದುಃಸಾಧ್ಯ ಎಂಬ ವಿಷಯಗಳನ್ನು ತಿಳಿಸಿ ಕೊಟ್ಟಿದ್ದಾನೆ. ಸತ್ಯವು ತಿಳಿಯುತ್ತಲೇ ಇಂದ್ರನು ತನ್ನ ತಪ್ಪನ್ನು ಒಪ್ಪಿಕೊಂಡು ನಾರದನಿಗೆ ನಮಸ್ಕರಿಸಿದ್ದಾನೆ. ಭಗವದ್ಭಕ್ತನಾದ ತಾನು ಗರ್ಭದಲ್ಲಿರುವ ಕಾರಣಕ್ಕಾಗಿ ಇಂದ್ರನು ಆಕೆಗೆ ಸಹಾ ಪ್ರದಕ್ಷಿಣೆಯನ್ನು ಮಾಡಿದ್ದಾನೆ. ನಂತರ ಆತನು ಸ್ವರ್ಗಕ್ಕೆ ಹೊರಟು ಹೋಗಿದ್ದಾನೆ.

"ನಂತರ ನಾರದರು ನನ್ನ ತಾಯಿಯನ್ನು ತಮ್ಮ ಆಶ್ರಮಕ್ಕೆ ಕರೆದೊಯ್ದು ಆಶ್ರಯವನ್ನು ಕಲ್ಪಿಸಿದ್ದಾರೆ. ಆಕೆಯ ಪತಿಯು ತಿರುಗಿ ಬರುವವರೆಗೂ ತನ್ನ ಆಶ್ರಮದಲ್ಲೇ ಇರಬಹುದೆಂದೂ ಅಲ್ಲಿ ಆಕೆಗೆ ಯಾವುದೇ ದುರಂತ ಬಾರದೆಂದು ತಿಳಿಹೇಳಿದ್ದಾರೆ ಆಕೆ ಸಮ್ಮತಿಸಿದ್ದಾಳೆ. ಆ ಸಮಯದಲ್ಲಿ ಆಕೆ ಅದೆಷ್ಟೋ ಭಕ್ತಿಶ್ರದ್ಧೆಗಳಿಂದ ನಾರದಮುನಿಯನ್ನು ಸೇವಿಸಿದ್ದಾಳೆ. ಆಕೆಯ ವಿನಯ ವಿಧೇಯತೆಗಳಿಗೆ ಮೆಚ್ಚಿದ ಆ ಮುನಿಗಳು ಭಾಗವತ ಧರ್ಮವನ್ನು ಆಕೆಗೆ ಬೋಧಿಸಿದ್ದಾರೆ ಆ ಸಮಯದಲ್ಲಿ ನಾನು ಆಕೆಯ ಗರ್ಭಸ್ಥನಾಗಿದ್ದು ಆ ಉಪದೇಶವನ್ನು ಕೇಳಿದ್ದೇನೆ. ನಾರದಮುನಿ ಉಪದೇಶಿಸಿದ ಭಾಗವತಧರ್ಮ ನನ್ನ ತಾಯಿ ಮರೆತರೂ ನಾನು ಮಾತ್ರ ದೈವಾನುಗ್ರಹದಿಂದ ಮರೆತಿಲ್ಲ.

"ಮಿತ್ರಗಳಿರಾ! ನನ್ನ ಮಾತಿನ ಮೇಲೆ ನಿಮಗೆ ಶ್ರದ್ಧೆಯಿದ್ದರೆ ಬಾಲಕರಾಗಿದ್ದರೂ ನಿಮಗೆ ಈ ತತ್ತ್ವ ಅರ್ಥವಾಗುತ್ತದೆ ಅದೇ ರೀತಿಯಾಗಿ ಸ್ತ್ರೀಯರು ಸಹಾ ಆತ್ಮನಾತ್ಮ ವಿವೇಕವನ್ನು ಹೊಂದುತ್ತಾರೆ. ಅಸುರಬಾಲರೇ! ಸರ್ವಕಾರಣಕಾರನಾದ ಗೋವಿಂದ ಪಾದಪದ್ಮಗಳನ್ನು ಸೇವಿಸುತ್ತಾ ಆ ದೇವದೇವನನ್ನು ಸರ್ವತ್ರ ನೋಡುವುದೇ ನಮ್ಮ ಜೀವನದ ಲಕ್ಷ್ಯ. ಶಾಸ್ತ್ರಗಳಲ್ಲಿ ವಿವರಿಸಲ್ಪಟ್ಟಿರುವ ಹಾಗೆ ಇದೇ ನಮ್ಮ ಬಾಳಿನ ಗುರಿಯು" ಭಾಗವತಾಗ್ರೇಸರನಾದ ಪ್ರಹ್ಲಾದನ ಉಪದೇಶಗಳಿಂದ ಅಸುರ

ಬಾಲರ ಹೃದಯಗಳೆಲ್ಲವೂ ಸಂಪೂರ್ಣ ಭಕ್ತಿಯುತವಾಗಿದೆ. ಅವರು ಷಂಡಮಾರ್ಕರು ಮಾಡಿದ ಉಪದೇಶಗಳನ್ನು ಗಾಳಿಗೆ ತೂರಿ ಬಿಟ್ಟಿದ್ದಾರೆ. ಭಕ್ತ ಪ್ರಹ್ಲಾದನೊಂದಿಗೆ ಕೂಡಿ ಅವರು ಸಹಾ ಹರಿ ಗುಣಗಾನವನ್ನು ಮಾಡಲಾರಂಭಿಸಿದ್ದಾರೆ.

ಪ್ರಹ್ಲಾದನ ಸಾಂಗತ್ಯದಲ್ಲಿ ಅಸುರಬಾಲಕರೂ ಸಹಾ ಭಕ್ತಿಯಲ್ಲಿ ಮುಳುಗಿದುದನ್ನು ಕಂಡು ಷಂಡಮಾರ್ಕರು ಕಂಗಾಲಾಗಿದ್ದಾರೆ. ಕೂಡಲೇ ನಡೆದು ಹಿರಣ್ಯಕಶಿಪುವಿಗೆ ನಡೆದುದನ್ನೆಲ್ಲಾ ವಿವರಿಸಿದ್ದಾರೆ. ಇದನ್ನು ಕೇಳುತ್ತಲೇ ಅಸುರನಿಗೆ ತೀವ್ರವಾದ ಕೋಪವುಂಟಾಗಿದೆ. ಪ್ರಹ್ಲಾದನನ್ನು ವಧಿಸಲೇಬೇಕೆಂಬ ನಿರ್ಣಯಕ್ಕೆ ಬಂದಿದ್ದಾನೆ. ಆ ದಾನವನು ಕಾಲಿಂದ ತುಳಿಸಿಕೊಂಡ ಸರ್ಪದಂತೆ ಬುಸುಗುಡುತ್ತಾ ವಿನಮ್ರನೂ, ಹಸಿಗೂಸಾದ,ಸ್ವಭಾವರೀತ್ಯಾ ದೋಷ ದೂರನಾದ ಪ್ರಹ್ಲಾದನನ್ನು ದುರ್ವಾಚ್ಯಗಳಿಂದ ನಿಂದಿಸಿದ್ದಾನೆ. "ಲೇ! ಭಂಡನೇ! ಮಂದಮತಿಯೇ! ಕುಲನಾಶನೇ!ನನ್ನ ಶಾಸನವನ್ನೇ ಅತಿಕ್ರಮಿಸಿದ ನಿನ್ನನ್ನು ಇಂದು ಯಮಪುರಿಗೆ ಕಳಿಸುತ್ತೇನೆ ನನ್ನ ಕೋಪಕ್ಕೆ ಮೂರು ಲೋಕಗಳು ಕಂಪಿಸುತ್ತವೆಂದು ನಿನಗೆ ಗೊತ್ತೇ ಇದೇ. ಅಷ್ಟಾದರೂ ಯಾರ ಕುಮ್ಮಕ್ಕಿನಿಂದ ನೀನಿಷ್ಟು ಧೈರ್ಯದಿಂದಿರುವೆ? ನಿರ್ಭಯವಾಗಿ ನಮ್ಮ ಶಾಸನವನ್ನೇ ಧಿಕ್ಕರಿಸುತ್ತಿರುವೆ".

ತಂದೆಯಾಡಿದ ಮಾತಿಗೆ ಪ್ರತ್ಯುತ್ತರವಾಗಿ ಪ್ರಹ್ಲಾದನು " ರಾಜಾ! ನನ್ನ ಬಲಕ್ಕೆ ಮೂಲವಾದುದು ನಿನ್ನ ಬಲಕ್ಕೂ ಮೂಲ ಎಂಬುದನ್ನು ಅರಿತುಕೋ, ನಿಜ ಹೇಳಬೇಕೆಂದರೆ ಎಲ್ಲಾ ಬಲಗಳಿಗೂ ಮೂಲವು ಒಂದೇ ಸ್ಥಾವರ - ಜಂಗಮಗಳೇ ಆಗಲೀ ಉಚ್ಚ - ನೀಚಗಳೇ ಆಗಲೀ ಬ್ರಹ್ಮನೊಂದಿಗೆ ಎಲ್ಲಾ ಜೀವಿಗಳು ಆ ದೇವದೇವನ ಬಲದಿಂದಲೇ ನಿಯಂತ್ರಿಸಲ್ಪಡುತ್ತಿದ್ದಾರೆ. ಆದರೂ ಪಿತನೇ! ಈ ಅಸುರ ಸ್ವಭಾವವನ್ನು ಬಿಟ್ಟು ಬಿಡು. ಹೃದಯದಿಂದ ಶತ್ರು - ಮಿತ್ರರೆಂಬ ಭಾವನೆಯನ್ನು ತೊರೆದು ಹಾಕಿ ಎಲ್ಲರೆಡೆಗೂ ಸಮಾನ ಭಾವದಿಂದ ವ್ಯವಹರಿಸು. ಮನಸ್ಸಿಗೆ ಮಿಗಿಲಾದ ಶತ್ರುವಿಲ್ಲ. ದೇಹವನ್ನು ದೋಚುವ ಅರಿಷಡ್ವರ್ಗಗಳೆಂಬ ಶತ್ರುಗಳನ್ನು ಗೆಲ್ಲದೇ ದಶದಿಶಗಳ ಶತ್ರುಗಳನ್ನು ಗೆದ್ದಿರುವೆನೆಂದುಕೊಳ್ಳುವವರು ಮೂರ್ಖರೇ ಸರಿ. ಅಂತಃ ಶತ್ರುಗಳಾದ ಅರಿಷಡ್ವರ್ಗಗಳನ್ನು ಗೆದ್ದಿರುವವರಿಗೆ ವಾಸ್ತವದಲ್ಲಿ ಶತ್ರುಗಳೇ ಇರಲಾರರು." ಎಂದಿದ್ದಾನೆ.

ಇದರಿಂದ ಹಿರಣ್ಯಕಶಿಪು ಮತ್ತಷ್ಟು ಕ್ರೋಧಿತನಾಗಿದ್ದಾನೆ. ಹಲ್ಲುಗಳನ್ನು ಕಟಕಟ ಕಡಿಯುತ್ತಾ "ಏ ಮಂದಮತಿ! ಇಂದ್ರಿಯ ನಿಗ್ರಹದಲ್ಲಿ ನನಗಿಂತಲೂ ಹೆಚ್ಚಾಗಿರುವಂತೆ ಮಾತನಾಡುತ್ತಿದ್ದೀಯೆ! ಇದು ಕೇವಲ ಅರೆತಿಳಿವು. ಮರಣ ಹತ್ತಿರ ಬಂದಿರುವ ಕಾರಣಕ್ಕೇ ನೀನು ಈ ಅಸಂಬದ್ಧ ಸಂಭಾಷಣೆಗೈಯುತ್ತಿರುವೆ. ನಮ್ಮೆಲ್ಲರನ್ನು ನಿಯಂತ್ರಿಸುವವನು ಬೇರೊಬ್ಬನಿದ್ದಾನೆಂದು ಹೇಳಿದೆಯಲ್ಲ ಅವನೆಲ್ಲಿದ್ದಾನೆ. ಅವನು ಸರ್ವತ್ರವಿರುವವನಾದರೆ ಈ ಕಂಭದಲ್ಲಿ ಕೂಡಾ ಇದ್ದಾನೆಯೇ? ಅಧಿಕಪ್ರಸಂಗವನ್ನು ಮಾಡುತ್ತಿರುವ ನಿನ್ನ ಶಿರವನ್ನೀಗ ನನ್ನ ಖಡ್ಗದಿಂದ ಕೆಳಕ್ಕುರುಳಿಸುತ್ತೇನೆ. ನಿನ್ನ ಆರಾಧ್ಯ ದೈವ ನಿನ್ನನ್ನು ಅದ್ಹೇಗೆ ರಕ್ಷಿಸುತ್ತದೆಯೋ ನಾನೂ ಕಾಣುವೆ" ಎಂದು ಖಡ್ಗವನ್ನಿಡಿದು, ಸಿಂಹಾಸನದಿಂದೆದ್ದು ಮುಷ್ಠಿಯಿಂದ ಕಂಭವನ್ನು ಗುದಿದ್ದಾನೆ. ಅಷ್ಟೇ! ಬ್ರಹ್ಮಾಂಡವನ್ನೇ ಇಬ್ಭಾಗ ಮಾಡಿದಷ್ಟು ಶಬ್ಧ ಆ ಕಂಬದಿಂದ ಹೊರಹೊಮ್ಮಿದೆ.

## ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್ ಫೋನ್,ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

**- ಕಾರ್ಯನಿರ್ವಹಣಾಧಿಕಾರಿ**

# ಪದಬಂಧ - 7

**ಎಡದಿಂದ ಬಲಕ್ಕೆ**

01.ಕಂದು ಬಣ್ಣದ ರುಚಿಯಾದ ಹಣ್ಣು ...(3)
02.ರೋಗಿಗಳಿಗೆ ಸಾಮಾನ್ಯ ಕೊಡುವ ಹಣ್ಣು ...(3)
03.ಸಾಮಾನ್ಯವಾಗಿ ಕೋಟೆಗೆ ಸಿಕ್ಕಿಸುವ ಹೂ ...(3)
04.ಜಿಡ್ಡಿನ ತರಕಾರಿ ಗೊಜ್ಜಿಗೆ ಉಪಯೋಗ ಹೆಚ್ಚು ...(2)
05.ಹಳದಿ ಹಾಗೂ ಬಿಳಿ ಬಣ್ಣದಲ್ಲಿ ಹೆಚ್ಚು ಸಿಗುವ ಹೂ ...(4)
06.ಕಪ್ಪು, ಕೆಂಪು, ಹಳದಿ ಹಸಿರು ಬಣ್ಣದಲ್ಲಿನ ಹಣ್ಣು ...(2)
07.ಗುಂಡಗಿನ, ಉದ್ದನೆ, ಕೆಂಪು, ಹಳದಿ ತರಕಾರಿ ...(3)
08.ಸೀತೆಯ ಹೆಸರಿನ, ಸಿಪ್ಪೆ, ಬೀಜ ಹೆಚ್ಚಿರುವ ಹಣ್ಣು ...(4)
09.ಹಿತಕ ಬೇಳೆ, ಕಾರದ ಕಾಳಿಗೆ, ತರಕಾರಿ ...(3)

**ಬಲದಿಂದ ಎಡಕ್ಕೆ**

10.ಹಣ್ಣು, ಕಾಯಿ, ದಿಂಡು, ಎಲೆ ಎಲ್ಲವೂ ಉಪಯೋಗ ...(2)
11.ದಪ್ಪಗಿನ ಚೆಂಡಿನಂತೆ ದೊಡ್ಡ ಹೂ ...(2)
12.ಸಾಂಬರಿಗೆ, ಪಲ್ಯಕ್ಕೆ ಹೆಚ್ಚು ಉಪಯೋಗಿಸುವ ಉದ್ದದ ಹಸಿರು (ಕಾಯನ್ನು ನುಂಗಿದ) ತರಕಾರಿ ...(3)
13.ಹಣ್ಣಾಗಿ, ಕಾಯಾಗಿ ಚಿಪ್ಸ್ ಮಾಡಲು ಉಪಯೋಗಿ ...(3)
14.ಹಣ್ಣಿನ ರಾಜ ಎನ್ನುತ್ತಾರೆ., ಉಪ್ಪಿನಕಾಯಿ, ಚಟ್ನಿಗೂ ಉಪಯೋಗ ಇದರ ಎಲೆ ಹಬ್ಬಗಳಿಗೆ ಬೇಕೇಬೇಕು ...(2)
15.ಚಿತ್ರಾನ್ನಕ್ಕೆ, ಉಪ್ಪಿನಕಾಯಿಗೆ ಉಪಯೋಗಿ ...(2)
16.ಸೀತಾಫಲದಂತೆ, ಇದು ಗುಂಡಗೆ ಗಟ್ಟಿ ಇರುವ ಫಲ ...(4)
17. ಇದು ಎಣ್ಣೆ ಬೀಜಕ್ಕೆ ಪ್ರಸಿದ್ಧಿ, ಸುಂದರ (ಬೀಜ ತುಂಬಿರುವ) ಹೂ ...(4)
18.ಎರಡರಿಂದ 3 ಅಡಿಗಿಂತ ಹೆಚ್ಚು ಉದ್ದವಿರುವ ತರಕಾರಿ, ಎತ್ತರದ ಗಿಡದಲ್ಲಿ ಜೋತು ಬಿದ್ದಿರುತ್ತೆ ...(4)

| ಕ್ರ.ಸಂ | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|
| 1 | 1 | | | 10 | 20 | 2 | | |
| 2 | 3 | | | | | 4 | | 11 |
| 3 | 21 | 5 | | | | | | 12 |
| 4 | | 15 | | 14 | | | | 13 |
| 5 | | | 6 | | 23 | 7 | | |
| 6 | 22 | 8 24 | | | | | | 16 |
| 7 | | | | 17 | | | | 18 |
| 8 | | | | | 19 | 9 | | |

**- ಪಿ.ಜಿ. ಶ್ರೀನಿವಾಸನ್**

-59 ನೇ ಪುಟದಲ್ಲಿ ಉತ್ತರವನ್ನು ನೋಡಬಹುದು.

19.ಕೇಸರಿ ಬಣ್ಣದ ಹೂ- ಹೆಂಗಸರು ಹೆಚ್ಚು ಬಯಸುತ್ತಾರೆ. ...(5)

**ಮೇಲಿಂದ ಕೆಳಕ್ಕೆ**


20.ಹೂಗಳಲ್ಲಿ ಹೆಚ್ಚು ಜನಪ್ರಿಯ, ಸುವಾಸನೆಯಲ್ಲಿ ಸಹ ...(3)

**ಕೆಳಗಿನಿಂದ ಮೇಲಕ್ಕೆ**

21.ಇದರ ಎಳೆನೀರು,ಕಾಯಿ, ಒಣಗಿಸಿದ ಮೇಲಿನ ಕೊಬ್ಬರಿ, ಗರಿ, ಎಲ್ಲವೂ ಉಪಯೋಗ ...(3)
22.ಈ ಹಣ್ಣನ್ನು ಬಿಚ್ಚಿದರೆ ಮುತ್ತುಗಳುದುರುತ್ತವೆ. ...(3)
23.ಸುವಾಸನೆಯ ಹಳದಿ ಹೂ ...(3)
24.ಈ ಹಣ್ಣು ಮೊದಲು ಕಾಯಿಯಿದ್ದಾಗ ಹಸಿರಾಗಿರುತ್ತದೆ. ಹಣ್ಣಾದ ಮೇಲೆ ಹಳದಿ ಬಣ್ಣಕ್ಕೆ ತಿರುಗಿ ಹೆಚ್ಚು ಬೀಜವಿದ್ದರೂ, ತಿರುಳಿನ ಸಮೇತ ನುಂಗುತ್ತೇವೆ. ...(2)

## ತಿರುಮಲೆ
## ಶ್ರೀ ವೆಂಕಟೇಶ್ವರ ಸ್ವಾಮಿಯವರ ನವರಾತ್ರಿ ಬ್ರಹ್ಮೋತ್ಸವಗಳು
## 2020 ಅಕ್ಟೋಬರ್ 16 ರಿಂದ 24 ರ ವರೆಗೆ

**17-10-2020**
**ಶನಿವಾರ**



ಹಗಲು :
ಚಿಕ್ಕಶೇಷವಾಹನ




ರಾತ್ರಿ :
ಹಂಸವಾಹನ

**18-10-2020**
**ಭಾನುವಾರ**



ಹಗಲು :
ಸಿಂಹವಾಹನ




ರಾತ್ರಿ :
ಮುತ್ತಿನಚಪ್ಪರ ವಾಹನ

# ತಿರುಮಲೆ
# ಶ್ರೀ ವೆಂಕಟೇಶ್ವರ ಸ್ವಾಮಿಯವರ ನವರಾತ್ರಿ ಬ್ರಹ್ಮೋತ್ಸವಗಳು
# 2020 ಅಕ್ಟೋಬರ್ 16 ರಿಂದ 24 ರ ವರೆಗೆ



**19-10-2020**
**ಸೋಮವಾರ**

**ಹಗಲು:**
**ಕಲ್ಪವೃಕ್ಷವಾಹನ**



**ರಾತ್ರಿ:**
**ಸರ್ವಭೂಪಾಲವಾಹನ.**



**20-10-2020**
**ಮಂಗಳವಾರ**

**ಹಗಲು:**
**ಪಲ್ಲಕ್ಕಿಯಲ್ಲಿ**
**ಮೋಹಿನೀಅವತಾರೋತ್ಸವ**



**ರಾತ್ರಿ:**
**ಗರುಡವಾಹನ**

## ತಿರುಮಲೆ
## ಶ್ರೀ ವೆಂಕಟೇಶ್ವರ ಸ್ವಾಮಿಯವರ ನವರಾತ್ರಿ ಬ್ರಹ್ಮೋತ್ಸವಗಳು
## 2020 ಅಕ್ಟೋಬರ್ 16 ರಿಂದ 24 ರ ವರೆಗೆ

**21-10-2020**
**ಬುಧವಾರ**



**ಹಗಲು:**
**ಹನುಮದ್ವಾಹನ**



**ರಾತ್ರಿ:**
**ಗಜವಾಹನ**

**22-10-2020**
**ಗುರುವಾರ**




**ಹಗಲು :**
**ಸೂರ್ಯಪ್ರಭವಾಹನ**



**ರಾತ್ರಿ:**
**ಚಂದ್ರಪ್ರಭವಾಹನ**



ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್., ರವರಿಂದ
04-10-2020 ದಿನಾಂಕದಂದು ತಿರುಮಲೆ
ಆಲಯದಲ್ಲಿ ತಿ.ತಿ.ದೇ. ಪೂರ್ಣ ಹೆಚ್ಚುವರಿ
ಕಾರ್ಯನಿರ್ವಹಣಾಧಿಕಾರಿಯಾಗಿ
ಬಾಧ್ಯತೆಗಳನ್ನು ಸ್ವೀಕರಿಸುತ್ತಿರುವ
ಶ್ರೀ ಎ. ವಿ.ಧರ್ಮಾರೆಡ್ಡಿ ಐ.ಡಿ.ಇ.ಎಸ್.,ರವರು.

ಶ್ರೀ ಎ. ವಿ.ಧರ್ಮಾರೆಡ್ಡಿ ಐ.ಡಿ.ಇ.ಎಸ್.,ರವರಿಂದ
10-10-2020 ದಿನಾಂಕದಂದು
ತಿರುಮಲೆ ಆಲಯದಲ್ಲಿ
ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿಯಾಗಿ
ಬಾಧ್ಯತೆಗಳನ್ನು ಸ್ವೀಕರಿಸುತ್ತಿರುವ
ಡಾ॥ ಕೆ.ಎಸ್. ಜವಹರ್ ರೆಡ್ಡಿ , ಐ.ಎ.ಎಸ್., ರವರು



# ಮಾತೃಶಕ್ತಿಯ ದಿವ್ಯಾರಾಧನೆಯ ಪರ್ವ

– ಡಾ॥ ಗುರುರಾಜ ಪೋಶೆಟ್ಟಿಹಳ್ಳಿ
9739369621

ಶಾಕ್ತಪರಂಪರೆಯ ಕೊಡುಗೆಯಾಗಿ ದೇವಿಯ ನವ ರಾತ್ರದ ಆಚರಣೆ ನಡೆದುಬಂದಿದೆ. ಧಾರ್ಮಿಕ ದೃಷ್ಟಿಯಲ್ಲಿ ಮಹಿಳೆ ಎಲ್ಲ ಕಾಲದಲ್ಲೂ ಪೂಜಾರ್ಹಳೆ, ಆಕೆಯ ಮಾತೃತ್ವದ ಶಕ್ತಿ ; ಅವಳನ್ನು ಮಾತೃಶಕ್ತಿಯ ಒಂಬತ್ತು ನೆಲೆಗಳಲ್ಲಿ ಸ್ತ್ರೀಶಕ್ತಿಯನ್ನು ಪೂಜಿಸುತ್ತಾ ವಿಜಯದಶಮಿಯ ದಿನದಂದು ದುಷ್ಟಸಂಹಾರ ಮಾಡು ಸಾಂಕೇತವಾಗಿ ವಿಜಯದಾಚರಣೆಯನ್ನು ಮಾಡಿಕೊಂಡು ಬರಲಾಗುತ್ತಿದೆ. ಮಾತೃಶಕ್ತಿಯ ಸೊಬಗೇ ಹೆಚ್ಚು ಅಪ್ಯಾಯಮಾನವೆನಿಸುವುದರಿಂದ ಸಹನಶೀಲ ಮಾತೃಗುಣ ಪಸರಿಸಲಿ ಎನ್ನುವುದೇ ದಸರೆಯ ಹರಕೆ.

ಬೇರೆ ಬೇರೆ ಮಾಸಗಳಲ್ಲೂ ನವರಾತ್ರಿ ಆಚರಿಸುವ ಪದ್ಧತಿಯಿದ್ದರೂ ಕರ್ನಾಟಕ ಮತ್ತು ದಕ್ಷಿಣಭಾರತದಲ್ಲಿ ಶರನ್ನವರಾತ್ರಿಯೇ ಆಚರಣೆಯಲ್ಲಿದೆ. ಪಿತೃಗಳಿಗೆ ಎಡೆಯಿಟ್ಟು ಧನ್ಯತೆ ಅನುಭವಿಸುವ ಮಹಾಲಯ ಅಮಾವಾಸ್ಯೆಯ ಮರುದಿನದಿಂದಲೇ ಮಾತೃಶಕ್ತಿಯ ಆರಾಧನೆ ಆರಂಭವಾಗುತ್ತದೆ. ಹೆಣ್ಣೇ ಯಾಕೆ? - ಎಂಬ ಪ್ರಶ್ನೆಗಳಿಗೆ ಉತ್ತರ ನೀಡುವುದು ಸ್ವಲ್ಪ ಕಷ್ಟವೇ ಸರಿ. ಆದರೂ ಸೃಷ್ಟಿಯ ರಹಸ್ಯ ಆಕೆಯ ಉದರದಲ್ಲಿಯೇ ತಾನೇ ಇರುವುದು? ಸೃಷ್ಟಿಯ ನಿರಂತರತೆಯ ಲಾಲನೆಪಾಲನೆಗಳ ಜವಾಬ್ದಾರಿ ಹೆಣ್ಣು ಹೊರುತ್ತಾಳೆಂದೋ ಏನೋ!? ಪ್ರಕೃತಿಯೂ ಹೆಣ್ಣೇ ಅಲ್ಲವೇ - ಹೀಗೆ ಎಲ್ಲ ಜವಾಬ್ದಾರಿಗಳ ಮೂರ್ತ ರೂಪದಂತಿರುವ ಹೆಣ್ಣು ಪೂಜಾರ್ಹಳು ಎನಿಸಿದ್ದಾಳೆ.

ಹೀಗೆ, ಹೊಸಶಕ್ತಿಯ ಸಂಚಯನವಾಗುವ ದಸರೆಯೊಂದಿಗೇ ನೆನೆಪಿಗೆ ಬರುವ ಮತ್ತೊಂದು ಪುರಾಣದ ಆಚರಣೆ, ಗೊಂಬೆ ಕೂರಿಸುವ ಸಂಪ್ರದಾಯ. ಅದರಲ್ಲೂ ಪುರಾಣದ ನೂರಾರು ಕಥಾನಕಗಳಿಗೆ ದೃಶ್ಯರೂಪ ಕೊಡುವ ಈ ಗೊಂಬೆ ಕೂರಿಸುವ ಸಂಪ್ರದಾಯ. ಮಕ್ಕಳಿಗೆ ಪುರಾಣದ ಪರಿಚಯವಾಗಲು ಅತ್ಯಂತ ಸಹಕಾರಿ, ಆ ಮೂಲಕ ಪುರಾಣದ ಪರಿಚಯವಾಗಲು ಅತ್ಯಂತ ಸಹಕಾರಿ, ಆ ಮೂಲಕ ಮಕ್ಕಳ ಮನಸ್ಸಲ್ಲಿ ಅದ್ಭುತವಾದ ಸಾಂಸ್ಕೃತಿಕ ಲೋಕವೊಂದು ಸೃಷ್ಟಿಯಾಗುವುದಂತು ಖಂಡಿತ. ಕಲಕತ್ತೆಯ ದುರ್ಗೆ, ಗುಜರಾತಿಗಳ ಗರ್ಭಾನೃತ್ಯ, ದಕ್ಷಿಣಕನ್ನಡದ ಹುಲಿವೇಷ, ನಶಿಸುತ್ತಿರುವ ಹೂವಿನಕೋಲು, ಜಂಬೂಸವಾರಿ ಎಲ್ಲವೂ ನಮ್ಮ ಮನಸ್ಸಿನ ಕಾನ್ವಾಸಿನಲ್ಲಿ ಬಣ್ಣಗಳ ಓಕುಳಿಯನ್ನೇ ಮೂಡಿಸುತ್ತದೆ. ವಿಭ್ರಮೆಗೊಳಿಸುವ ಈ ನೂರಾರು ಬಣ್ಣಗಳ ನಡುವೆ, ಮಾತೃಶಕ್ತಿ ಪುನಃಶ್ಚೇತನಗೊಳ್ಳಲಿ. ನಾಣ್ಯಕ್ಕೆ ಎರಡು ಮುಖಗಳಿರುವಂತೆ ಸ್ತ್ರೀ ಎನ್ನುವ ಜೀವದ ಎರಡು ಗುಣಲಕ್ಷಣಗಳು, ಪ್ರಕೃತಿ ಸಹಜ ದುರ್ಬಲತೆ ಮನುಷ್ಯ ಸಹಜವಾದ ಸಬಲತೆಯೂ ಮನುಷ್ಯಗುಣವೇ. ಅಂತಃಕರಣದಿಂದ ಸ್ವಲ್ಪ ದುರ್ಬಲವಾಗಿ ಕಾಣುವ, ನಿರ್ವಂಚನೆಯಿಂದ ಪ್ರೀತಿಸುವ ಮತ್ತು ಜವಾಬ್ದಾರಿಯಿಂದ ಸಬಲಳೂ ಆಗುವ ಮಾತೃಶಕ್ತಿಯ ಸೊಬಗೇ ಹೆಚ್ಚು ಅಪ್ಯಾಯಮಾನವೆನಿಸುವುದು.

### ನವರಾತ್ರಿ - ಜಗನ್ಮಾತೆಯ ವಿಶ್ವರೂಪ

ನವರಾತ್ರಿ ಎಂದರೆ ದೇವಿಯ ಆರಾಧನೆಗೆ ಮೀಸಲಾದ ಒಂಬತ್ತು ದಿನಗಳ ಪರ್ವ. 'ನವರಾತ್ರ' ಎಂದು ಪ್ರಸಿದ್ಧವಾಗಿದೆಯಾದರೂ ಸರಿಯಾದ ರೂಪ 'ನವರಾತ್ರಿ' ಇದನ್ನು 'ದುರ್ಗೋತ್ಸವ' ಎಂದು ಕರೆಯುತ್ತಾರೆ.; ಹತ್ತನೆಯ ದಿನವಾದ ವಿಜಯದಶಮಿಯನ್ನೂ ಸೇರಿಸಿಕೊಂಡು ಇದನ್ನು 'ದಶಾಹ' ಎಂದು ಕರೆಯುತ್ತಾರೆ. ಇದೇ 'ದಸಾರ' ಆಗಿ ಬಳಕೆಯಾಗುತ್ತಿರುವುದು.

ಶರತ್ಕಾಲದಲ್ಲಿ ಈ ಪರ್ವವನ್ನು ಆಚರಿಸುವುದರಿಂದ ಇದನ್ನು 'ಶರನ್ನವರಾತ್ರಿ' ಎಂದೂ ವ್ಯವಹರಿಸುತ್ತಾರೆ.

ಜೀವನ ನಿಂತ ನೀರಿನಂತೆ ಅಲ್ಲ; ಅದು ಸದಾ ಗತಿಶೀಲವಾದದ್ದು. ಈ ಗತಿಶೀಲತೆಯೇ ಬದುಕಿನ ಹೊಸತನಕ್ಕೆ ಕಾರಣವಾಗುವುದು. ಬದುಕಿನ ಈ ನವತ್ವದ ಬಗ್ಗೆ ನಮ್ಮನ್ನು ಎಚ್ಚರಿಸುವ ಹಬ್ಬವೇ ಈ ನವರಾತ್ರಿ. ಈ ಹಬ್ಬದಲ್ಲಿ ಶಕ್ತಿಯನ್ನು ಆರಾಧಿಸುತ್ತೇವೆ. ಶಕ್ತಿ ಎಂದರೆ ಬಲ ; ಅದಿಲ್ಲದೆ ನಮ್ಮ ಜೀವನವೇ ಇಲ್ಲ. ಹೀಗಾಗಿ ಶಕ್ತಿಯ ವಿವಿಧ ರೂಪಗಳನ್ನು ಈ ಪರ್ವಕಾಲದಲ್ಲಿ ಆರಾಧಿಸಲಾಗುತ್ತದೆ. ಪ್ರಕೃತಿಯಿಂದ ಮೊದಲುಗೊಂಡು ಬುದ್ಧಿ- ಶಕ್ತಿಗಳವರೆಗೆ ಭಾರತೀಯ ಸಂಸ್ಕೃತಿಯು ಒಟ್ಟು ಸೃಷ್ಟಿಯನ್ನೇ ಹೆಣ್ಣಿನ ರೂಪದಲ್ಲಿ ಕಂಡಿದೆ. ಆದುದರಿಂದ ನವರಾತ್ರಿಯ ಆಚರಣೆಯಲ್ಲಿ ಶಕ್ತಿಯ ಎಲ್ಲ ಶಕ್ತಿ - ಸೌಂದರ್ಯಗಳ ಸಂಗಮವನ್ನು ಕಾಣಬಹುದು. ನವರಾತ್ರಿಯ ಮೊದಲು ಮೂರು ದಿನಗಳು ಲಕ್ಷ್ಮಿಗೂ ಅನಂತರದ ಮೂರು ದಿನಗಳು ಸರಸ್ವತಿಗೂ, ಕೊನೆಯ ಮೂರು ದಿನಗಳನ್ನು ದುರ್ಗೆಗೂ ಮೀಸಲಾಗಿದೆ.ನಮಗೆ ಶಾರೀರಿಕವಾಗಿಯೂ ಬೌದ್ಧಿಕವಾಗಿಯೂ ಮಾನಸಿಕವಾಗಿಯೂ ಶಕ್ತಿಬೇಕು; ಈ ಶಕ್ತಿಯಿದ್ದರೆ ಜಯ ಖಂಡಿತ - ಎಂಬ ಸಂದೇಶವನ್ನು ಈ ಹಬ್ಬ ಸಾರುತ್ತಿದೆ.

ನವರಾತ್ರಿಗಳಂದು-ಹಗಲು ಶ್ರೀಮನ್ನಾರಾಯಣನ ಉತ್ಸವ-ರಾತ್ರಿ ಜಗನ್ಮಾತೆಯ ಪೂಜೆಗಳಾಗಿ, ಹತ್ತನೇ ದಿನ ವಿಜಯದಶಮಿಯೆಂದು 'ಶ್ರೀನಿವಾಸನ ಕಲ್ಯಾಣ ಮಹೋತ್ಸವದಿಂದ ಆ ಆದಿ ಮಾತಾಪಿತೃಗಳ ಮಹಾಪೂಜೆ - ಸಪ್ತಮಾತೃಕಾ ಪೂಜೆ, ನವದುರ್ಗೆಯ ಪೂಜೆ - ಮಹಾಸಂತರ್ಪಣೆಗಳಾದಿಯಾಗಿ, ಋಷಿಪ್ರಣೀತವಾಗಿ ನಡೆದು ಬಂದಿದೆ. ಇವಿಷ್ಟು ವಿವರ ಯಾಕೆ ನವರಾತ್ರಿ ಎಂಬೋ ಹಬ್ಬಗಳ ಸಾಲು ಹೆಣೆಯಿತು ಎಂಬುದರ ಮೂಲ.

ಇನ್ನು ಜ್ಯೋತಿಷ್ಯ ಜ್ಞಾನದ ಪ್ರಕಾರವೂ ಈ ಮಾತಾ - ಪಿತೃ ತತ್ತ್ವಗಳ ಆರಾಧನೆ ಸಿದ್ಧ ಮಾಡಬಹುದಾಗಿದೆ. ಕನ್ಯಾ ರಾಶಿಯು ಚಂದ್ರಮಂಡಲ ಮತ್ತು ಪಿತೃಲೋಕಗಳ ಗತಿಯಲ್ಲಿ ಸ್ಥಿತವಾಗಿದೆ.ಕನ್ಯಾ ರವಿಯು ಪ್ರವೇಶವಾಗುವ 15 ದಿನ ಪಿತೃ ಪಕ್ಷವೆಂದೂ, ನಂತರದ ಮುಂದಿನ ಹತ್ತು ದಿನ ನವರಾತ್ರಿ ಶ್ರೀಮಾತೆಯ ಆರಾಧನೆಯೆಂದೂ ಶಾಸ್ತ್ರಸಿದ್ಧ ! ನಮ್ಮ ನಮ್ಮ ಮಾತಾಪಿತರ ಶ್ರಾದ್ಧ ಪೂಜೆಗಳ ಮುಗಿಸಿ, ಜಗನ್ಮಾತಾಪಿತರಾದ ಶ್ರೀ ನಾರಾಯಣ, ಶಕ್ತಿ ರೂಪಗಳ ಆರಾಧನೆ ನವರಾತ್ರಿಯಲ್ಲಿ ಒಂದೇ ಮುಹೂರ್ತವೂ ಬಿಡುವಿರದೇ ಆಚರಣೆ ವಿಧಿಸಿರುವರು.

### ಶಮೀ ಶಮಯತೇ ಪಾಪಂ

ಬನ್ನಿ ಗಿಡಕ್ಕೆ ತನ್ನದೇ ಆದ ಇತಿಹಾಸವಿದೆ, ಗೌರವವಿದೆ. ರಾಜ ಮಹಾರಾಜರ ಕಾಲದಿಂದಲೂ ಬನ್ನಿ ಹಬ್ಬ ತನ್ನ ವಿಶೇಷತೆಯನ್ನು ಮೆರೆಯುತ್ತ ಬಂದಿದೆ. ಆಗಿನಿಂದಲೂ ಬನ್ನಿ ಗಿಡವನ್ನು ಪೂಜಿಸಿಕೊಂಡು ಬಂದ ಬಗ್ಗೆ ಪುರಾಣ ಕಥೆಗಳಲ್ಲಿ ಉಲ್ಲೇಖವಿದೆ.

ಪಾಂಡವರು ಅಜ್ಞಾತವಾಸಕ್ಕೆ ತೆರಳುವ ಸಂದರ್ಭದಲ್ಲಿ ತಮ್ಮ ಶಸ್ತ್ರಾಸ್ತ್ರಗಳನ್ನೆಲ್ಲ ಬನ್ನಿ ಮರದಲ್ಲಿ ಬಚ್ಚಿಟ್ಟು ಹೋಗಿದ್ದರಂತೆ. ಬನ್ನಿ ಮರದಲ್ಲಿ ಕಾಳಿಕಾ ದೇವಿ ಇರುತ್ತಾಳೆ. ಅವಳು ಶಸ್ತ್ರಾಸ್ತ್ರಗಳನ್ನು ಕಾಪಾಡುತ್ತಾಳೆ ಎನ್ನುವುದು ನಂಬಿಕೆ. ನಂತರ ಕೌರವರೊಂದಿಗೆ ಯುದ್ಧಕ್ಕೆ ಹೊರಟ ಸಂದರ್ಭದಲ್ಲಿಯೂ ಅವರು ಬನ್ನಿ ಮರವನ್ನು ಪೂಜಿಸಿಯೇ ಹೋಗಿದ್ದು ಎಂಬುದೂ ಉಲ್ಲೇಖವಾಗಿದೆ. ಈ ವಿಜಯದ ಸಂಕೇತವಾಗಿ ಇಂದಿಗೂ ವಿಜಯ ದಶಮಿ ದಿನ ಬನ್ನಿ ಮುಡಿಯುವ, ಬನ್ನಿ ಹಂಚುವ ಆಚರಣೆ ಚಾಲ್ತಿಯಲ್ಲಿದೆ.

ನವರಾತ್ರಿ ಮಹಾನವಮಿ, ದಸರಾ,ವಿಜಯದಶಮಿ, ನಾಡಹಬ್ಬವೆಂದೂ ಕರೆಯಲಾಗುವ ಈ ಹಬ್ಬ ಉತ್ತರ ಕರ್ನಾಟಕದಲ್ಲಿ ಬನ್ನಿ ಹಬ್ಬ 'ಮಾನೋಮಿ' ಎಂತಲೇ ಪ್ರಸಿದ್ಧ. ದಸರಾ ಆಡಂಬರದ ಆಚರಣೆಯಾದರೆ ಬನ್ನಿ ಹಬ್ಬ ಅತ್ಯಂತ ಸರಳವಾಗಿಯೂ ಆಚರಿಸಬಹುದಾದ ಹಬ್ಬ ಅಂತೆಯೇ , ಅರಮನೆ ಇರಲಿ, ಮಹಾಮನೆ ಇರಲಿ, ಗುಡಿಸಲೇ ಆಗಲಿ ನಿಸರ್ಗದೇವಿ ಮನಸ್ಸು ಬಿಚ್ಚಿ ಸುರಿಸುವ ಬನ್ನಿ ಎಲೆಗಳಿಂದ ಪೂಜೆ ಮಾಡುವುದು ಯಾರಿಗೂ ಕಷ್ಟವಾಗಲಾರದು.

ಬನ್ನಿಗಿಡವನ್ನು ಶಮೀವೃಕ್ಷ ಎಂತಲೂ ಕರೆಯಲಾಗುತ್ತದೆ. ಬನ್ನಿಗಿಡದ ಎಲೆಗಳು ಬಂಗಾರಕ್ಕೆ ಸಮವೆಂದೂ, ವಿಜಯದ ಸಂಕೇತವೆಂದೂ ನಂಬಿಕೊಂಡು ಬರಲಾಗಿದೆ. ಬನ್ನಿ ಗಿಡದಲ್ಲಿ ಕಾಳಿದೇವಿ ನೆಲೆಸಿರುತ್ತಾಳೆ ಎನ್ನುವ ಕಾರಣಕ್ಕೆ ಯಾರೂ ಅದನ್ನು ಕಡಿಯುವುದಿಲ್ಲ. ಕಡಿದರೂ ಉರುವಲಾಗಿ ಉಪಯೋಗಿಸುವುದಿಲ್ಲ.

### ಪಾರಾಯಣ ಎಂಬ ಮಾತಿನ ಹವನ

ನವರಾತ್ರಿಯ ಈ ಆಚರಣೆಗಳಲ್ಲಿ ಮತ್ತೊಂದು ವಿಶೇಷ ಆಚರಣೆ ಎಂದರೆ ಪಾರಾಯಣ. ಪ್ರಮುಖವಾಗಿ ನವರಾತ್ರಿಯಲ್ಲಿ ರಾಮಾಯಣ ಮತ್ತು ದುರ್ಗಾಸಪ್ತಶತೀ ಗ್ರಂಥಗಳ ಪಾರಾಯಣವನ್ನು ಮಾಡುವ ಸಂಪ್ರದಾಯವಿದೆ.





ಪಾರಾಯಣ ಎನ್ನುವುದು ಭಾರತೀಯ ಸಂಸ್ಕೃತಿಯ ಒಂದು ವಿಶಿಷ್ಟ ಅಂಶ. ನಮ್ಮಲ್ಲಿ ಹಲವು ಪಾರಾಯಣ ಗ್ರಂಥಗಳಿವೆ. ವಾಲ್ಮೀಕಿ ರಾಮಾಯಣ, ಭಗವದ್ಗೀತೆ, ಜ್ಞಾನೇಶ್ವರಿ, ರಾಮಚರಿತ ಮಾಸ, ಹರಿಕಥಾ ಮೃತಸಾರ - ಹೀಗೆ ಹಲವು ಗ್ರಂಥಗಳು ಪಾರಾಯಣಕ್ಕೆ ಒದಗುತ್ತಿವೆ. ಇದರ ಜೊತೆಗೆ ಶ್ರೀ ದುರ್ಗಾಸಪ್ತಶತೀ, ಸೌಂದರ್ಯ ಲಹರೀ, ಶ್ರೀ ವಿಷ್ಣು ಸಹಸ್ರನಾಮ ಸ್ತೋತ್ರ, ಶ್ರೀ ಲಲಿತಾ ಸಹಸ್ರನಾಮ ಸ್ತೋತ್ರಗಳಂಥ ಸ್ತೋತ್ರ ಗುಚ್ಛಗಳ ಪಾರಾಯಣವನ್ನೂ ಮಾಡುತ್ತಾರೆ.





ಭಾರತೀಯ ಸಂಸ್ಕೃತಿಯ ಹಲವು ವಿಶೇಷ ಗಳಲ್ಲಿ 'ಪಾರಾಯಣ' ಕ್ರಮವೂ ಒಂದು. ದೇವರ ಒಂದು ಹೆಸರನ್ನೋ ಒಂದು ಸ್ತೋತ್ರವನ್ನೋ ಅಥವಾ ಇಡಿಯ ಒಂದು ಗ್ರಂಥವನ್ನೋ ಎಡೆಬಿಡದೆ ಪಠಿಸುವ ಕ್ರಮವೇ ಪಾರಾಯಣ. ನಮ್ಮ ಸಂಸ್ಕೃತಿ ಯಲ್ಲಿ ಇಂಥ ಹಲವು ಪಾರಾಯಣ ಗ್ರಂಥಗಳಿವೆ. ಮಹಾತತ್ತ್ವದ ಜೊತೆಗೆ ನಿರಂತರ ಅನುಸಂಧಾನ ವನ್ನು ಭಾವಬುದ್ಧಿಗಳಿಗೆ ಒದಗಿಸುವ ನಮ್ಮ ಅಂತ ರಂಗದ ಸಾಧನೆಯೇ ಪಾರಾಯಣ. ಹಲವು ಪರ್ವ ದಿನಗಳಲ್ಲಿ ಹೀಗೆ ಪಾರಾಯಣವನ್ನು ಮಾಡುವ ಸಂಪ್ರದಾಯವುಂಟು. ನವರಾತ್ರಿಯ ಸಮಯದಲ್ಲಿ ರಾಮಾಯಣ ಮತ್ತು ದುರ್ಗಾ ಸಪ್ತಶತಿಗಳ ಪಾರಾಯಣ ನಡೆಯುತ್ತದೆ. ಮಾತಿನ ಮೂಲಕ ನಮ್ಮ ಹೃದಯದಲ್ಲಿ ನಡೆಸುವ ವಾಗ್ ಯಜ್ಞವೇ ಪಾರಾಯಣ.





**ದುರ್ಗಾಸಪ್ತಶತೀ**

ಮಾರ್ಕಂಡೇಯ ಪುರಾಣದಲ್ಲಿ ಬರುವ ದೇವೀ ಮಹಾತ್ಮವನ್ನೇ 'ದುರ್ಗಾಸಪ್ತಶತೀ' ಎನ್ನುವುದು. ಮಾರ್ಕಂಡೇಯ ಮುನಿಯು ಕ್ರೌಷ್ಟುಕಿಗೆ







ದೇವೀಮಾಹಾತ್ಮ್ಯವನ್ನು ವಿವರಿಸುತ್ತಾನೆ. ಶಕ್ತಿಯ ಎಲ್ಲ ರೂಪ ಸ್ವರೂಪಗಳನ್ನೂ ದುರ್ಗಾಸಪ್ತಶತಿಯಲ್ಲಿ ಕಾಣಬಹುದು. ದೇವೀಮಾಹಾತ್ಮ್ಯದಲ್ಲಿ ಮೂರು ಚರಿತ್ರೆಗಳಿವೆ. ಪ್ರಥಮ ಚರಿತ್ರದ ಮೊದಲನೆಯ ಅಧ್ಯಾಯದಲ್ಲಿ ಮಹಾಕಾಳಿಗೆ ಸಂಬಂಧಿಸಿದ ಮಹಿಮೆಯಿದೆ. ದ್ವಿತೀಯ ಚರಿತ್ರದಲ್ಲಿ ಮಹಾಲಕ್ಷ್ಮಿಯ ಮಹಿಮೆಗಳನ್ನು ಕಾಣಬಹುದು. ತೃತೀಯ ಚರಿತ್ರವು ಮಹಾಸರಸ್ವತಿಗೆ ಸಂಬಂಧಿಸಿದೆ. ದೇವಿಯನ್ನು ತಾಯಿಯ ಬೇರೆ ಬೇರೆ ಸ್ವರೂಪಗಳಲ್ಲೂ ಶಕ್ತಿಯ ವಿವಿಧ ಆಯಾಮಗಳಲ್ಲೂ ಇಲ್ಲಿ ಅನಾವರಣ ಮಾಡಲಾಗಿದೆ. ದೇವಿಯು ಸಮಸ್ತ ಜೀವರಾಶಿಯ ಚೇತನ , ಬುದ್ಧಿ, ನಿದ್ರೆ, ಹಸಿವು ನೆರಳು, ಶಕ್ತಿ, ಬಾಯಾರಿಕೆ, ಕ್ಷಮೆ, ಜಾತಿ, ಲಜ್ಜೆ , ಶಾಂತಿ, ಶ್ರದ್ಧೆ, ಧೃತಿ, ವೃತ್ತಿ, ಸ್ಮೃತಿ, ದಯೆ, ನೀತಿ, ತುಷ್ಟಿ, ಪುಷ್ಟಿ,ಭ್ರಾಂತಿ, ಇಂದ್ರಿಯಗಳ ಅಧಿಷ್ಠಾತ್ರಿ- ಎಂದು ನಿರೂಪಿಸಲಾಗಿದೆ.

ಸರ್ವಮಂಗಲ ಮಾಂಗಲ್ಯೇ ಶಿವೇ ಸರ್ವಾರ್ಥಸಾಧಿಕೇ ।
ಶರಣ್ಯೇ ತ್ರ್ಯಂಬಕೇ ಗೌರಿ ನಾರಾಯಣಿ ನಮೋಸ್ತುತೇ ॥
ಯಾ ದೇವಿ ಸರ್ವಭೂತೇಷು ಮಾತೃರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ॥

**ಅರಿವಿನ ಸೀಮೋಲ್ಲಂಘನೆ**

ಜಗತ್ತಿನ ಸಕಲ ಜೀವಚರಗಳಿಗೂ ಮಾತೃ ಸ್ವರೂಪಿಯಾದ ದುರ್ಗೆಯ ಒಂಬತ್ತು ಅವತಾರಗಳನ್ನು ಬಿಂಬಿಸುವ ಪರ್ವಕಾಲವೇ ನವರಾತ್ರಿ.ಒಂಬತ್ತು ದಿನವೂ ದೇವಿಯ ಒಂದೊಂದು ಅವತಾರಗಳನ್ನು ಪೂಜಿಸಲಾಗುತ್ತದೆ. ಕರ್ನಾಟಕದಂತೆ ದೇಶದ ಇತರ ಕೆಲ ರಾಜ್ಯಗಳಲ್ಲಿಯೂ ದಸರಾ ಸಂಭ್ರಮ ಗರಿಗೆದರುತ್ತದೆ. ಆ ಸಡಗರದ ಒಂದು ನೋಟ ಇಲ್ಲಿದೆ.

ಮತ್ತೆ ದಸರಾ ಬಂದಿದೆ. ಆಷಾಡದ ಸುರಿವ ಮಳೆಯಿಂದ; ಹೊಲಗದ್ದೆಗಳಲ್ಲಿ ಬಿತ್ತನೆಯ ಕಾಲದಿಂದ ಆರಂಭವಾಗುವ ಹಬ್ಬಗಳು ಮನುಷ್ಯ-ಪ್ರಕೃತಿ ಜೊತೆಗಿನ ಅವಿನಾಭಾವ ಸಂಬಂಧವನ್ನು ದೃಡೀಕರಿಸುತ್ತ ಪ್ರಕೃತಿಯಿಂದ ಉಪಕೃತವಾಗಿದ್ದಕ್ಕೆ ಕೃತಜ್ಞತೆ ಸಲ್ಲಿಸುವಂತಿದೆ. ಈ ಭೂಮಿಯ ಮೇಲಿನ ಮನುಷ್ಯ ಜೀವಿ ಪ್ರಕೃತಿ ತನಗೆ ಕೊಟ್ಟಿರುವ ಸಮಸ್ತವನ್ನೂ ಮತ್ತೆ ಭಗವಂತನಿಗೆ ಸಮರ್ಪಿಸುತ್ತ ಅರ್ಪಣೆಯ ಭಾವವಿದೆ. ಅದೇ ವೇಳೆ ಬಾಂಧವ್ಯ ಬೆಸೆಯುವ, ಸಂಭ್ರಮಿಸುವುದಕ್ಕೆ ಕಾರಣವಾಗಿದೆ. ಈ ಹಬ್ಬಗಳ ನಂತರ ಬರುವ ನವರಾತ್ರಿ ಹಬ್ಬ ಶಕ್ತಿ ಸ್ವರೂಪವಾದ ದೇವಿಯ ಆರಾಧನೆಯ ಜೊತೆಗೆ ತನ್ನೊಳಗಿನ ಶಕ್ತಿಯನ್ನು ಜಾಗೃತವಾಗಿಸಿಕೊಳ್ಳುವ; ದುಷ್ಟ ಆಲೋಚನೆಗಳನ್ನು ಸಂಹರಿಸಿ ಆಧ್ಯಾತ್ಮದ ಉನ್ನತಿಗಾಗಿ ಆಂತರಿಕ ಶಕ್ತಿಯತ್ತ ಮುಖಮಾಡಿದೆ. ಹಾಗಾಗಿಯೇ ಕತ್ತಲೆ ಕಳೆದು ಬೆಳಕು ಹರಡುವ ದೀಪಾವಳಿಗೆ ದಸರಾ ಹಬ್ಬ ಮುನ್ನುಡಿಯಂತಿದೆ. ನಾಡಹಬ್ಬವೂ ಆದ ದಸರಾ ಏಕಕಾಲಕ್ಕೆ ಸ್ವಕೀಯವೂ ಸಾರ್ವತ್ರಿಕವೂ ಆಗಿದೆ ಹಾಗಾಗಿ ಇದು ಬಾಹ್ಯ ಆಚರಣೆಯ ಜೊತೆ ಜೊತೆಗೆ ಅಂತರಂಗದ ಮಿತಿ ದಾಟುವ, ಸೀಮೋಲ್ಲಂಘನೆಯೂ ಆಗಿದೆ.

ಆಶ್ವಯುಜ ಶುದ್ಧ ಪ್ರತಿಪದೆಯಿಂದ ನವಮಿಯವರೆಗೆ ಒಂಬತ್ತು ದಿನಗಳ ಅವಧಿಯಲ್ಲಿ ನಿರಂತರವಾಗಿ ನಡೆಯುವ ಶಕ್ತಿಯ ಆರಾಧನೆ ನವರಾತ್ರಿ, ಶರತ್ಕಾಲದಲ್ಲಿ ಆಚರಿಸಲ್ಪಡುವುದರಿಂದ ಇದಕ್ಕೆ 'ಶರನ್ನವರಾತ್ರಿ' ಎಂದು ಹೆಸರು. ವರ್ಷಕಾಲದ ಮಳೆಯ ಆರ್ಭಟವು ಕಡಿಮೆಯಾಗಿ ಶರತ್ಕಾಲದ ಹೂಮಳೆಯ ಜಡಿಯು ಆವರಿಸಿಕೊಳ್ಳುವ ಪರ್ವಕಾಲವಿದು. ಹೊಲಗದ್ದೆಗಳಲ್ಲಿ ಪೈರುಗಳು ನಳನಳಿಸಿ ಹೊಡೆದುಂಬುವ ಸಮಯವಿದು. ರೈತರಿಗೆ ಆರಂಭದ ಪರಿಶ್ರಮದಿಂದ ಕೊಂಚ ವಿರಾಮ, ಚಾತುರ್ಮಾಸ್ಯದ ಏಕಾಂತದಿಂದ ಹೊಸ ಬಿಸಿಲ ಕ್ರಿಯಾತ್ಮಕ ಲೋಕಾಂತಕ್ಕೆ ಮೈಹರಡಿಕೊಳ್ಳುವ ಜೀವನ ಚಟುವಟಿಕೆಗಳು. ಮನೆ - ಮಠ - ಮಂದಿರ, ಅಂಗಡಿ ಮುಂಗಟ್ಟುಗಳು, ಬೀದಿಗಳು-ಎಲ್ಲವನ್ನೂ ಅಲಂಕರಿಸುವ ಆತುರ. ಇಂಥಪರ್ವಕಾಲದಲ್ಲಿಯೇ ನವರಾತ್ರಿಯ ನವದುರ್ಗಾರಾಧನೆ ತನ್ನ ವೈಭವವನ್ನು ಪಡೆದುಕೊಳ್ಳುತ್ತದೆ.

ಜಗತ್ತಿನ ಜೀವ - ಜೀವನದ ಮೂಲ ಪರಾಶಕ್ತಿ, ಅದರ ಅಭಿವ್ಯಕ್ತಿತ.ಕಾರಕಶಕ್ತಿಗಳು ಅನಂತ. ಅದರ ಲೋಕಾನುಗ್ರಹದ ಪ್ರಧಾನವಾದ ಮುಖಗಳು ಮೂರು - ಸೃಷ್ಟಿ , ಸ್ಥಿತಿ, ಸಂಹಾರ, ಸೃಷ್ಟಿಶಕ್ತಿ ಸರಸ್ವತಿ; ಸ್ಥಿತಿಯ ಮೂರ್ತರೂಪ ಮಹಾಲಕ್ಷ್ಮೀ,ಸಂಹಾರದ ಅವತಾರ ಮಹಾಕಾಳಿ.ಈ ಮೂರು ಶಕ್ತಿಗಳ ಉಪಾಸನೆಯೆ ನವರಾತ್ರಿ ವ್ರತದ ಹಾಸು. ಅದು ಸತ್ವ, ರಜಸ್ ತಮಸ್ಸುಗಳ ಸಮತೋಲನದ ದಾರಿಯೂ ಆಗಿದೆ. ಜ್ಞಾನ, ಇಚ್ಛಾ, ಕ್ರಿಯಾ ಎಂಬ ಜೀವಸಹಜವಾದ ಜೀವನ ಶಕ್ತಿ ಸಂಚಯನದ ಪ್ರಕ್ರಿಯೆಯೂ ಆಗಿದೆ. ಒಂಬತ್ತು ಹಗಲು - ರಾತ್ರಿಗಳ ತ್ರಿಕಾಲಪೂಜೆಯೂ ಈ ಶಕ್ತಿತ್ರಯಿಗೇ ಸಲ್ಲುತ್ತದೆ.

**ನವರಾತ್ರಿಯಲ್ಲಿ ನವಶಕ್ತಿ ವೈಭವ**

ನಮ್ಮನ್ನು ತೊಂದರೆಗೆ ಒಳಪಡಿಸುವ ಸಮಸ್ಯೆಗಳಾದ ಬಡತನ, ಅಜ್ಞಾನ ಮತ್ತು ನಿರುದ್ಯೋಗ ಮುಂತಾದವುಗಳೆಲ್ಲವೂ ಒಂದು ಮಹಿಷಾಸುರನ ರೂಪ.ಈ ಎಲ್ಲ ಸಮಸ್ಯೆಗಳ ನಿವಾರಣೆ ವ್ಯಕ್ತಿಗತ ಪ್ರಯತ್ನದಿಂದ ಸಾಧ್ಯವಾಗದು. ಅದಕ್ಕೆ ಎಲ್ಲರ

ಸಂಕಲ್ಪ ಶಕ್ತಿಯಿಂದ ಉದಯಿಸುವ ಪರಮ ಶಕ್ತಿ ಬೇಕು. ಈ ಸಂಘ ಶಕ್ತಿಯೇ ಮಹಾಲಕ್ಷ್ಮಿ. ಈ ಶಕ್ತಿಯಿಂದ ಹತನಾಗ ಬೇಕಾದ ದೈತ್ಯಶಕ್ತಿಯೇ ನಮ್ಮ ಅಜ್ಞಾನ, ಬಡತನ ಇತ್ಯಾದಿ. ಹೀಗೆ ನವರಾತ್ರಿ ಅರ್ಥಾತ್ ವಿಜಯದಶಮಿ ನಮ್ಮ ನಿತ್ಯ ಜೀವನದಲ್ಲಿ ನಿತ್ಯ ನಡೆಯುತ್ತಿರಬೇಕು. ದುಷ್ಟಶಕ್ತಿ ನಾಶವಾಗಿ ಶಿಷ್ಟಶಕ್ತಿ ವೃದ್ಧಿಗೊಂಡಾಗ ನಮ್ಮ ವೈಯಕ್ತಿಕ ಬದುಕು ಮತ್ತು ಸಾಮಾಜಿಕ ಬದುಕು ಸುಖಕರವಾಗುತ್ತದೆ.

ಭಕ್ತಿ, ಆರಾಧನೆ, ಕಲಾ-ಕೌಶಲ್ಯಗಳಿಗೆ ಶಕ್ತಿ-ಸಾಮರ್ಥ್ಯ ಹೀಗೆ ವಿಶಿಷ್ಟ ಬಗೆಯಲ್ಲಿ ವೈಶಿಷ್ಟವನ್ನು ಹೊಂದಿರುವ, ನವರಾತ್ರಿ ಭಾರತೀಯತೆಯನ್ನು ಉಜ್ವಲಗೊಳಿಸುವ, ರಾಷ್ಟ್ರೀಯತೆಯನ್ನು ಎಲ್ಲೆಡೆ ಸಾರುವ ಪ್ರತೀಕವಾಗಿ ನಾಡಹಬ್ಬವೆಂದು ಆಚರಿಸಲ್ಪಡುವ ಈ ಪರ್ವ ಸಕಲರಲ್ಲೂ ದೈವೀಪ್ರವೃತ್ತಿಯನ್ನು ಸಾಕಾರಗೊಳಿಸಿದರೆ ಆಚರಣೆಗೊಂದು ಅರ್ಥ ಸಿಗುತ್ತದೆ.

ಭಾರತ ದೇಶದಲ್ಲಿ ಪ್ರಕೃತಿಯೇ ಎಲ್ಲರ ಆರಾಧ್ಯ ದೈವ. ಪ್ರಕೃತಿಯನ್ನು ಸರಿಯಾಗಿ ಅರಿಯದಿದ್ದಲ್ಲಿ ಅದು ವಿಕೃತಿಯಾಗುತ್ತದೆ. ಆದುದರಿಂದಲೇ ಪ್ರಕೃತಿಯ ಆರಾಧನೆಯಲ್ಲಿ ಲೋಕೋತ್ತರ ಸಂಗತಿಗಳನ್ನೂ, ನೈತಿಕ, ವಿಶ್ವ ಕೌಟುಂಬಿಕ ಭಾವನೆಗಳನ್ನು ಕಾಣುವುದು ಸಂಸ್ಕೃತಿ. ಸಂವರ್ಧನೆಗೆ ಸಾಧನವಾಗಿದೆಯೆನ್ನಬಹುದು.

ಅದೇ ರೀತಿಯಾಗಿ ಪ್ರಕೃತಿಯನ್ನು ಕೆಲವೊಮ್ಮೆ ಸ್ತ್ರೀಗೆ ಹೋಲಿಕೆ ಮಾಡಲಾಗುತ್ತದೆ. ಕಾರಣ ನಮ್ಮ ದೇಶದ ಪುರಾತನ 'ಸ್ತ್ರೀ' ಪ್ರಧಾನ ಸಮಾಜ.ಸಂಸಾರದ ಜವಾಬ್ದಾರಿ ಹೊತ್ತ ನಂತರ ಸ್ತ್ರೀ ಸಹಜವಾಗಿಯೇ ಗೌರವಕ್ಕೆ ಪಾತ್ರಳಾಗುತ್ತಾಳೆ. ಅದೇ ರೀತಿಯಾಗಿ ಆಶ್ವಯುಜ ಮಾಸದ ಶುದ್ಧ ಪಾಡ್ಯದಿಂದ ದಶಮಿಯವರೆಗಿನ ಹತ್ತು ದಿವಸಗಳೂ ಕೂಡಾ ಸ್ತ್ರೀ ಶಕ್ತಿಯ ಆರಾಧನೆಯ ಪರ್ವವಾಗಿದೆ. ದುರ್ಗಾಮಾತೆಯ ವಿವಿಧ ಸ್ವರೂಪಗಳ, ದುಷ್ಟ ಶಕ್ತಿಯ ದಮನದ ಶಿಷ್ಟಶಕ್ತಿಯ ಆರಾಧನೆಯ ಈ ಪರ್ವ ಅತೀ ಹೆಚ್ಚು ದಿನಗಳ ಕಾಲ, ಅಂದರೆ, ನವರಾತ್ರಿಗಳ ದೀರ್ಘ ಆಚರಣೆಯೊಂದಿಗೆ ದಶಮಿಯಂದು ಮುಕ್ತಾಯಗೊಳ್ಳುವ ಈ ಪರ್ವದಲ್ಲಿ ಒಂದೊಂದು ದಿವಸಕ್ಕೂ ವಿಶಿಷ್ಟ ಆಚರಣೆಯಿದೆ.

**ದಸರಾವೈಭವ:**

ಪ್ರತಿ ಮಾಸದಲ್ಲೂ ಪಾಡ್ಯದಿಂದ ನವಮಿಯವರೆಗೆ ತಿಥಿಗಳಿದ್ದರೂ ಅದನ್ನು ನವರಾತ್ರಿ ಎನ್ನುವುದಿಲ್ಲ. ಆಶ್ವಯುಜ ಮಾಸದ ಶುಕ್ಲಪಕ್ಷದ ಪಾಡ್ಯದಿಂದ ಆರಂಭಿಸಿ, ನವಮಿಯವರೆಗಿನ ತಿಥಿಗಳಿಗೆ ಮಾತ್ರ ನವರಾತ್ರಿ ಎನ್ನುವರು. ಇದಕ್ಕೆ ದಶಮಿಯನ್ನು ಸೇರಿಸಿ ದಸರಾ ಎಂದೂ ರೂಢಿಯಲ್ಲಿದೆ. ಏಕೆಂದರೆ ಈ ಸಮಯದಲ್ಲಿ ವಸುಧೆಯು ಹಸಿರುಟ್ಟು, ಕಂಗೊಳಿಸುತ್ತಾ, ಹಳ್ಳ - ಕೊಳ್ಳಗಳಲೆಲ್ಲಾ ನೀರು ತುಂಬಿ ಝುಳುಝುಳು ನಿನಾದದೊಂದಿಗೆ ಮೈತುಂಬಿ ಹರಿಯುತ್ತಾ ಷೋಡಷಿಯಂತೆ ವೈಭವೀಕರಿಸಿರುತ್ತಾಳೆ. ಇಂತಹ ಭೂರಮೆಯನ್ನು ಪೂಜಿಸುವುದರಿಂದ ನವಚೈತನ್ಯ - ನವ ಉಲ್ಲಾಸ ಎಲ್ಲರಲ್ಲಿಯೂ ಉದ್ಭವವಾಗುತ್ತದೆ. ಪ್ರಕೃತಿ ಮಾತೆಯನ್ನು ದೇವೀಯ ರೂಪದಲ್ಲಿ ಪೂಜಿಸಲ್ಪಡುವ ಈ ದಸರಾ ವೈಭವ ಎಲ್ಲೆಡೆ ಆಚರಿಸಲ್ಪಡುತ್ತದೆ.

**ಶಾರದಾಪೂಜೆ**

ದೇವಿಯು ಮೂಲಾನಕ್ಷತ್ರ ಸಹಿತವಾದ ಸಪ್ತಮಿಯ ದಿವಸ ಸರಸ್ವತಿಯ ರೂಪದಲ್ಲಿ ಧರೆಯಲ್ಲಿ ಅವತರಿಸುತ್ತಾಳೆ. ಅಂದು ಎಲ್ಲೆಡೆ ಸರಸ್ವತಿ ಪೂಜೆಯನ್ನು ಆಚರಿಸುತ್ತಾರೆ. ವಿದ್ಯಾಧಿದೇವತೆಯಾದ ಅವಳ ಅನುಗ್ರಹ ಪಡೆಯಲು ಮನೆಯಲ್ಲಿರುವ ಉತ್ತಮ ಗ್ರಂಥಗಳನ್ನು, ಪ್ರತಿನಿತ್ಯ ಓದುವಂತಹ ಪುಸ್ತಕಗಳನ್ನು, ಮಕ್ಕಳ ಪಠ್ಯಪುಸ್ತಕ ಇತ್ಯಾದಿಗಳನ್ನು ಒಪ್ಪವಾಗಿ ಜೋಡಿಸಿ, ಪೂಜಿಸುವ ಪದ್ಧತಿಯಿದೆ. ಸರಸ್ವತಿ ನಮಸ್ತುಭ್ಯಂ ಕರಿಷ್ಯಾಮಿ ಸಿದ್ಧಿರ್ಭವತು ಮೇ ಸದಾ, ನಮಸ್ತೇ ಶಾರದಾದೇವಿ ಕಾಶ್ಮೀರ ಪುರವಾಸಿನೀ, ತ್ವಾಮಹಂ ಪ್ರಾರ್ಥಯೇ ನಿತ್ಯಂ, ವಿದ್ಯಾದಾನಂಚ ದೇಹಿಮೇ ಎಂದು ಪೂಜಿಸುತ್ತಾರೆ.

**ದುರ್ಗಾಷ್ಟಮಿ:**

ದೇವಿಯು ಎಂಟನೆ ದಿವಸ ದುರ್ಗೆಯ ರೂಪದಲ್ಲಿ ಅವತರಿಸುತ್ತಾಳೆಂದು, ದುರ್ಗಾಹೋಮ ಇತ್ಯಾದಿಗಳಿಂದ ದೇವಿಯ ಆರಾಧನೆಯನ್ನು ಮಾಡುತ್ತಾರೆ. ವೇದ ಪಾರಾಯಣ, ರಾಮಾಯಣ, ಭಾರತ ಪುರಾಣಾದಿಗಳ ಪಾರಾಯಣದಿಂದ 'ನಮಸ್ತೇ ಶರಣ್ಯೇ ಶಿವಸಾನುಕಂಪೇ, ನಮಸ್ತೇ ಜಗದ್ವ್ಯಾಪಿಕೇ ವಿಶ್ವರೂಪೇ, ನಮಸ್ತೇ ಜಗದ್ವಂದ್ಯ ಪಾದಾರವಿಂದೇ, ನಮಸ್ತೇ ಜಗತ್ತಾರಿಣಿತ್ರಾಹೀ ದುರ್ಗೆ ಎಂದು ದೇವಿಯನ್ನು ಆರಾಧಿಸುತ್ತಾರೆ.

**ಆಯುಧಗಳ ಪೂಜೆ**

ಪಾಂಡವರು ವನವಾಸಕ್ಕೆ ಹೋಗುವಾಗ ಆಯುಧಗಳನ್ನು ಬನ್ನಿ ಗಿಡದಲ್ಲಿ ಇಟ್ಟು ಹೋದರೆಂಬ ಪ್ರತೀತಿಯಿದೆ. ದೇವಿ ಶಿಷ್ಟ ರಕ್ಷಣೆಗಾಗಿ, ದುಷ್ಟ ಸಂಹಾರಕ್ಕಾಗಿ ದುರ್ಗೆಯ ರೂಪ ತಾಳಿ, ಸಕಲ ದೇವರ ಯುಧಗಳನ್ನು ಧರಿಸಿ, ರಾಕ್ಷಸರ ಸಂಹಾರ ಮಾಡಿದ ಬಗ್ಗೆ ಭಾರತೀಯರಿಗೆ ವಿಶೇಷ ಶ್ರದ್ಧೆ ಮತ್ತು ಭಕ್ತಿ. ಆದುದರಿಂದಲೇ ಮಹಾನವಮಿಯಂದು ಆಯುಧಗಳಿಗೆ ವಿಶೇಷ



ಪೂಜೆ,ರಾಜಮನೆತನದವರು ವಿಶೇಷವಾಗಿ ತಾವು ಉಪಯೋಗಿಸುವ ಬಿಲ್ಲು, ಬಾಣ,ಖಡ್ಗ, ಮುಂತಾದವುಗಳನ್ನು ಪೂಜಿಸುತ್ತಿದ್ದರೆ, ಈಗ, ತಮ್ಮ ತಮ್ಮ ವೃತ್ತಿಗೆ ಸಂಬಂಧಿಸಿದಂತಹ ಸಲಕರಣೆಗಳನ್ನು ಆಯುಧವೆಂದು ಭಾವಿಸಿ, ಅವುಗಳನ್ನೇ ಒಪ್ಪ ಓರಣವಾಗಿ ತೊಳೆದು - ಜೋಡಿಸಿ ಪೂಜೆಗೈಯುತ್ತಾರೆ.

**ವಿಜಯದಶಮಿ:**

ವಿಜಯದಶಮಿಯಂದು ಶ್ರೀರಾಮನು ರಾವಣನನ್ನು ವಧಿಸಿದ ದಿನವೆಂದು ಭಾವಿಸಿ, ವಿಜಯೋತ್ಸವವನ್ನು ಆಚರಿಸುವ ಪರಿ ಹಲವು ಕಡೆ ಚಾಲ್ತಿಯಲ್ಲಿದೆ. ಅದೇ ರೀತಿಯಾಗಿ ಪಾಂಡವರೂ ಸಹ ಅಜ್ಞಾತವಾಸದ ನಿಮಿತ್ತ ಶಮೀ ವೃಕ್ಷದ ಮೇಲೆ ಕಟ್ಟಲ್ಪಟ್ಟಿದ್ದ ತಮ್ಮ ಶಸ್ತ್ರಾಸ್ತ್ರಗಳನ್ನು ಅಜ್ಞಾತವಾಸ ಮುಗಿದ ನಂತರ ವಿಜಯದಶಮಿಯಂದು ಹೊರ ತೆಗೆದು ವಿಜಯೋತ್ಸವ ಆಚರಿಸಿದರೆಂಬ ಪ್ರತೀತಿಯಿದೆ.

ಅಂದು ಕಿರಿಯರು, ಹಿರಿಯರಿಂದ ಆಶೀರ್ವಾದ ಪಡೆದು, ಶಮೀಪತ್ರವನ್ನು ಪಡೆಯುತ್ತಾರೆ. ಶಮೀಪತ್ರ ವಿಜಯದ ಸಂಕೇತ. ಇದನ್ನು ಕನ್ನಡದಲ್ಲಿ ಬನ್ನೀಪತ್ರವೆಂದು ಸಂಬೋಧಿಸುತ್ತಾರೆ. ತಮಿಳಿನಲ್ಲಿ ಜಂಬೂವೆಂದೂ,ತೆಲುಗಿನಲ್ಲಿ ಜೆಮ್ಮಿಯೆಂದು ಮರಾಠಿಯಲ್ಲಿ ಶಮೀಯೆಂದು, ಹಿಂದಿಯಲ್ಲಿ ಜಾಂಡ ಎಂದೂ ಕರೆಯುತ್ತಾರೆ.

ವಿಜಯದಶಮಿ ಬಹಳ ಪವಿತ್ರವಾದ ದಿವಸ. ಈ ದಿನ ಶುಭ ಕಾರ್ಯಗಳಿಗೆ ಯೋಗ್ಯವಾದ ದಿನ. ಅಂಗಡಿ ಮುಂಗಟ್ಟುಗಳನ್ನು ಪ್ರಾರಂಭಿಸುವವರು, ವ್ಯಾಪಾರ, ವ್ಯವಹಾರಗಳನ್ನು ಕುದುರಿಸುವವರು, ಗೃಹಪ್ರವೇಶ ಮುಂತಾದ ಶುಭ ಕಾರ್ಯಗಳನ್ನು ಈ ದಿವಸ ನೆರವೇರಿಸುತ್ತಾರೆ.

**ನಾಡಹಬ್ಬ ದಸರಾ**

ನಾಡು, ನುಡಿ, ಸಂಸ್ಕೃತಿಗಳಿಗೆ ಸಂಬಂಧಿಸಿದಂತಹ ಸಂಪದ್ಭರಿತವಾದ ದಸರಾ ಹಬ್ಬವು ನಾಡ ಹಬ್ಬವನ್ನಾಗಿ ಆಚರಿಸಲ್ಪಡುತ್ತದೆ. ವಿಶೇಷವಾಗಿ ಮೈಸೂರಿನಲ್ಲಿ ಅದ್ದೂರಿ ಆಚರಣೆಗಳು, ಮೆರವಣಿಗೆ, ಜಂಬೂಸವಾರಿ ನಡೆಯುತ್ತದೆ. ಅದೇ ರೀತಿಯಾಗಿ, ಶೃಂಗೇರಿಯಲ್ಲಿ ಭಾರತೀತೀರ್ಥ ಶ್ರೀಗಳಿಗೆ ರಾಜ ಉಡುಪನ್ನು ಧರಿಸಿ ಸಂಜೆ ರಾಜ ದರ್ಬಾರ್ ನಡೆಸಲಾಗುತ್ತದೆ.



ಇನ್ನೂ ಹಲವಾರು ಕ್ಷೇತ್ರಗಳಲ್ಲಿಯೂ ದೇವಿಯ ಆರಾಧನೆ ವೈವಿಧ್ಯಮಯವಾಗಿ ನಡೆಯುತ್ತದೆ. ಒಟ್ಟಿನಲ್ಲಿ ಭಕ್ತಿ, ಆರಾಧನೆ, ಕಲಾ - ಕೌಶಲ್ಯಗಳಿಗೆ ಶಕ್ತಿ - ಸಾಮರ್ಥ್ಯ ಹೀಗೆ ವಿಶಿಷ್ಟ ಬಗೆಯಲ್ಲಿ ವೈಶಿಷ್ಟವನ್ನು ಹೊಂದಿರುವ, ನವರಾತ್ರಿ ಭಾರತೀಯತೆಯನ್ನು ಉಜ್ವಲಗೊಳಿಸುವ ರಾಷ್ಟ್ರೀಯತೆಯನ್ನು ಎಲ್ಲೆಡೆ ಸಾರುವ ಪ್ರತೀಕವಾಗಿ ನಾಡಹಬ್ಬವೆಂದು ಆಚರಿಸಲ್ಪಡುವ ಈ ಪರ್ವ ಸಕಲರಲ್ಲೂ ದೈವೀಪ್ರವೃತ್ತಿಯನ್ನು ಸಾಕಾರಗೊಳಿಸಿದರೆ ಆಚರಣೆಗೊಂದು ಅರ್ಥ ಸಿಗುತ್ತದೆ.

ಶಮೀ ಅಥವಾ ಬನ್ನಿ ಮರವು ಸಾಂಸ್ಕೃತಿಕ ಹಾಗೂ ಪೌರಾಣಿಕ ಮಹತ್ವಗಳನ್ನು ಹೊಂದಿದೆ. ಹಿಂದೆ ಪಾಂಡವರು ಅಜ್ಞಾತವಾಸಕ್ಕೆ ಹೋದಾಗ ತಮ್ಮ ಶಸ್ತ್ರಾಸ್ತ್ರಗಳನ್ನು ಶಮೀ ವೃಕ್ಷದಲ್ಲಿ ಬಚ್ಚಿಟ್ಟು ತಾವು ಬರುವವರೆಗೆ ಆ ಆಯುಧಗಳನ್ನು ಕಾಪಾಡುವ ಜವಾಬ್ದಾರಿಯನ್ನು ಶಮೀ ಮಾತೆಗೆ ಕೊಟ್ಟಿದ್ದರಂತೆ. ತಮ್ಮ ಆಯುಧಗಳನ್ನು ಕಾಪಾಡಿದ ಬನ್ನಿ ವೃಕ್ಷ ಮುಂದೆ ಶತ್ರು ಸಂಹಾರ ಕಾರ್ಯಕ್ಕೆ ನೆರವಾದ್ದರಿಂದ ಅದಕ್ಕೆ ಧನ್ಯತೆ ಸೂಸಿ ಬನ್ನಿ ಮರವನ್ನು ಪ್ರತಿಷ್ಠಾಪಿಸಿದ ಬನ್ನಿ ಮಂಟಪಕ್ಕೆ ಹೋಗಿ, ಬನ್ನಿ ಮರವನ್ನು ಸುತ್ತಿ, ಬನ್ನಿ ಮುಡಿದು ಗುರು ಹಿರಿಯರಿಗೆ ಕೊಟ್ಟು ನಮಿಸುವುದು ಅಂದಿನಿಂದ ಬಂದಿರುವ ಸಂಪ್ರದಾಯ.



## ನವರಾತ್ರಿಯ ನವಸೋಪಾನಗಳು

'ನವರಾತ್ರಿ' ಎನ್ನುವ ಪದದಲ್ಲಿ 'ನವ' ಮತ್ತು 'ರಾತ್ರಿ' ಎನ್ನುವ ಎರಡು ಶಬ್ದಗಳು ಕಾಣಸಿಗುತ್ತವೆ. 'ನವ' ಎನ್ನುವ ಶಬ್ದಕ್ಕೆ ಅನೇಕ ಅರ್ಥಗಳಿವೆಯಾದರೂ 'ಹೊಸತು' ಮತ್ತು ಸಂಖ್ಯಾ ವಾಚಕವಾದ 'ಒಂಬತ್ತು' ಎನ್ನುವ ಎರಡು ಅರ್ಥಗಳು ಪ್ರಮುಖವಾಗಿವೆ. ಒಂಬತ್ತು ಎನ್ನುವ ಸಂಖ್ಯಾ ವಾಚಕವನ್ನು ಪರಿಗಣಿಸಿದರೆ ಒಂಬತ್ತು ಎನ್ನುವ ಅಂಕೆಯ ಅಂಕೆಗಳಲ್ಲೇ ಗರಿಷ್ಠವಾದುದಾಗಿದ್ದು ಅದರಿಂದ ಯಾವ ಸಂಖ್ಯೆಯನ್ನು ಗುಣಿಸಿದರೂ ಬರುವ ಗುಣಲಬ್ಧದ ಅಂಕೆಗಳನ್ನು ಸೇರಿಸಿದರೆ ಒಂಬತ್ತೇ ಆಗುತ್ತದೆ. ಈ ವಿಶಿಷ್ಟತೆ ಬೇರಾವ ಅಂಕೆಯಲ್ಲೂ ಇಲ್ಲ .

ನವರಾತ್ರಿ. ಎಂದರೆ ಒಂಬತ್ತು ರಾತ್ರಿಗಳು. ನವ ಎಂದರೆ 'ಹೊಸತು' ಎಂದೂ ಅರ್ಥ. ಒಂಬತ್ತು ರಾತ್ರಿಗಳಲ್ಲಿ ನಮ್ಮ ಬದುಕನ್ನು ಹೊಸದಾಗಿ ರೂಪಿಸಿಕೊಳ್ಳುವ ಹಬ್ಬವೇ ಈ ನವರಾತ್ರಿ (ತ್ರ) ಎನ್ನಬಹುದು.ಶಕ್ತಿಯ ಅನಂತರೂಪಗಳ ಆರಾಧನೆಯೇ ನವರಾತ್ರಿಯ ವಿಶೇಷತೆ. ಇದು ನಮ್ಮ ನಾಡಹಬ್ಬವೂ ಹೌದು. 'ಶಕ್ತಿ' ಎಂದರೆ ಪ್ರಕೃತಿ. ಇದು ಹೊರಗಿನ ಪ್ರಕೃತಿಯೂ ಹೌದು; ನಮ್ಮ ಒಳಗಿನ ಪ್ರಕೃತಿಯೂ ಹೌದು. ಹೊರಗಿನ ಆಸುರೀ ಶಕ್ತಿಗಳನ್ನು ಸಂಹರಿಸಿ ಜಗನ್ಮಾತೆಯು ಶಿಷ್ಟರಕ್ಷಣೆ ಮಾಡಿದುದರ ಪರ್ವವೇ ನವರಾತ್ರಿ. ಇದು ನಮ್ಮ ಒಳಗಿನ ದುಷ್ಟಗುಣಗಳ ದಮನಕ್ಕೆ ಸಂಕೇತವೂ ಹೌದು. ನಮ್ಮ ಬದುಕಿನ ಸಾರ್ಥಕ್ಯಕ್ಕೆ ಅಡ್ಡಿಯಾಗಿರುವ ಒಳಗಿನ ಹೊರಗಿನ ಆತಂಕ - ದುಷ್ಟತನಗಳನ್ನು ಹೋಗಲಾಡಿಸಿಕೊಂಡು, ಹೊಸದಾದ ಸೊಬಗನ್ನು ತುಂಬಿಸಿಕೊಳ್ಳುವ ಕಲಾಪಗಳೇ ದಿಟವಾದ ನವರಾತ್ರಿಯ ಆಚರಣೆ.

## ಒಂಬತ್ತರ ಮಹತ್ವ

ನವ ಎಂಬುದಕ್ಕೆ ಎರಡು ಅರ್ಥವಿದೆ. ಒಂದು ಹೊಸತು ಹಾಗೂ ಇನ್ನೊಂದು ಒಂಬತ್ತು. 9 ರ ಸಂಖ್ಯೆಯಲ್ಲಿ ಒಂದು ವಿಶೇಷವಿದೆ. ಒಂಬತ್ತರ ಗುಣಾಕಾರದ ಗುಣಲಬ್ಧವನ್ನು ಪರಸ್ಪರ ಕೂಡಿಸಿದರೆ ಒಂಬತ್ತೇ ಬರುವುದು ಉದಾ : 9x1=9 9x2=18 1+8=9,9x3=27, 2+7=9 ಹೀಗೆ ನಮಗೆ ಕೊನೆಗೆ ಸಿಗುವುದು 9 ಆಗಿದೆ.ಈ ಸಂಖ್ಯೆ ಪರಿಪೂರ್ಣತೆಯನ್ನು ಸೂಚಿಸುತ್ತದೆ. ಅಂದರೆ, ದೇವಿಯು ಎಷ್ಟೇ ಅವತಾರ ತಾಳಿದರೂ ಕೊನೆಯಲ್ಲಿ ಆದಿಶಕ್ತಿಯಾಗಿಯೇ ಉಳಿಯುವಳು ಎಂಬುದನ್ನು ಇದು ಸೂಚಿಸುತ್ತದೆ.

ಜ್ಯೋತಿಷ್ಯ ಶಾಸ್ತ್ರದ ಪ್ರಕಾರ ಸಂಖ್ಯಾಶಾಸ್ತ್ರದಲ್ಲಿ 9 ರ ಅಧಿಪತಿ ಕುಜ ಗ್ರಹ. ಈ ಗ್ರಹವನ್ನು ಪಾಪಗ್ರಹ ಮತ್ತು ಶಕ್ತಿಗ್ರಹ ಎಂದು ಹೇಳಲಾಗಿದೆ. ಮನುಷ್ಯನ ಸಾಹಸ, ಧೈರ್ಯ ಮತ್ತು ಶಕ್ತಿಯನ್ನು ಈ ಗ್ರಹದ ಮೂಲಕವೇ ತಿಳಿಯಬಹುದು. ಆಂಗ್ಲ ಜ್ಯೋತಿಷ್ಯದ ಪ್ರಕಾರ ಇದನ್ನು 'ಯುದ್ಧದ ದೇವತೆ' ಎನ್ನುವರು.

## ಸಂಖ್ಯೆ 3 ರ ಮಹತ್ವ :

ನವರಾತ್ರಿಯಲ್ಲಿ ದೇವಿಯನ್ನು ಮೂರು ಪ್ರಕಾರವಾಗಿ ಆಚರಿಸುತ್ತಾರೆ. ಅವು ಯಾವುವು ಎಂದರೆ ಮಹಾಕಾಳಿ, ಮಹಾಲಕ್ಷ್ಮಿ ಮತ್ತು ಮಹಾ ಸರಸ್ವತಿ. ನವರಾತ್ರಿಯಲ್ಲಿ ಮೊದಲ ಮೂರು ದಿನಗಳು ಮಹಾಕಾಳಿಯನ್ನು ಆರಾಧಿಸಿದರೆ, ದ್ವಿತೀಯ ಮೂರು ದಿನಗಳಲ್ಲಿ ಮಹಾಲಕ್ಷ್ಮಿಯನ್ನು ನಂತರ 3 ದಿನಗಳಲ್ಲಿ ಮಹಾ ಸರಸ್ವತಿಯನ್ನು ಆರಾಧಿಸುವುದು ರೂಢಿಯಲ್ಲಿದೆ. ಮಹಾಕಾಳಿಯನ್ನು ಋಗ್ವೇದ ಸ್ವರೂಪಗಳಾಗಿ ಮಹಾಲಕ್ಷ್ಮಿಯಾಗಿ ಯರ್ಜು



ವೇದ ಸ್ವರೂಪಗಳಾಗಿ ಮತ್ತು ಮಹಾಸರಸ್ವತಿಯನ್ನು ಸಾಮ ವೇದ ಸ್ವರೂಪಳಾಗಿ ಪೂಜಿಸುವ ಸಂಪ್ರದಾಯವಿದೆ. ಸಂಪತ್ತಿಗೆ ಮಹಾಲಕ್ಷ್ಮಿ, ತೇಜಸ್ಸು ಮತ್ತು ಶಕ್ತಿಗೆ ಮಹಾಕಾಳಿ ಮತ್ತು ಜ್ಞಾನ ವನ್ನೂ ನೀಡುವವಳು ಮಹಾಸರಸ್ವತಿ.

### 3. ತತ್ವಗಳು :

ಈ ಜಗತ್ತು ನಿಂತಿರುವುದೇ ಸೃಷ್ಟಿ, ಸ್ಥಿತಿ ಮತ್ತು ಲಯ ಎಂಬ ಮೂರು ತತ್ವಗಳ ಮೇಲೆಯೇ ಈ ಕ್ರಮವನ್ನೂ ಬ್ರಹ್ಮ ಮತ್ತು ಶಿವರು ಪಾಲಿಸುತ್ತಾರೆ. ಆದರೆ, ಈ ಮೂರು ಶಕ್ತಿಗಳ ಹಿಂದೆ ಇರುವುದೇ ಮಹಾತಾಯಿ ಜಗದಂಬೆ,ಈಕೆಯನ್ನು ಸಾವಿರಾರು ವರ್ಷಗಳಿಂದ ಆರಾಧಿಸಿಕೊಂಡು ಬರಲಾಗುತ್ತಿದೆ.

### ವರ್ಣಮಾಲೆಯಲ್ಲಿ ದೇವಿ ( 3 ಮಾತ್ರೆಯ ಸ್ವರೂಪ ದೇವಿ);

ದೇವಿಯು ಸ್ವಾಹಾ, ಸ್ವಧಾ ಮತ್ತು ವಷಟ್ ಎಂಬ ಮಂತ್ರಗಳ ಸ್ವರೂಪಗಳು. ಅ, ಉ, ಮ ಎಂಬ ಮೂರು ಮಾತ್ರೆ ಗಳ ಸ್ವರೂಪಳೂ ಅವಳೇ. ವರ್ಣಮಾಲೆಯಲ್ಲಿರುವ ಶಕ್ತಿಯೂ ಅವಳದೇ. ಇವಳೇ ಮಹಾವಿದ್ಯೆಯೂ ಮತ್ತು ಮಹಾ ಮೋಹಳೂ ಆಗಿದ್ದಾಳೆ.

### ನವ ಭಕ್ತಿ ಶಕ್ತಿ

'ನವ' ಶಬ್ದ ನವೀನತೆಯ ಅಥವಾ ಹೊಸತರ ದ್ಯೋತ ಕವೂ ಆಗಿದೆ. ಮೊದಲನೆಯದಾಗಿ ಕಾಲದ ನವೀನತೆ ಅರ್ಥಾತ್ ಶರದ್ ಋತುವಿನ ಆಗಮನ. ಹೊಸ ಫಸಲು ಬರುವ ಕಾಲ. ಅಶ್ವಯುಜ ಮಾಸದಿಂದ ಚಳಿಗಾಲ ಪ್ರಾರಂಭವಾಗುತ್ತದೆ. 'ಜೀವೇಮ ಶರದಂ ಶತಮ್ ' ಎಂಬ ವೇದೋಕ್ತಿಯು ಶರದ್ ಋತುವಿನಲ್ಲಿ ಯಾರು ಬದುಕಿರುತ್ತಾರೋ ಅಂಥವರು ವರ್ಷವಿಡಿ ಜೀವಿಸುತ್ತಾರೆ ಎನ್ನುವುದನ್ನು ಸೂಚಿಸುತ್ತದೆ. (ನೂರು ವರ್ಷಗಳ ಕಾಲ ಬಾಳೋಣ ಎನ್ನುವ ಅರ್ಥವೂ ಇದೆ.) ಒಂಬತ್ತು ದಿನ ಉಪವಾಸ ಮಾಡಿ ವ್ಯಕ್ತಿಯು ತನ್ನ ಶಾರೀರಿಕ ಸ್ವಭಾವವನ್ನು ಪ್ರಕೃತಿಯ ಸ್ವಭಾವಕ್ಕೆ ಅನುಕೂಲ ವಾಗಿ ಪರಿವರ್ತಿಸಿಕೊಳ್ಳುತ್ತಾನೆ. ಕಾರಣ ಸ್ವಸ್ಥ ಹಾಗೂ ಆರೋಗ್ಯಕರ ಜೀವನ ನಡೆಸುವ ರಹಸ್ಯವೆಂದರೆ ಪ್ರಕೃತಿಯ ವಿರುದ್ಧ ಹೋಗ ತೊಡಗಿದರೆ ಆದರಿಂದ ಒಳಿತಾಗುವುದಿಲ್ಲ.

ನವರಾತ್ರಿಯ ಉಪವಾಸ ವಿಧಿಯನ್ನು ಗಮನಿಸಿದರೆ ಇದು ದೇಹದೊಳಗಿನ ಅಶುಚಿತ್ವವನ್ನು ಶುದ್ಧಗೊಳಿಸುವ ಅತಿ ಉತ್ತಮ ಸಾಧನವೆನ್ನುವುದು ತಿಳಿಯುತ್ತದೆ. ವ್ಯಕ್ತಿಯ ಅಂತರ್ ಶರೀರ ಮತ್ತು ಬಾಹ್ಯ ಶರೀರಗಳೆರಡೂ ಶುಚಿಯಾಗಿರ ಬೇಕೆಂದು ಶಾಸ್ತ್ರ ಹೇಳುತ್ತದೆ. ಪಂಚಮಹಾಭೂತಗಳಾದ ನೆಲ, ಜಲ, ಅನಿಲ, ಆಕಾಶ ಮತ್ತು ಅಗ್ನಿ ಮತ್ತು ಚತುಷ್ಟಯಗಳಾದ ಮನಸ್ಸು, ಬುದ್ಧಿ, ಚಿತ್ರ ಮತ್ತು ಅಹಂಕಾರ ಈ ನವತತ್ತ್ವಗಳನ್ನು ಅತ್ಯಂತ ಶುದ್ಧವಾಗಿಸುವ ಪ್ರಕ್ರಿಯೆಯಿಂದಾಗಿ ನವರಾತ್ರಿಯು ಸರ್ವರಿಗೂ ನವೀನತೆಯ ಸಂದೇಶ ಹೊತ್ತು ತರುತ್ತದೆ. ನಾವು ಮಾಡುವ ಕರ್ಮಗಳಿಗೆ ಗಮನ ಹರಿಸಿ ಎನ್ನುವ ಸಂದೇಶ ಅದು ನೀಡುತ್ತದೆ. ನಾವು ನಮ್ಮ ಕ್ರಿಯಾರೂಪಗಳಲ್ಲಿ ನಾವಿನ್ಯತೆಯನ್ನು ಮರೆಸಲಿ ಎನ್ನುವುದು ಅದರ ಆಶಯ.





**ನವದುರ್ಗೆಯರು**

ನವದುರ್ಗೆಯ ಮೊದಲ ದಿನದಿಂದ ಒಂಬತ್ತು ದಿವಸಗಳವರೆಗೂ ಪ್ರತಿದಿನ ದೇವಿಯ ನವ ಅವತಾರಗಳನ್ನು ಒಂದೊಂದು ದಿವಸ ಪೂಜಿಸಿ, ಭಕ್ತರು ತಮ್ಮ ಇಷ್ಟಾರ್ಥಗಳನ್ನು ಪೂರೈಸಿಕೊಳ್ಳುತ್ತಾರೆ. ಮೊದಲನೆ ದಿನದಿಂದ ಆರಂಭಿಸಿ, ಶೈಲಪುತ್ರಿ,ಬ್ರಹ್ಮಚಾರಿಣಿ,ಚಂದ್ರಘಂಟಾ, ಕೂಷ್ಮಾಂಡಾ, ಸ್ಕಂದಮಾತಾ, ಕಾತ್ಯಾಯಿನಿ, ಕಾಲರಾತ್ರಿ, ಮಹಾಗೌರಿ ಹಾಗೂ ಒಂಬತ್ತನೆಯ ದಿವಸ ಸಿದ್ಧಿಧ್ಧಾತ್ರಿ ಎಂಬುದಾಗಿ ವಿವಿಧ ರೂಪ ಮತ್ತು ನಾಮಗಳಿಂದ ಲೋಕಮಾತೆಯಾದ ಶ್ರೀದುರ್ಗಾದೇವಿಯನ್ನು ಆರಾಧಿಸಿ, ಪ್ರತಿನಿತ್ಯ ಒಂದೊಂದು ಬಗೆಯ ನೈವೇದ್ಯವನ್ನು ಅರ್ಪಿಸಿ, ಭಕ್ತಿ - ಭಾವಗಳಿಂದ ಪೂಜೆಗೈದು ಕೃತಾರ್ಥರಾಗುತ್ತಾರೆ. ಆವರಣಗಳ ಪೂಜೆಗಳನ್ನು ಗಮನಿಸಿದರೆ ಒಂಬತ್ತು ವಿಧದ ಆವರಣ ಪೂಜೆ ನೋಡಸಿಗುತ್ತದೆ. ಇದನ್ನು ಅವತಾರಾಣಾ ಆರ್ಚನೆ ಎಂದು ಕರೆಯಲಾಗಿದೆ.

**ಎಡದಿಂದ ಬಲಕ್ಕೆ**

1. ನೇರಳೆ
2. ಮೂಸಂಬಿ
3. ಗುಲಾಬಿ
4. ಬೆಂಡೆ
5. ಸೇವಂತಿಗೆ
6. ದ್ರಾಕ್ಷಿ
7. ಬದನೆ
8. ಸೀತಾಫಲ
9. ಅವರೆ

**ಬಲದಿಂದ ಎಡಕ್ಕೆ**

10. ಬಾಳೆ
11. ಚಂಡೆ
12. ಹುರುಳಿ
13. ಹಲಸು
14. ಮಾವು
15. ನಿಂಬೆ
16. ರಾಮಫಲ
17. ಸೂರ್ಯಕಾಂತಿ
18. ಪಡವಲ
19. ಕನಕಾಂಬರ

**ಮೇಲಿಂದ ಕೆಳಕ್ಕೆ**

20. ಮಲ್ಲಿಗೆ

**ಕೆಳಗಿನಿಂದ ಮೇಲಕ್ಕೆ**

21. ತೆಂಗು
22. ದಾಳಿಂಬೆ
23. ಸಂಪಿಗೆ
24. ಸೀಬೆ

| ಕ್ರ.ಸಂ | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|
| 1 | 1 ನೇ | ರ | ಳೆ | 10 ಬಾ | 20 ಮ | 2 ಮೋ | ಸಂ | ಬಿ |
| 2 | 3 ಗು | ಲಾ | ಬಿ | | ಲ್ಲಿ | 4 ಬೆಂ | ಡೆ | 11 ಚಂ |
| 3 | 21 ತೆಂ | 5 ಸೇ | ವಂ | ತಿ | ಗೆ | ಳಿ | ರು | 12 ಹು |
| 4 | ಬೆ | 15 ನಿಂ | ವು | 14 ಮಾ | ಪಿ | ಸು | ಲ | 13 ಹ |
| 5 | ಳಿಂ | ಬೆ | 6 ದ್ರಾ | ಕ್ಷಿ | 23 ಸಂ | 7 ಬ | ದ | ನೆ |
| 6 | 22 ದಾ | 8 24 ಸೀ | ತಾ | ಫ | ಲ | ಫ | ಮ | 16 ರಾ |
| 7 | ತಿ | ಕಾಂ | ರ್ಯ | 17 ಸೂ | ಲ | ವ | ಡ | 18 ಪ |
| 8 | ರ | ಬ | ಕಾಂ | ನ | 19 ಕ | 9 ಅ | ವ | ರೆ |



# ಮೂರು ನರಕದ್ವಾರಗಳು

ಡಾ|| ವೈಷ್ಣವಾಂಘ್ರಿಸೇವಕ್‌ದಾಸ್
9821914642
ಅನುವಾದ : ಡಿ.ಎಸ್.ಭೂಮಿಕ


ಸ್ವರ್ಗ ನರಕವೆಂಬೆರಡು ಪ್ರದೇಶಗಳ ಬಗ್ಗೆ ಸಾಧಾರಣವಾಗಿ ಎಲ್ಲರೂ ಕೇಳಿಯೇ ಇರುತ್ತೀರಿ ಸ್ವರ್ಗಕ್ಕೆ ಹೋದವನು ಆನಂದವನ್ನು ಅನುಭವಿಸುತ್ತಾನೆಂದೂ, ನರಕಕ್ಕೆ ಹೋದವನು ಎಷ್ಟೋ ಕಷ್ಟ-ಪಡುತ್ತಾರೆಂದು ಎಲ್ಲರಿಗೂ ಗೊತ್ತು. ಪುಣ್ಯ ಮಾಡಿದವನು ಸ್ವರ್ಗಕ್ಕೆ ಹೋಗುತ್ತಾರೆಂದೂ ಹಾಗೆಯೇ ಪಾಪಗಳನ್ನು ಮಾಡಿದವರು ನರಕಕ್ಕೆ ಹೋಗುತ್ತಾರೆಂದೂ ಕೂಡಾ ಮನುಷ್ಯರೆಲ್ಲರಿಗೂ ಗೊತ್ತು. ಆದರೂ ಜನಗಳು ಪಾಪಗಳನ್ನು ಮಾಡುತ್ತಲೇ ಇರುತ್ತಾರೆ. ನಿಜದಲ್ಲಿ ನರಕದಲ್ಲಿ ನೀಡಲಾಗುವ ಘೋರ ಶಿಕ್ಷೆಗಳ ಬಗ್ಗೆ ನಮಗೆ ಶ್ರೀಮದ್ಭಾಗವತದಲ್ಲಿ ಸಿಗುತ್ತದೆ. ಯಾವ ಯಾವ ಪಾಪಗಳಿಗೆ ಯಾವ್ಯಾವ ಶಿಕ್ಷೆಗಳನ್ನು ವಿಧಿಸುತ್ತಾರೆಂದು ಅದರಲ್ಲಿ ಸ್ಪಷ್ಟವಾಗಿ ತಿಳಿಸಿದೆ. ಭಾಗವತದಲ್ಲಿ ಈ ವಿಧವಾದ ಸ್ಥೂಲವಾದ ಪಾಪಗಳಿಗೆ ಶಿಕ್ಷೆಗಳ ಕುರಿತು ವಿವರಿಸಲ್ಪಟ್ಟರೆ, ಭಗವದ್ಗೀತೆಯಲ್ಲಿ ಸೂಕ್ಷ್ಮವಾಗಿರುವ ಪಾಪಗಳ ಬಗ್ಗೆ ನರಕವು ಹೇಗೆ ಉಂಟಾಗುತ್ತದೆಂದು ಸ್ಪಷ್ಟವಾಗಿ ತಿಳಿಸಲಾಗಿದೆ. ಇದನ್ನು ಯುವಕರು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ನಿರಂತರವಾಗಿ ಪಾಪಗಳನ್ನು ಮಾಡುವವರಿಗೆ ಅದು ಸರ್ವೇ ಸಾಮಾನ್ಯವಾಗಿ ಬಿಡುತ್ತದೆ. ಹಾಗೆಯೇ ನರಕಕ್ಕೆ ಕಾರಣವಾದ ಕಾರ್ಯಗಳನ್ನು ಮಾಡುವವರಿಗೆ ಅಂತಹ ಪಾತಕ ಸ್ವಭಾವವಿರುವವರಿಗೆ ಅದು ಸಹಜವಾಗಿಯೇ ಕಾಣಿಸುತ್ತದೆ. ಅದರಿಂದಾಗಿ ನರಕವುಂಟಾಗುತ್ತದೆಂದು ಅವರಿಗೆ ಅರ್ಥವಾಗದು .

ನರಕಕ್ಕೆ ಮೂರು ದ್ವಾರಗಳು ಈ ಲೋಕದಲ್ಲಿಯೇ ಇರುವೆನೆಂದು ಶ್ರೀ ಕೃಷ್ಣ ಪರಮಾತ್ಮನು ಭಗವದ್ಗೀತೆಯಲ್ಲಿ ತಿಳಿಸಿದ್ದಾನೆ. "ಕಾಮ ಕ್ರೋಧ ಲೋಭ" ಎಂಬುವು ನರಕಕ್ಕೆ ಕೊಂಡೊಯ್ಯುವ ಮೂರು ದ್ವಾರಗಳು. ಅವು ಆತ್ಮಕ್ಕೆ ನಾಶವನ್ನು ತರುತ್ತವಾದ್ದರಿಂದ ಪ್ರತಿ ಬುದ್ಧಿವಂತನು ಅವನ್ನು ತಪ್ಪದೆ ಬಿಟ್ಟು ಬಿಡಬೇಕು."(ಭಗವದ್ಗೀತೆ - 16.21) ಸಾಕ್ಷಾತ್ ಭಗವಂತನೇ ಮಾನವರ ಒಳಿತಿಗಾಗಿ, ಶ್ರೇಯಸ್ಸಿಗಾಗಿ ಅತಿ ಮುಖ್ಯವಾದ ಎಚ್ಚರಿಕೆಯೆನ್ನಿತ್ತಿದ್ದಾನೆ. ಕಾಮ,ಕ್ರೋಧ, ಲೋಭವೆಂಬುವು ಸಹಜ ಸ್ವಭಾವವಾಗೇ ಕಂಡರೂ ನಿಜದಲ್ಲಿ ಅವು ನರಕಕ್ಕೆ ದ್ವಾರಗಳು. ಅಂದರೆ ಅದರ ಹೊಸ್ತಿಲನ್ನು ತುಳಿದವರು ಪ್ರವೇಶಿಸುವುದು ನರಕವನ್ನೇ. ನರಕವು ಒಂದೇ ಆದರೂ ಅದರಲ್ಲಿ ಪ್ರವೇಶಿಸಲು ಮೂರು ದ್ವಾರಗಳುಂಟು ಯಾವ ದ್ವಾರದಲ್ಲಿ ಹೋದರೂ ನರಕಕ್ಕೆ ಕೊಂಡೊಯ್ಯುತ್ತದ್ದಾರಿಂದ ಇನ್ನು ಮೂರು ದ್ವಾರಗಳಲ್ಲಿ ಪ್ರವೇಶಿಸುವವನ ಸ್ಥಿತಿ ಎಷ್ಟು ಘೋರವಾಗಿರುವುದೋ ಊಹಿಸಲು ಅಸಾಧ್ಯ ಕಾಮವೆಂದರೆ ಸಾಮಾನ್ಯವಾಗಿ ಕಾಮವಾಂಛೆ ಎಂದು ಅರ್ಥವಾದರೂ ಅದಕ್ಕೆ ಸ್ಥೂಲವಾಗಿ 'ಕೋರಿಕೆ'ಎಂಬ ಅರ್ಥವನ್ನು ಹೇಳಿಕೊಳ್ಳಬಹುದು. ಯುವಕರು ಪ್ರಸ್ತುತ ನಾಶವಾಗುತ್ತಿರುವುದು ಈ ಕಾಮ ಛಾಂಛೆಯಿಂದಲೇ ಅದು ಪ್ರಸ್ತುತ ಜೀವನವನ್ನು ಹಾಳು ಮಾಡುವುದೊಂದೇ ಅಲ್ಲದೇ, ಜನ್ಮಜನ್ಮಾಂತರಗಳಲ್ಲಿಯೂ ನರಕದ ಬಾಗಿಲನ್ನು ತೋರಿಸುತ್ತದೆ. ಕಾಮವಾಂಛೆಯೊಳಗಾದ ಯುವಜನರು ತಮ್ಮ ಭವಿಷ್ಯವನ್ನು ಪಣವಾಗಿಟ್ಟುಕೊಳ್ಳುತ್ತಿದ್ದಾರೆಂದು ತಿಳಿಯಬೇಕು. ಆದ್ದರಿಂದಲೇ ಈ ವಿಷಯದಲ್ಲಿ ಹಿರಿಯರು ಗುರುಗಳು ಪ್ರಮುಖ ಪಾತ್ರವಹಿಸಿ ಈ ಪತನದಿಂದ ಯುವ ಜನತೆಯನ್ನು ಕಾಪಾಡಬೇಕು. ನರಕದ್ವಾರದಿಂದ ಅವರು ಶ್ರಮಿಸದೇ ನಿರೋಧಿಸಬೇಕು. ಉತ್ತಮವಾದ ಸಾಂಗತ್ಯವನ್ನು ಒದಗಿಸಿ ಅದರ ಮೂಲಕ ಯುವಕರು ಕಾಮವಾಂಛೆಯಿಂದ ಹೊರ ಬರುವಂತೆ ಪ್ರೇರೇಪಿಸಬೇಕು. ಒಳ್ಳೆಯ ಸಾಂಗತ್ಯವಿಲ್ಲದೆ ಕಾರಣಕ್ಕೇ ಅವರು ಈ ವಿಧವಾದ ಕಾಮ ಛಾಂಛೆಗೆ ಗುರಿಯಾಗುತ್ತಾರೆಂದು ಪರಿಶೋಧನೆಗಳು ತಿಳಿಸುತ್ತವೆ.

ಇನ್ನು ಕೋಪವೆನ್ನುವುದು ನರಕದ ಎರಡನೇ ದ್ವಾರವೆಂದು ಹೇಳಲಾಗಿದೆ. ವಾಸ್ತವದಲ್ಲಿ ಕಾಮದಿಂದಲೇ ಕ್ರೋಧವುಂಟಾಗುತ್ತದೆ. ಯಾರು ತನ್ನ ಕಾಮವಾಂಛೆಗೆ ಅಡ್ಡ ಬರುತ್ತಾರೋ ಅವರ ಮೇಲೆ ಕ್ರೋಧವುಂಟಾಗುತ್ತದೆ. ತನ್ನ ಆನಂದಕ್ಕೆ ಅಡ್ಡಿಯಾಗುವವರ ಅಂತ್ಯ ಮಾಡುವುದೇ ಮನುಷ್ಯ ಈ ಕ್ರೋಧದಿಂದ ಮಾಡುವ ಕೆಲಸ ಕ್ರೋಧದಿಂದ ವೈರ, ವೈಮನಸ್ಯ, ಇನ್ನು ತೀವ್ರವಾದ ಹತ್ಯೆಯಂಥವುಗಳು ಸಹಾ ಸಂಭವಿಸಿ ಬಿಡುತ್ತವೆ. ಅಂತಹ ಪರಿಣಾಮಗಳು ಪ್ರಸ್ತುತ ಜೀವನವನ್ನೇ ನರಕವನ್ನಾಗಿ ಪರಿವರ್ತಿಸಿ ಬಿಡುತ್ತವೆ. ಇನ್ನು ಜನ್ಮಾಂತ್ಯದ ಬಗ್ಗೆ ಹೇಳುವುದೇನಿದೆ? ಕೋಪ ಬರುವುದರ ಜೊತೆಗೆ ದೇಹದಲ್ಲಿ ಅನೇಕವಾದ ರೋಗಗಳುಂಟಾಗುತ್ತವೆ. ಅದಕ್ಕೇ ಮನುಷ್ಯ ತನಗೆ ಕೋಪ ಬರದೇ ನೋಡಿಕೊಳ್ಳಬೇಕು. ಇಷ್ಟಾದರೂ ಒಮ್ಮೊಮ್ಮೆ ಕೋಪ ಹೊರಗೆಡಹುವ ಸಂದರ್ಭಗಳೇರ್ಪಡುತ್ತಿರುತ್ತವೆ. ಅದು ನಾವೇ ತಂದುಕೊಂಡ ಕೋಪವೇ ಹೊರತು ತಾನಾಗೇ ಹುಟ್ಟಿದ್ದಲ್ಲ ಇದರಿಂದ ಭಯವೇನೂ ಇಲ್ಲ. ನರಕದ ಮೂರನೇ ದ್ವಾರ ಲೋಭೆ. ಲೋಭವೆಂದರೆ ಎಲ್ಲವೂ ತನಗೇ ಬೇಕೆಂಬ ಹಂಬಲ ಅದು ಬೇರಾರಿಗೂ ಹೋರಕಬಾರದೆಂಬ ಈರ್ಷೆ ಲೋಭದಿಂದ ಪ್ರೇಮ, ಮಮತೆ - ಮಮಕಾರಗಳು, ಸ್ನೇಹವು, ಸಾಂಘಿಕ ಜೀವನವು, ಬಾಂಧವ್ಯಗಳು ಎಲ್ಲವೂ ನಶಿಸಿ ಹೋಗುತ್ತವೆ. ಆದ್ದರಿಂದ ಯುವತೆ ಈ ವಿಷಯದಲ್ಲಿ ಸಮಾಧಾನದಿಂದ ಇದ್ದು ಗೀತೋಪದೇಶದ ಎಚ್ಚರಿಕೆಯನ್ನು ಜಾಗೃತೆಯಾಗಿ ಅನುಸರಿಸಬೇಕು. ಕಾಮಕ್ಕೆ, ಕ್ರೋಧಕ್ಕೆ, ಲೋಭಕ್ಕೆ ದೂರವಿದ್ದು ಪ್ರಸ್ತುತ ಬದುಕನ್ನು ನಿರಾಂತಕವಾಗಿ ಸಾಗಿಸುವುದಲ್ಲದೇ, ನರಕ ದ್ವಾರದಲ್ಲಿ ಪ್ರವೇಶಿಸುವ ಅವಶ್ಯಕತೆಯೇ ಇಲ್ಲದೇ ಹೋಗುತ್ತದೆ. ಅದರಿಂದ ಬರುವ ಜನ್ಮಗಳೆಲ್ಲಾ ಸುಖಮಯವಾಗೇ ಇರುತ್ತವೆ. ಇದೇ ಗೀತೋಪದೇಶದಿಂದ ನಮಗೆ ದೊರಕುವ ಅದ್ವಿತೀಯ ವರವು!



# ಮುಳಬಾಗಿಲಿನಿಂದ ಕನ್ನಡ ಹೊಮ್ಮಿದ ದಾಸಸಾಹಿತ್ಯ



- ಡಾ॥ ಅರಳು ಮಲ್ಲಿಗೆ ಪಾರ್ಥಸಾರಥಿ

ಕನ್ನಡಸಾಹಿತ್ಯಕ್ಕೆ ಶ್ರೀಪಾದರಾಜರ ಕೊಡುಗೆ ಅನನ್ಯ ಜನಸಾಮಾನ್ಯರ ಬಳಿಗೆ ಸಾಹಿತ್ಯ, ಸಂಗೀತದ ಹಿನ್ನೆಲೆಯಲ್ಲಿ ಹರಿದು ಬರುವಂತೆ ಶ್ರೀ ಪಾದರಾಜರು ಮಾಡಿದ ಪ್ರಯೋಗ, ಬೃಹತ್ ಸಾಧನೆಯೆನಿಸಿತು. ಅವರ ಪ್ರಯೋಗದ ಯಶಸ್ಸು ಕಂಡ ನೂರಾರು ಹರಿದಾಸರು ಭಕ್ತಿ ಸಂದೇಶವನ್ನು ಕನ್ನಡ ಭಾಷೆಯಲ್ಲಿ ಸಾಹಿತ್ಯದ ಮೂಲಕ ಸಂಗೀತ ಮಾಧ್ಯಮದಲ್ಲಿ ಜನತೆಗೆ ತಲುಪಿಸುವಲ್ಲಿ ಸಫಲರಾದರು.

ಕನ್ನಡ ಸಾಹಿತ್ಯ ಪಂಪ, ರನ್ನ, ಪೊನ್ನ, ನಾಗವರ್ಮ, ಹರಿಹರ ರಾಘವಾಂಕ,ಜನ್ನ ಮುಂತಾದವರಿಂದ ಸಮೃದ್ಧ ವಾಗಿದ್ದರೂ ಸಹ ಜನಸಾಮಾನ್ಯರಿಗೆ ಈ ಕಾವ್ಯಗಳು ಕೈಗೆಟುಕುವಂತಿರಲಿಲ್ಲ.ಧರ್ಮ ಹಾಗೂ ಸಾಹಿತ್ಯದಲ್ಲಿ ಯಾರೂ ಸಾಮಾನ್ಯ ಜನರ ಬದುಕಿಗೆ ಸ್ಪಂದಿಸಿದ್ದಿಲ್ಲ. ಭಕ್ತಿಯೂ ಸಾಹಿತ್ಯದ ದೃಷ್ಟಿಯಿಂದ ಪಂಡಿತರ ಸ್ವತ್ತಾಗಿತ್ತು ಜನತೆಗೆ ಕಾವ್ಯ, ಅರ್ಥಪೂರ್ಣ ಭಕ್ತಿ,ಸುಸಂಸ್ಕೃತ ಸಾಹಿತ್ಯ, ಗಗನ ಕುಸುಮವಾಗಿತ್ತು .

ಈ ಸಂದರ್ಭದಲ್ಲಿ ಮುಳಬಾಗಿಲಿನಲ್ಲಿ ನಡೆದ ಕ್ರಾಂತಿ ಚಿರಸ್ಮರಣೀಯ ಶ್ರೀ ಪಾದರಾಜರು ಜನರ ಆಡು ಭಾಷೆಯಾದ ಕನ್ನಡದಲ್ಲೇ ಕಾವ್ಯರಚಿಸಲು, ಭಕ್ತಿಯನ್ನು ಪ್ರೇರೇಪಿಸಲು, ಆ ಮೂಲಕ ಸುಸಂಸ್ಕೃತ ಜನಾಂಗವೊಂದನ್ನು ನಿರ್ಮಾಣ ಮಾಡಲು ನಿರ್ಧರಿಸಿದರು. ಶ್ರೀರಂಗದಿಂದ ಮುಳಬಾಗಿಲಿನವರಿಗೆ ಭಕ್ತಿರಸದ ಓತಪ್ರೋತ ಪ್ರವಾಹವನ್ನೇ ಹರಿಸಿ ಕನ್ನಡದಲ್ಲಿ ಭಕ್ತಿಯುಗದ ಪ್ರವರ್ತಕರೆನಿಸಿದರು.

ಮುಳಬಾಗಿಲು ಶ್ರೀ ಪಾದರಾಜರ ಕಾರ್ಯಕ್ಷೇತ್ರವಾದರೆ ಶ್ರೀರಂಗ ಅವರಿಗೆ ಪ್ರೇರಣೆ ನೀಡಿದ್ದ ಸ್ಥಳವಾಗಿತ್ತು. ಕಾವೇರಿರಂಗನನ್ನು ನೋಡದ ಕಣ್ಣುಗಳು ಇದ್ದರೂ ಒಂದೇ, ಇರದಿದ್ದರೂ ಒಂದೇ ಎನ್ನುವಷ್ಟು ಭಕ್ತಿ ವಿಶ್ವಾಸಗಳನ್ನು ಅವರು ಶ್ರೀರಂಗದ ರಂಗನಾಥನಲ್ಲಿ ಇರಿಸಿದ್ದವರು. ಶ್ರೀರಂಗದಲ್ಲಿಯೇ ಶ್ರೀಪಾದರಾಜರ ಸಾಕ್ಷಾತ್ ಗುರುಗಳಾದ ಸ್ವರ್ಣವರ್ಣ ತೀರ್ಥರು ನೆಲೆಸಿದ್ದು, ಪದ್ಮನಾಭತೀರ್ಥರ ಮಠದ ಪೀಠಿಗೆಯಲ್ಲಿ ಎಳನೆಯವರಾಗಿ ಉತ್ತಮ ಪೀಠಾಧಿಪತಿಗಳೆಂದು ಅವರು ಕೀರ್ತಿಪಡೆದಿದ್ದರು. ಬ್ರಹ್ಮಚರ್ಯದ ಪ್ರಬಲ ತೇಜಸ್ಸಿನಿಂದ ಅವರ ಇಡೀ ದೇಹ ಹೊಂಬಣ್ಣದಿಂದ ಪ್ರತಿ ಫಲಿಸುತ್ತಿದ್ದುರಿಂದ ಅವರಿಗೆ ಸ್ವರ್ಣವರ್ಣ ತೀರ್ಥರೆಂದೇ ಅನ್ವರ್ಥ ನಾಮವಿತ್ತು. ಶ್ರೀರಂಗದ ಜೀಯರ್‌ಗಳಿಗೆ ಅತ್ಯಂತ ಆತ್ಮೀಯರಾಗಿದ್ದ ಅವರು ಅಲ್ಲಿಯ ಸುಪ್ರಸಿದ್ಧ ವಿದ್ವಾಂಸರಾಗಿದ್ದ ಪಿಳ್ಳೈಲೋಕಾಚಾರ್ಯರ ಮಗ ತಿರುಮಲೈ ಆಳ್ವಾನ್ ಅವರಿಗೂ ಪರಮ ವಿಶ್ವಾಸಿಗಳಾಗಿದ್ದರು. ಆಗ ದ್ರಾವಿಡ ಪ್ರಬಂಧಗಳು ತಮಿಳುನಾಡಿನ ಜನಸಾಮಾನ್ಯರ ಹೃದಯಕ್ಕೆ ನೇರ ಮುಟ್ಟಿ ವ್ಯಾಪಕವಾಗಿ ಭಕ್ತಿಪಂಥ ಉಚ್ಛ್ರಾಯವಾಗುತ್ತಿದ್ದ ಕಾಲ. ಭಕ್ತಿಯನ್ನು ಉದ್ದೀಪಿಸುವ,ಜನರ ಬದುಕನ್ನು ಸನ್ಮಾರ್ಗದಲ್ಲಿ

ಅರಳಿಸುವ ಸಾಧನವಾಗಿ ಸಾಹಿತ್ಯ ಕೆಲಸ ಮಾಡುತ್ತಿದ್ದುದನ್ನು ಶ್ರೀಪಾದರಾಜರು ತುಂಬು ಸಂಭ್ರಮದಿಂದ ಕಂಡು ಅದನ್ನು ಪ್ರೋತ್ಸಾಹಿಸಿದರು.

ಮುಂಚೆ ತಮಿಳು ಪ್ರಬಂಧಗಳನ್ನು ಸಾಹಿತ್ಯಬದ್ಧವಾದ, ಗಂಭೀರ ಶೈಲಿಯ, ವೈದಿಕ ಪಾಠಕ್ರಮದಲ್ಲಿ ಗರ್ಭಗುಡಿಯೊಳಗೆ ದೇವರ ಮುಂದೆ ಹೇಳಲಾಗುತ್ತಿತ್ತು. ಇದು ಇಯಲ್ ಸೇವೆಯೆಂದೇ ಪ್ರಖ್ಯಾತವಾಗಿತ್ತು.



ಆದರೆ ಶ್ರೀ ಪಾದರಾಜರ ಕಾಲದಲ್ಲೇ ಶ್ರೀರಂಗದಲ್ಲಿ ಉತ್ಸವಮೂರ್ತಿಯ ಮೆರವಣಿಗೆಯಲ್ಲಿ ತಮಿಳು ಪ್ರಬಂಧಗಳನ್ನು ರಾಗತಾಳಗಳಲ್ಲಿ ಸಂಗೀತ ವಾದ್ಯಗಳೊಡನೆ ಹಾಡುತ್ತಾ, ಕುಣಿಯುತ್ತಾ, ಸೇವೆಸಲ್ಲಿಸುವ ಇಶೈ ಕಾರ್ಯಕ್ರಮ ಪ್ರಾರಂಭವಾಯಿತು. ಶ್ರೀಪಾದರಾಜರ ಲಕ್ಷ್ಮೀನೃಸಿಂಹ್ ಪ್ರಾದುರ್ಭಾವ ದಂಡಕವೆನ್ನುವ ರಚನೆ ಪಾಠ ಪ್ರಧಾನವಾದ ಇಯಲ್ ಪ್ರಕಾರಕ್ಕೆ ಹೊಂದಿಕೊಳ್ಳುವುದನ್ನು ಗಮನಿಸಬೇಕು. ಅವರ ಉಳಿದ ಪದಗಳು, ಸುಳಾದಿಗಳು ಗೇಯರೂಪವಾದ ಇಶೈ ಪ್ರಕಾರಕ್ಕೆ ಸೇರುವುವು. ರಂಗವಿಠಲ ಎಂಬ ಅಂಕಿತವೇ ಶ್ರೀಪಾದರಾಜರ ನಾದ ಪ್ರಧಾನಭಕ್ತಿಯನ್ನೂ, ಶ್ರೀರಂಗದ ರಂಗನಾಥನಲ್ಲಿ ಅವರಿಗಿದ್ದ ದೀಕ್ಷೆಯನ್ನೂ, ಶ್ರೀರಂಗ ಅವರ ಮೇಲೆ ಬೀರಿದ್ದ ಪ್ರಭಾವವನ್ನು ಸ್ಪಷ್ಟವಾಗಿ ಸೂಚಿಸುತ್ತದೆ.

ಶ್ರೀಪಾದರಾಜರು ಚಂದ್ರಗಿರಿಯಲ್ಲಿ ಸಾಳ್ವ ನರಸಿಂಹನ ರಾಜಗುರುಗಳಾದಾಗ ತಿರುಪತಿ ಬೆಟ್ಟದ ಮೇಲಿರುತ್ತಿದ್ದ ವಿಖ್ಯಾತ ಸಂಕೀರ್ತನಕಾರರಾದ ತಾಳ್ಳಪಾಕಂ ಅಣ್ಣಮಾಚಾರ್ಯರನ್ನು ಆಗಾಗ್ಗೆ ಭೇಟಿಯಾಗುತ್ತಿದ್ದರು. ಶ್ರೀಪಾದರಾಜರ ರಚನೆಗಳಿಂದ ಅಣ್ಣಮಾಚಾರ್ಯರು ಸ್ಫೂರ್ತಿ ಪಡೆದರೆಂಬ ಉಲ್ಲೇಖ ತೆಲುಗು ಸಾಹಿತ್ಯ ಚರಿತ್ರೆಯಲ್ಲೇ ಬರುತ್ತದೆ. ಅಣ್ಣಮಾಚಾರ್ಯರು ಶ್ರೀಪಾದರಾಜರನ್ನು ಅನುಕರಿಸಿದ ಸೂಚನೆಗಳಿವೆ. ಶ್ರೀಪಾದ ರಾಜರು ಅಣ್ಣಮಾಚಾರ್ಯರಿಗಿಂತ ವಯಸ್ಸಿನಲ್ಲಿ ಸ್ವಲ್ಪ ದೊಡ್ಡವರಾದವರು.

ಯುಗಯುಗಗಳಿಂದ ಗಾಢಗಾಢವಾಗಿದ್ದ ಸಂಸ್ಕೃತದ ಮಹಾಮಂತ್ರಗಳನ್ನು,ಕಾವ್ಯಗಳನ್ನು ವೇದೋ ಪನಿಷತ್ತುಗಳನ್ನು, ಸಾಮಾನ್ಯ ಜನರಿಗೂ ಅರ್ಥವಾಗುವ ತಿಳಿಗನ್ನಡದಲ್ಲಿ ಶ್ರೀಪಾದರಾಜರು ಹೇಳಿದರು.

ಬಂದು ಬಂದು ನಾನಾಭವದಲ್ಲಿ ಬೆಂದೆನಯ್ಯಾ ನಂದನಂದನ ಇಂದಿರಾ ನಂದ ಕುಂದದ ಶುದ್ಧಧವಳದಂತೆ ಮಂದಹಾಸ ತೋರಿ ನಂದನ ಕಂದ ಇಂದೆನ್ನ ಸಲಹಯ್ಯ ರಂಗವಿಠಲ ಎಂದು ಭಗವಂತನನ್ನು ಪರಿಪರಿಯಿಂದ ಪ್ರಾರ್ಥಿಸಿದರು. ಐದು ಶತಮಾನಗಳ ಹಿಂದೆಯೇ,ವೈದಿಕವಿದ್ವ ನ್ಮಣಿಗಳು ಕನ್ನಡ ವೆಂದರೆ ಮೈಲಿಗೆಯೆಂದು ಮೂಗು ಮುರಿಯುತ್ತಿದ್ದ ಕಾಲದಲ್ಲಿ, ಪೀಠಾಧಿಪತಿಗಳಾದವರು ಸಂಸ್ಕೃತ ಬಿಟ್ಟು ಬೇರೆ ಭಾಷೆಯನ್ನು ಉಪಯೋಗಿಸುವುದು ಊಹಿಸಲೂ ಸಾಧ್ಯವಿಲ್ಲದಿದ್ದ ಪರಿಸ್ಥಿತಿಯಲ್ಲಿ, ಶ್ರೀಪಾದರಾಜರು ಕನ್ನಡಕ್ಕೆ ಅಗ್ರಪಟ್ಟಕಟ್ಟಿ, ಸಿದ್ಧಾಂತವನ್ನು, ಸಾಹಿತ್ಯವನ್ನು, ಬದುಕಿನ, ಮೌಲ್ಯವನ್ನು ಕನ್ನಡದಲ್ಲೇ ಪ್ರಕಟಿಸಿದರು.ತಮ್ಮ ಗಂಡು ಧೈರ್ಯದಿಂದ ಕನ್ನಡತನದ ಮಹತ್ವವನ್ನು ನಾಡು ನಾಡೇ ಮೊಳಗಿ ರೋಮಾಂಚನಗೊಳ್ಳುವಂತೆ ಪದಪದ್ಯ ಸುಳಾದಿ ಉಗಾ ಭೋಗಗಳ ಮೂಲಕ ಸಾರಿ ಹರಿದಾಸ ಸಾಹಿತ್ಯದ ಹರಿ ಕಾರರಾದರು. ಗೋಪಿಗೀತ, ಭ್ರಮರಗೀತ, ವೇಣುಗೀತೆಗಳನ್ನು ಕನ್ನಡದ ಹೃದ್ಯಪದ್ಯಗಳಾಗಿ ರಚಿಸಿ, ಭಾಗವತ ದಶಮಸ್ಕಂಧದ ರಸಭಟ್ಟಿಯನ್ನು ಕನ್ನಡಕ್ಕಿಳಿಸಿ ದಾಸಸಾಹಿತ್ಯವನ್ನು ರಸಘಟ್ಟಿ ಮಾಡಿದರು.ಅವರ ಮಧ್ವನಾಮ, ಪದಪುಂಜಗಳು ಚಿಮ್ಮುವ ಅವತಾರತ್ರಯ ನಿರೂಪಣೆಯ ಶಬ್ದ ಕುಂಜ ಕನ್ನಡ ಕಾವ್ಯ ಪ್ರಪಂಚದಲ್ಲಿ ತಮ್ಮ ಕೀರ್ತನ ಕೌಶಲ್ಯದಿಂದ ಹೊಸಹೊಸ ಪ್ರಯೋಗ ಮಾಡಿ ಕನ್ನಡ ಸಾಹಿತ್ಯದ ಬಾನಿನಲ್ಲಿ ದಾಸ ಸಾಹಿತ್ಯದ ಕಾಮನ ಬಿಲ್ಲನ್ನು ಮೂಡಿಸಿದ ವಿಭೂತಿಪುರುಷರು ಶ್ರೀಪಾದರಾಜರು.

ಶ್ರೀ ಪಾದರಾಜರು ಸಂಭ್ರಮ ಸಡಗರಗಳ ಸಮಾರಂಭ ಗಳಲ್ಲಿ,ಪೂಜೆ ಉತ್ಸವಗಳ ವೈಭವ ವಿಜೃಂಭಣೆಗಳಲ್ಲಿ, ಕನ್ನಡದಲ್ಲಿ ಕೀರ್ತನೆಯನ್ನು ಹಾಡುವ, ನರ್ತನಮಾಡುವ ಗಾಯಕರ, ಭಾಗವತೋತ್ತಮರ ತಂಡವೊಂದನ್ನೇ ಸಂಘಟಿಸಿ ಹರಿದಾಸ ಸಂಸ್ಕೃತಿಯ ನಿರ್ಮಾಣ ಮಾಡಿದರು. ಪ್ರತಿದಿನ ಗೋಪೀನಾಥದೇವರ ಪೂಜಾ ಕಾಲದಲ್ಲಿ ಪರಂಪರಾಗತ ಮಂತ್ರಸ್ತೋತ್ರಗಳೊಡನೆಯೇ ಕನ್ನಡ ದೇವರನಾಮಗಳನ್ನು, ಭಜನೆಗಳನ್ನು ಹಾಡುವ ನೃತ್ಯಮಾಡುವ ಹೊಸ ಸಂಪ್ರದಾಯ ವನ್ನು ಉದ್ಘಾಟಿಸಿದರು.

ಸೂಕ್ಷ್ಮಭಾವನೆಗಳನ್ನು ಸಂವೇದನೆಗಳನ್ನು ಅಭಿ ವ್ಯಕ್ತಿಸಲು ಸಂಗೀತವೇ ಸಮರ್ಥ ಮಾಧ್ಯಮ ಎಂಬ ಸಂಗತಿ ಯನ್ನು ಅರಿತಿದ್ದ ಶ್ರೀಪಾದರಾಜರು, ಪಲ್ಲವಿ, ಅನುಪಲ್ಲವಿಗಳನ್ನು ಚರಣವ್ಯವಸ್ಥೆಯ ಕೀರ್ತನೆಗಳನ್ನು ಮೊಟ್ಟ ಮೊದಲ ಬಾರಿಗೆ ಕನ್ನಡದಲ್ಲಿ ರಚಿಸಿ ಪ್ರಚಲಿತಗೊಳಿಸಿದರು. ಸ್ವರಗಳು ಶೃತಿಶುದ್ಧವಾಗಿದ್ದು, ಅದು ಕಿವಿಗೆ ಹಿತವಾಗಿದ್ದು,ಲಯದ ಸಾಮರಸ್ಯದಿಂದ ಮೂಡಿ ಬಂದಿರುವ ಮೊಟ್ಟ ಮೊದಲ ಕನ್ನಡ ಸಾಹಿತ್ಯ ಸಂಗೀತ ಕೃತಿ ಶ್ರೀ ಪಾದರಾಜರದೇ ಆಗಿದೆ. ಸಂಗೀತ ಕಲೆಯ ಪ್ರಾಣ ಸ್ವರೂಪವಾಗಿದ್ದು, ಸಂಗೀತದ ಸಪ್ತ ಜ್ಯೋತಿಗಳೆನಿಸಿದ ಶೃತಿಶುದ್ಧತೆ, ರಸಪ್ರಾಧಾನ್ಯತೆ, ಲಯಶುದ್ಧತೆ, ಸಂಪ್ರದಾಯ, ಗಮಕಾಲಂಕಾರ ಶೋಭೆ, ಸಾಹಿತ್ಯಶುದ್ಧತೆ ಹಾಗೂ ಆನಂದ ಪೂರ್ಣತೆಗಳನ್ನು ಅನುಪಮವಾಗಿ ತಮ್ಮ ಕೀರ್ತನೆಗಳಲ್ಲಿ ಮೂಡಿಸಿ, ಕನ್ನಡ ಸಂಗೀತ ಸಾಹಿತ್ಯದ ಎತ್ತರ ಬಿತ್ತರಗಳನ್ನು ಶ್ರೀಪಾದರಾಜರು ವ್ಯಾಪಕವಾಗಿ ಹೆಚ್ಚಿಸಿದರು.

ಸಂಗೀತದ ಹಿನ್ನೆಲೆಯಲ್ಲಿ ಸುಳಾದಿ ಎನ್ನುವ ಹೊಸ ಪ್ರಕಾರದ ಆದ್ಯಪ್ರವರ್ತಕರು ಶ್ರೀಪಾದರಾಜರು, ಸಪ್ತ ತಾಳ ಗಳಲ್ಲಿ ಕಾಲವಿಭಾಗಕ್ಕನುಸಾರವಾಗಿ,ಲಯಬದ್ಧವಾಗಿ ಹಾಡುತ್ತಾ ಸಾಗುವ 'ಸುಳಾದಿ' ಮುಂದೆ ವಿಜಯದಾಸರಂತಹ ಶ್ರೇಷ್ಠ ಹರಿದಾಸರಿಗೂ ದಿವ್ಯರಾಜಮಾರ್ಗವಾಯಿತು. ಶ್ರೀಪಾದ ರಾಜರ ಕೀರ್ತನೆಗಳು ಮುನಿಮಧ್ವಹೃದಯವನ್ನು ತೆರೆದಿಟ್ಟ ಕಲಾಕೃತಿಗಳು 'ಜಯಜಯ ಜಗತ್ರಾಣ ಜಗದೊಳಗೆ ಸುತ್ರಾಣ ಅಖಿಲ ಗುಣ ಸದ್ಧಾಮ ಮಧ್ವನಾಮ' ಎನ್ನುವ ಅವರ ಕೃತಿಯಲ್ಲಿ ಮಧ್ವನಾಮದ ಪ್ರಚಂಡ ತೆರೆಗಳು ಸಜ್ಜನರ ಹೃದಯದ ದಡಗಳಿಗೆ ಬಡಿಯುವಂತೆ ರಚಿತವಾಗಿದೆ. 'ನಾಲಗೆಗೆ ನಾರಾ ಯಣ ನಾಮವೇ ಭೂಷಣ. ಕಾಲಿಗೆ ಹರಿಯಾತ್ರೆ, ಮನೆಗೆ ತುಲಸೀ ಬೃಂದಾವನ, ಕಿವಿಗೆ ಹರಿಕಥೆ, ಯೋಗಿಗಳಿಗೆ ಜ್ಞಾನ ಸತಿಗೆ ಗೌರವ, ಕಣ್ಣುಗಳಿಗೆ ಸದಾ ರಂಗನನ್ನು ನೋಡುವುದೇ ಭೂಷಣ ಶಿರಕ್ಕೆ ಭಗವಂತನಿಗೆ ಬಾಗಿ ನಮಿಸುವುದೇ ಭೂಷಣ. ಕೊರಳಿಗೆ ತುಳಸೀಮಣಿಯೇ ಭೂಷಣ, ರಂಗವಿಠಲ ನಿನ್ನ ನಾಮ ಅತಿ ಭೂಷಣವೆನ್ನುವ ಶ್ರೀಪಾದರಾಜರು ಮಾನವರಿಗೆ ಮಾನವೇ ಭೂಷಣ, ಎಂಬ ಲೋಕ ನೀತಿಯನ್ನು ಹೇಳಿ ಸಾರ್ವತ್ರಿಕ ಎಚ್ಚರಿಕೆ ಕೊಟ್ಟಿದ್ದಾರೆ. ಬಡತನದ ಕಡುಕಷ್ಟ ಗಳಲ್ಲಿರುವ ಆರ್ತರನ್ನು, ದೀನರನ್ನು ಅನಾಥರನ್ನು ಕಂಡೊ ಡನೆಯೇ ಕರುಣೆ ಉಕ್ಕೇರುವ ಶ್ರೀ ಪಾದರಾಜರು 'ಯಾಕೆ ಪುಟ್ಟಿಸಿದೆ ನೀ ಸಾಕಲಾರದೆ ಜಗದೇಕ ಕಾರಣ ಪುರುಷ ಶ್ರೀ ಕೃಷ್ಣ ' ಎಂದು ಪ್ರಶ್ನಿಸುತ್ತಾರೆ. 'ಒಡಲಿಗನ್ನವ ಕಾಣೆ, ಉಡಲು ಅರಿವೆಯಕಾಣೆ ಗಡಗಡನೆ ನಡುಗುತಿಹೆನೋ ಕೃಷ್ಣ, ಕುಡುತೆ ಕೊಡುವವರಿಲ್ಲ, ನುಡಿಯ ಕೇಳುವರಿಲ್ಲ, ಬಡತನವು ಕಂಗೆಡಿ ಸಿತೋ ಕೃಷ್ಣ' ಎಂಬ ಅವರ ಕೀರ್ತನೆ ಐದು ಶತಮಾನಗಳ

ಎಲ್ಲ ದಲಿತವರ್ಗದವರ, ಪಾಪಭೀತಿಯಿಂದ ನೊಂದವರ ಅನಂತ ದುಃಖಗಳ ಹಾಡು, 'ಪಾಲೊಳಗದ್ದು ನೀರೊಳಗದ್ದು ಹರಿ ನಾ ನಿನ್ನ ನಂಬಿದೆನೋ' ಎನ್ನುವ ಅನನ್ಯ ಭಕ್ತಿಯ ಉನ್ನತ ಶಿಖರಗಳಲ್ಲಿ ಮನುಷ್ಯ ಸತತ ನಡೆದಾಡಬೇಕೆಂಬ ಚಿಂತನೆ ಅವರದು. 'ಸತಿ ಅನುಕೂಲವಿರಬೇಕು, ಸುತನಲ್ಲಿ ಗುಣಬೇಕು, ಮತಿವಂತನಾಗಬೇಕು. ಮತ ಒಂದಾಗಿರಬೇಕು ಎಂದು ಸತ್ಸಂಗದ ಅಗತ್ಯವನ್ನು, ವಿವೇಕ ಕುಟುಂಬ ನೆಮ್ಮದಿಗಳ ಅಗತ್ಯವನ್ನು ಮನಮುಟ್ಟುವಂತೆ ಅವರು ನಿರೂಪಿಸಿದ್ದಾರೆ.'ಉಂಟಾದ ಕಾಲಕ್ಕೆ ನೆಂಟರು ಇಷ್ಟರು ಬಂಟರಾಗಿ ಬಾಗಿಲಕಾಯ್ವರು, ಉಂಟಾದತನ ತಪ್ಪಿ ಬಡತನ ಬಂದರೆ ಒಂಟೆಯಂತೆ ಗೋಣಮೇಲೆತ್ತುವರು' ಎಂದು ಹೇಳಿ ಅಜ್ಞಾನದ ಮಂಪರಿನಲ್ಲಿ, ವೈಭವದ ಅಮಲಿನಲ್ಲಿ ಬೀಗುತ್ತಿರು ವವರಿಗೆ ಎಚ್ಚರಿಕೆಯ ಮಾತನ್ನು ಹೇಳುತ್ತಾರೆ. ಮುಕ್ತಿಯನ್ನು ಬಯಸುವ ಸುಜ್ಜನರಿಗೆ 'ಶಕ್ತಿಬೇಕು ಭಕ್ತಿಬೇಕು. ವಿರಕ್ತಿ ಬೇಕು ಸರ್ವಶಕ್ತಿ ಬೇಕು ಮುಂದೆ ಮುಕ್ತಿಯ ಬಯಸುವವರಿಗೆ ಎಂದು ಹೇಳಿ ಸಂಯಮ, ಸಹನೆ, ವೈರಾಗ್ಯಗಳ ಹಿರಿಮೆಗರಿಮೆಗಳನ್ನು ಸಾರುತ್ತಾರೆ. ಇಡೀ ತಮ್ಮ ಬದುಕು, ವ್ಯಕ್ತಿತ್ವಗಳನ್ನು ಭಗವಂತನ ಪಾದಾರವಿಂದರಲ್ಲಿ ಸರ್ವಸಮರ್ಪಣ ಮಾಡಿಕೊಂಡು ಬಿಟ್ಟ ಶ್ರೀಪಾದರಾಜರು 'ಸರಕು ಒಪ್ಪಿಸಿದ ಮೇಲೆ ಸುಂಕವುಂಟೇ ದೇವ' ಎಂದು ಹೇಳಿ ಭಗವದ್ಭಕ್ತನಿಗೆ ದುಃಖ ಭಯದ ಸೋಂಕಿಲ್ಲ ಎನ್ನುವುದನ್ನು ಸೂಚ್ಯವಾಗಿ ನಿರೂಪಿಸಿದ್ದಾರೆ. 'ಬರುವುದು ಬುದ್ಧಿಯು ಬಲವು ಕೀರ್ತಿಯು ನಿರುತದಿ ಧೈರ್ಯವು ನಿರ್ಭಯತ್ವವು ಆರೋಗಾನಂದ ಅಜಾಡ್ಯ ವಾಕ್ಪಟುತ್ವವು ಹರೇ ರಂಗ ವಿಠಲ ಎನಲು ಎಂದು ಹೇಳಿ ವಿಠಲ ನಾಮಸ್ಮರಣೆ ಸರ್ವವ್ಯಾಧಿ ನಿವಾರಕವೆಂಬುದನ್ನು ನಿರೂಪಿಸುತ್ತಾರೆ.

'ಪೋಪು ಹೋಗೋಣ ಬಾರೋ ರಂಗ ಪೋಪು ಹೋಗೋಣ ಬಾ ಎನ್ನುವ ಅತ್ಯಂತ ಜನಪ್ರಿಯ ಕೃತಿ ಶ್ರೀ ಪಾದರಾಜರ ವಾತ್ಸಲ್ಯ ಭಾವಕ್ಕೆ ಅಪೂರ್ವ ನಿದರ್ಶನ. 'ದೃಷ್ಟಿ ತಾಕಿತೋ, ಬೀದಿ ಮೆಟ್ಟಬ್ಯಾಡವೋ ಸೃಷ್ಟಿಯ ನಾರಿಯರೆಲ್ಲಾ ಕಣ್ಣಿಟ್ಟು ಹೀರುವರೋ ನಿನ್ನ' ಎಂದು ಕಾತುರದಿಂದ ಮಗುವ ನ್ನೆತ್ತಿಕೊಳ್ಳುವ ಯಶೋದೆ, 'ಇಕ್ಕೋ ನೋಡೆ ರಂಗನಾಥನ ಪುಟ್ಟ ಪಾದವ ಸಿಕ್ಕಿತೇ ಶ್ರೀಲಕ್ಷ್ಮೀಪತಿಯ ದಿವ್ಯ ಪಾದವ ಎನ್ನುವ ಗೋಪಿಯರು, 'ಏಕೆ ದೂರುವಿರೇ ರಂಗಯ್ಯನ ಏಕೆ ದೂರುವಿರೇ ಎನ್ನುವ ತಾಯಿ, 'ಗೊಲ್ಲತಿಯರೆಲ್ಲ ಕೂಡಿ ಎನ್ನ ಮೇಲೆ ಇಲ್ಲದ ಸುದ್ಧಿ ಪುಟ್ಟಿಸಿ ಕಳ್ಳನೆಂದು ದೂರುತ್ತಾರೆ ಗೋಪಿ ಎನ್ನ ಕೊಲ್ಲಬೇಕೆಂದು ಬಗೆಯ ಎಂದು ಮುಗ್ಧನಾಗಿ ನಿಲ್ಲುವ ಮುದ್ದುಕೃಷ್ಣ 'ಬಾರೋ ನಮ್ಮ ಮನೆಗೆ, ಗೋಪಾಲಕೃಷ್ಣ ಬಾರೋ ನಮ್ಮ ಮನೆಗೆ ಎಂದು ಕರೆಯುವ ಭಾಗವತರು, ಈ ಪಾತ್ರಗಳೆಲ್ಲಾ ಶ್ರೀ ಪಾದರಾಜರ ವಾತ್ಸಲ್ಯದ ನೆರೆಯಾಗಿ, ಬಾಗವತದ ಕೆನೆಯಾಗಿ ಮೂಡಿ ಬಂದಿವೆ. 'ರಂಗ ಕೊಳಲ ನೂದುತ ಬಂದ ಯಶೋದೆ ಯಕಂದ' ಎನ್ನುವ ವೇಣುಗೀತ ಕನ್ನಡದ ಅಪೂರ್ವ ಕಥನ ಕಲೆಯಾಗಿ, ರಮ್ಯ ಧ್ವನಿಯಾಗಿ ಮೂಡಿ ಬಂದಿದೆ. ಶ್ರೀಪಾದರಾಜರ ವಿರಹದ ಚಿತ್ರಣ ಅನುಪಮ. ಗೋಪಿಯೊಬ್ಬಳು ಕೃಷ್ಣನ ವಿರಹತಾಪದಿಂದ ಬೆಂದು 'ಒಲ್ಲೆನವ್ವಾಲಕುಮಿಯ ನಲ್ಲ ಬಾರದಿದ್ದರೆ ಈ ತನು ಹೊರೆಯ ನೊಲ್ಲೆನವ್ವಾ' ಎಂದು ಹೇಳುತ್ತಾ ಹಾರ ಕೊರಳಿಗೆ ಭಾರ, ಹೂವಿನ ಭಾರ ಸೈರಿಸಲಾರೆನೇ, ಮಾರನಯ್ಯನು ಬಾರದಿದ್ದರೆ ಮಾರನಂಬಿಗೆ ಗುರಿಯ ಮಾಡಿ ಎಂದು ವಿಹ್ವಲಗೊಳ್ಳುವ ಚಿತ್ರ ಅವಳ ವಿರಹದ ತೀವ್ರತೆಗೆ ಬೆಳಕಾಗುತ್ತದೆ.

ನನ್ನ ಹೃದಯದಲ್ಲಿ ವಾಸವಾಗಿ ಸುಮ್ಮನಿದ್ದರೇ ಸರಿ ಇಲ್ಲದಿದ್ದಲ್ಲಿ ನಿನ್ನ ಮರ್ಮ ಕರ್ಮಗಳನ್ನು ದೇಶದೇಶದಲ್ಲಿ ಪ್ರಕಟಿಸಬಲ್ಲೆ ಎಂದು ಶ್ರೀಕೃಷ್ಣನನ್ನು ಎಚ್ಚರಿಸಿ 'ತರಳತನದಲ್ಲಿ ದುರುಳನಾಗಿ ಬಂದು ಒರಳಿಗೆ ಕಟ್ಟಿಕೊಂಡವನು, ತರುವ ಕಾಯಲಿ ಪೋಗಿ ಗೊಲ್ಲರಕೂಡ ನೀ ಉಂಡುದನು, ನೆರೆಮನೆ ಹೊರಮನೆಗಳ ಪೊಕ್ಕು ಬೆಣ್ಣೆಯ ಅರಿಯದಂತೆ ಕದ್ದು ಮೆದ್ದುದನು, ಕೆರಳಿಸಿದೆಯಾದರೆ ಒದರುವೆ ಎಲೋ ನರಹರಿ ಎನ್ನ ಬಾಯಿಗೆ ಬಂದುದನು ಎಂದು ದೇವರನ್ನೇ ಗದರಿಕೊಳ್ಳುವ ಧೈರ್ಯ ತೋರುತ್ತಾರೆ. 'ತುಂಗಗುಣ ನಿಲಯ ಅಂಗ ಜನ ಪಿತನೆಂದು ರಂಗನಿಗೆ ಮನಸೋತು ಮರುಳಾದೆವೋ, ಹಿಂಗಿ ಬದುಕುವುದೆಂತೋ ಭೃಂಗ ಮಥುರೆಗೆ ಹೋಗಿ ರಂಗವಿಠಲನ ತಂದು ಎಮ್ಮನುಳುಹುವುದೋ' ಎಂದು ಗೋಪಿಯರ ಮನೋವೇದನೆಯನ್ನು ಹೇಳುತ್ತಾ 'ಪತಿ ಸುತರ ಭವಬಂಧನಗಳೆಲ್ಲ ಈಡ್ಯಾಡಿ ಗತಿ ನಮಗೆ ಅವನೆಂದು ಮನಸೋತೆವೋ, ಕೃತಕವರಿಯದೆ ನಮ್ಮ ವನದೊಳು ನಿಲ್ಲಿಸಿ ಪೋದ ಪತಿಯೊಡನೆ ಸಂಧಾನವೆಂತೋ ಎಲೋ ಮಧುಪಾ' ಎಂದು ಅವರ ಅಹಂಕಾರ ಕ್ಷಯವಾದ ಅಹವಾಲನ್ನು ಹೃದಯ ತುಂಬಿ ಹೇಳಿಕೊಂಡಿದ್ದಾರೆ.

ಶ್ರೀಪಾದರಾಜರು ಸರ್ವಸಾರಭೋಕ್ತನಾದ ಶ್ರೀಹರಿಯ ಅನುಗ್ರಹ ವಿಶೇಷದಿಂದಾಗಿ ಸುಖಪ್ರಾರಬ್ಧ ಪಡೆದಿದ್ದು ಅದರಂತೆ ಕ್ಲೇಶಾನಂದಗಳನ್ನು ಈಶಾಧೀನಗೈದು ಅದರಂತೆ ಪ್ರವರ್ತಿಸುವ ಧೃಡಭಕ್ತಿಯ ಧೀಮಂತ ಭಕ್ತಗ್ರಣಿಗಳು.

‘ಇಟ್ಟಾಂಗೆ ಇರುವೆನೋ ಹರಿಯೇ ಎನ್ನ ದೊರೆಯೇ ಎಂದು ಭಗವಂತನಿಗೆ ಹೇಳುತ್ತಾ’ ಭಗವಂತನ ಕರುಣವಿದ್ದರೆ ಮೃಷ್ಟಾನ್ನ ಭೋಜನ, ಹೊಳೆವ ಪೀತಾಂಬರ,ಸೊಂಪಿ ನಂಚಿನಶಾಲು, ಚಂದ್ರಶಾಲೆಯ ಚಂದ್ರಮಂಚ, ವರಛತ್ರ ಚಾಮರಗಳು ಸಹಜ ವಾಗಿಯೇ ಲಭ್ಯವಾಗುತ್ತವೆ. ಭಗವಂತನ ಕರುಣೆ ಒಮ್ಮೆ ತಪ್ಪಿ ತೆಂದರೆ, ‘ಅನ್ನ ಕಾಣದೆ ಬಾಯ್ಬಿಡಿಸುವೀ, ಕಡೆಗೆ ಕೌಪೀನವೂ ದೊರೆಯದೋ,ಛತ್ರದಲ್ಲಿ ನೆಲದ ಮೇಲೆ ತೋಳನ್ನೇ ತಲೆ ದಿಂಬಾಗಿಸಿ ಮಲಗ ಬೇಕೋ’ ಎಂದು ಹರಿ ಕೃಪೆ ಮರೆಯಾದರೆ ಆಗುವ ಕಡುಕಷ್ಟಗಳನ್ನು ನೆನೆಸುತ್ತಾರೆ.‘ಗಂಗಾಜನಕ ಪಾಂಡು ರಂಗ ನಿನ್ನಯ ಭಕ್ತರ ಸಂಗವಿರಲಿ ದುಷ್ಟಸಂಗ ಬ್ಯಾಡ, ಅಂಗನೇಯರ ಕೂಡಿ ಆನಂಗಬಾಣಕೆ ಸಿಲುಕಿ ಭಂಗವ ಪಡಲಾರೆ ಶ್ರೀರಂಗವಿಠಲ ಹರಿಯೇ ಎಂದು ಅನನ್ಯರಾಗಿ ಪ್ರಾರ್ಥಿಸುತ್ತಾರೆ.ಗೋಪಿಯರ ವಿರಹಗೀತ ಕನ್ನಡ ಕಾವ್ಯದ ಸುಂದರ ಸಾಲುಗಳಾಗಿ ಶ್ರೀಪಾದರಾಜರ ಕೃತಿಗಳಲ್ಲಿ ಒಡ ಮೂಡಿ ಬಂದಿದೆ. ಕಾವೇರಿ ರಂಗನನ್ನು ನೋಡಿದ ಜನ್ಮ ಇದ್ರೇನು ಇಲ್ಲದಿದ್ದರೇನು ಎನ್ನುವ ಧಾಟಿಯಲ್ಲಿ ಶ್ರೀಪಾದರಾಜರು ಕಂಗಳಿದ್ದ್ಯಾತಕೋ ಕಾವೇರಿ ರಂಗನ ನೋಡದ ಎನ್ನುವ ಜನ ಪ್ರಿಯ ಕೀರ್ತನೆ ರಚಿಸಿದ್ದಾರೆ. ಶ್ರೀರಂಗನ ಚಂದ್ರಪುಷ್ಕರಿಣಿಯಲ್ಲಿ ಸ್ನಾನ ಮಾಡಿ, ವೈಕುಂಠದ ಹೆಬ್ಬಾಗಿಲು ದಾಟಿ ರಂಗನಾಥನನ್ನು ಕಾಣದವನೇ ನಿರ್ಭಾಗ್ಯ, ಕಂಡವನೇ ಧನ್ಯ ಎಂಬ ಅವರ ಈ ಭಾವ ಅನನ್ಯ ‘ಸುಖ ದುಃಖೇ ಸಮೇ ಕೃತ್ವಾ’ ಹಾಗೂ ಸ್ಥಿತ ಪ್ರಜ್ಞನಿಗಿರಬೇಕಾದ ಅಗತ್ಯಗಳನ್ನು ಅದರ ನಿಜಸ್ವರೂಪದ ಅರ್ಥಗಳನ್ನು ಶ್ರೀಪಾದರಾಜರು ‘ಪಾಲೊಳಗದ್ದು ನೀರೊಳಗದ್ದು ಹರಿ ನಾ ನಿನ್ನ ನಂಬಿದೆನೋ’ ಎಂದು ಹೇಳಿ ನನ್ನದೇನೂ ಇಲ್ಲ, ಜಲಜನಾಭ ನೀನಿಟ್ಟ ತೆರದಲ್ಲಿ ನಾನು ಇರುವೆನಯ್ಯಾ ಎನ್ನುತ್ತಾ ಭಗವಂತನ ಸರ್ವೋತ್ತಮತ್ತವನ್ನು ಪ್ರಕಟಗೊಳಿಸಿ ದ್ದಾರೆ. ಶ್ರೀಪಾದರಾಜರು ಮಧ್ವನಾಮದ ಮೂಲಕ ಮಾಧ್ವ ಸಮಾಜಕ್ಕೆ ಪ್ರತಿದಿನವೂ ದ್ವೈತತತ್ವ ಪ್ರಣಾಳಿಕೆಯಾಗುಳಿಯಬಲ್ಲ ತತ್ವ ಚಿಂತಾಮಣಿಯನ್ನಿತ್ತು ಕೃತಕತ್ಯರಾಗಿದ್ದಾರೆ. ಮಧ್ವಮತದ ಮುಖ್ಯ ತತ್ವವಾದ ಹರಿಸರ್ವೋತ್ತಮತ್ವವನ್ನು ಶ್ರೀಪಾದರಾಜರು ಪ್ರಬಲವಾಗಿ ತಮ್ಮ ಕೀರ್ತನೆಗಳಲ್ಲಿ ಪ್ರತಿಪಾದಿಸಿದ್ದಾರೆ. ‘ಜಯ ಜಯ ಜಗತ್ರಾಣ ಜಗದೊಳಗೆ ಸುತ್ರಾಣ ಅಖಿಲಗುಣ ಸದ್ಧಾಮ ಮಧ್ವನಾಮ’ ಎನ್ನುವಲ್ಲಿ ಜಗತ್ರ್ರಾಣರೂ, ಜಗತ್ರ್ರಾಣರೂ ಆದ ವಾಯುದೇವರ ವಿಶಿಷ್ಟ ಮಹಿಮೆಯ ಲೀಲಾ ವಿಲಾಸಗಳನ್ನು, ಮುಖ್ಯ ಪ್ರಾಣ ದೇವರ ಉಪನಿಕ್ಷತ್ರ ಪಾದ್ಯವಾದ ಮಹಾ ಮಹಿಮಿಯನ್ನೂ ಅಸದೃಶ್ಯವಾಗಿ ಅಭಿವ್ಯಕ್ತಿಸಿದ್ದಾರೆ.

ಕರಣಾಭಿಮಾನಿ ಸುರರು ದೇಹವ ಬಿಡಲು
ಕುರುಡಕಿವುಡ ಮೂಕನೆಂದೆನಿಸುವ
ಪರಮ ಮುಖ್ಯ ಪ್ರಾಣತೊಲಗಲಾ ದೇಹವನು
ಅರಿತು ಪೆಣನೆಂದು ಪೇಳ್ವರು ಬುಧಜನ
ಸುರರರೊಳಗೆ ನರರೊಳಗೆ ಸರ್ವಭೂತಗಳೊಳಗೆ
ಪರತರನೆನಿಸಿ ನೇಮಿಸಿ ನೆಲಸಿಹ
ಹರಿಯನಲ್ಲದೆ ಬಗೆಯ ಅನ್ಯರನು ಲೋಕದಲಿ

ಗುರುಕುಲತಿಲಕ ಮುಖ್ಯ ಪವಮಾನನು ಎಂದು ಹೇಳುತ್ತಾ.

ತ್ರೇತಾಯುಗದಲ್ಲಿ ವಾಯುದೇವರು ಹನುಮಂತ ನಾಗಿಯೂ, ದ್ವಾಪರದಲ್ಲಿ ಭೀಮನಾಗಿಯೂ, ಕಲಿಯುಗದಲ್ಲಿ ಮಧ್ವಾಚಾರ್ಯರಾಗಿಯೂ ಅವತರಿಸಿದ ಅದ್ಭುತ ಕಥಾ ನಕದ ಭವ್ಯಪರದೆಯನ್ನು ಬಿಚ್ಚುತ್ತಾ ಹೋಗುತ್ತಾರೆ.

ಶ್ರೀಪಾದರಾಜರ ಅನುಭವ ತತ್ವ ಜ್ಞಾನದ ನುಡಿ ಕಿಡಿಗಳು ಅವರ ಕೀರ್ತನತರಂಗಿಣಿಯಾಗಿ ಹರಿದು ಸಾಹಿತ್ಯ ಶ್ರೀಮಂತಿಕೆಯ ಲಾಲಿತ್ಯಶೈಲಿಯಲ್ಲಿ ಮೂಡಿ ಬಂದಿದೆ. ದಂಡಕ ಮಂಡಲದ ಸನ್ಯಾಸಿಗಳಾಗಿ ಮಾತ್ರವೇ ಉಳಿಯದೆ ದಂಡಕ, ವೃತ್ತನಾಮ, ಉಗಾಭೋಗ, ಸುಳಾದಿ, ಕೀರ್ತನೆ ಗಳಿಂದ ಹರಿದಾಸ ಸಾಹಿತ್ಯ ವೈಭವದ ದಿವ್ಯದೀವಿಗೆಯನ್ನು ಹಚ್ಚಿಟ್ಟ ಶ್ರೀಪಾದರಾಜರು ವೈಷ್ಣವೀಯ ಪ್ರತಿಭಾಪಾಂಡಿತ್ಯಗಳ ವೈರಾಗ್ಯ ಸೌಭಾಗ್ಯ ನಿಧಿಗಳು. ಶ್ರೀಪಾದರಾಜರ ಕೀರ್ತನೆಗಳು ಇಂದಿಗೂ ಪ್ರತಿಯೊಬ್ಬ ಆಸ್ತಿಕ ಬಂಧುವಿನ ಹೃದಯದ ಹಾಡಾಗಿ, ಎಲ್ಲರ ನಾಲಿಗೆಯ ನುಡಿಯಾಗಿ, ಅಂತರಂಗದ ಭಕ್ತಿಯ ಮಡಿಯಾಗಿ, ನಿನದಿಸುತ್ತಿವೆ. ಭಗವಂತನ ಹಿರಿಮೆ, ಭಗವದ್ಭಕ್ತಿಯ ಗರಿಮೆಗಳು ಶ್ರೀಪಾದರಾಜರ ಕೃತಿಗಳಲ್ಲಿ ಸಮಗ್ರ ಪ್ರತಿಮೆಯಾಗಿ ನಿಂತು, ಆ ಪ್ರತಿಮಾ ಚೈತನ್ಯ, ಅವರ ಪ್ರತಿಭಾ ಚೈತನ್ಯದೊಡನೆ ಬೆರೆತು ಪದಪದಗಳಲ್ಲಿಯೂ ಪ್ರವೇ ಶಿಸಿ, ಪದಪುಂಜ ಕಾವ್ಯಾದಿಗಳಲ್ಲಿ ಭಗವತ್ಸಾಕ್ಷಾತ್ಕಾರ ಕಾಣು ವಂತಾಗಿದೆ. ಆತ್ಮದಂಡನೆಗಿಂತಲೂ, ದೇಹ ದಂಡನೆ ಗಿಂತಲೂ,ಭಗವಂತನ ಪದತಲದಲ್ಲಿ ಸರ್ವಸಮರ್ಪಣ ಮಾಡಿ ಅವನು ಇಟ್ಟಂತೆ ನಾವಿರಬೇಕಾದ ಮಾರ್ಗದ ರಸ ಋಷಿಗಳು ಶ್ರೀಪಾದರಾಜರು.







# ವಾಧ್ಯಿಗಳ ನಿರ್ಮೂಲನೆಗೆ ಚಿತ್ರಮೂಲ

ಮೂಲ: ಡಾ|| ಸಿ. ಮಧುಸೂದನಶರ್ಮ
9000761390
ಅನುವಾದ : ಶ್ರೀಮತಿ

ಸಾಮಾನ್ಯವಾಗಿ ಸುಮಾರು ಒಂದು ಮೀಟರ್ ವರೆಗೂ ಬೆಳೆಯುವ ಔಷಧ ಗುಣಗಳ ಗಣಿ ಬಹುವಾರ್ಷಿಕ ಮೂಲಿಕೆ ಈ ಚಿತ್ರಮೂಲದಲ್ಲಿ ವಿವಿಧ ವ್ಯಾಧಿಗಳನ್ನು ನಿರ್ಮೂಲನಗೊಳಿಸಬಲ್ಲ ಅಪಾರ ಗುಣಗಳಿವೆ.

"ಬಲಮಾರೋಗ್ಯ ಮಾಯುಶ್ಚ ಪ್ರಾಣಾಶ್ಚಾಗ್ನೌ ಪ್ರತಿಷ್ಠಿತಃ " ಎನ್ನುತ್ತದೆ ಸಾಕ್ಷಾತ್ ಆಯುರ್ವೇದ ವೈದ್ಯಗ್ರಂಥ ಚರಕ ಸಂಹಿತೆ. ಬಲಿ, ಆರೋಗ್ಯ, ಆಯುಷ್ಯ, ಪ್ರಾಣ ಮುಂತಾದ ಅತಿಮುಖ್ಯವಾದವುಗಳೆಲ್ಲಾ ಅಗ್ನಿಯಿಂದಲೇ ಪ್ರತಿಷ್ಠಿತಗೊಳ್ಳುತ್ತವೆಂದು ಇದರ ಸ್ಥೂಲ ಅರ್ಥ. ಅಗ್ನಿ ಮಂದವಾದರೆ ಇವೆಲ್ಲವೂ ಆರಿಹೋಗುತ್ತವೆ. ಅಂತಹ ಅಗ್ನಿಯನ್ನು ಕಾಪಾಡಿಕೊಳ್ಳಲು, ಜೀರ್ಣಕ್ರಿಯೆಯನ್ನು ಸಹ ಕಲಿಸಲು ಶರೀರವನ್ನು ವಜ್ರಕಾಯವನ್ನಾಗಿ ಮಾಡಲು ಅನುವು ಮಾಡಿಕೊಡುವ ಶಕ್ತಿಯಿರುವುದರಿಂದಲೇ ಇದಕ್ಕೆ 'ಅನಲ' ಅಗ್ನಿ ಸಂಜ್ಞಕ ಎಂದು ಸಂಸ್ಕೃತ ನಾಮಗಳು ಸಹಾ ಇವೆ.

ಆಂಗ್ಲದಲ್ಲಿ ಸಿಲೋನ್ ಲೆಡ್‌ವಾರ್ಡ್ ಎಂದೂ ಹಿಂದಿಯಲ್ಲಿ ಜೀತ ಎಂದು ಕರೆಯಲ್ಪಡುವ, ಪ್ಲಂಬಾಜಿನ್ಯೆಸಿ ಎಂಬ ವೃಕ್ಷ ಕುಟುಂಬಕ್ಕೆ ಸೇರಿದ ಈ ಮೂಲಿಕೆಯ ಶಾಸ್ತ್ರೀಯ ನಾಮಧೇಯ ಪ್ಲಂಬಾಗೋ ಜ್ಯೆಲಾನಿಕ.

ಈ ಗಿಡಮೂಲಿಕೆಯ ಬೇರಿನ ಸುತ್ತ ಚೇಳಿನ ಮರಿಗಳು ವಾಸಿಸುವುದು ಗಮನಾರ್ಹ ಅಂಶ.

ಒಣಗಿಸಿದ ಚಿತ್ರಮೂಲದ ಬೇರುಗಳು ವರ್ಷಪೂರ್ತಿ ಯುನಾನಿ ಡೇರೆಗಳಲ್ಲಿ,ಮೂಲಿಕೆಗಳನ್ನು ಮಾರುವ ಅಂಗಡಿಗಳಲ್ಲಿ ಲಭಿಸುತ್ತವೆ.

ಪ್ರಕೃತಿ ಅನುಗ್ರಹಿಸಿದ ಚಿತ್ರಮೂಲದ ಮೂಲಕ ನಮ್ಮ ದೈನಂದಿನ ಜೀವನದಲ್ಲಿ ಎದುರಾಗುವ ವಿವಿಧ ಅನಾರೋಗ್ಯ ಸಮಸ್ಯೆಗಳನ್ನು ಹೇಗೆ ಬಗೆಹರಿಸಿಕೊಳ್ಳಬಹುದೆಂದು ಪ್ರಸ್ತುತ ತಿಳಿದುಕೊಳ್ಳೋಣ.

## ದೇಹದ ತೂಕ ಇಳಿಯಲು:

ಚಿತ್ರಮೂಲ ಚೂರ್ಣ,ಜೀರಿಗೆಗಳನ್ನು ಸೇರಿಸಿ ಮಾಡಿದ ಚೂರ್ಣ, ಇಂಗಿನ ಹರಳುಗಳನ್ನು ಸ್ವಲ್ಪವೇ ತುಪ್ಪ ಹಾಕಿ ಹುರಿದು ಮಾಡಿದ ಪುಡಿ ಒಂದೊಂದು 10 ಗ್ರಾಂ, ತ್ರಿಫಲ ಚೂರ್ಣ, (ಅಳತೆ ಕಾಯಿ, ತಾರೇಕಾಯಿ, ನೆಲ್ಲಿಕಾಯಿಗಳನ್ನು ಕಲಿಸಿ ಮಾಡಿದ ಪುಡಿ) 30 ಗ್ರಾಂ, ತ್ರಿಕಟು ಚೂರ್ಣ (ಶುಂಠಿ, ಹಿಪ್ಪೆ, ಮೆಣಸುಗಳನ್ನು ಕಲಿಸಿ ಮಾಡಿದ ಚೂರ್ಣ) 30 ಗ್ರಾಂ ಕಲಿಸಿಟ್ಟುಕೊಂಡು ದಿನವೂ ಬೆಳಗ್ಗೆ ರಾತ್ರಿ ಆಹಾರಕ್ಕೆ ಅರ್ಧ ಗಂಟೆ ಮುಂಚೆ ಬಾರಿಯೊಂದಕ್ಕೆ ಒಂದು ಗ್ರಾಂ ಪುಡಿಯನ್ನು ತಕ್ಕಷ್ಟು ಜೇನಿನೊಂದಿಗೆ ಕಲಿಸಿ ಸೇವಿಸುತ್ತಾ ನಿಯಮಬದ್ಧ ಆಹಾರ ಕ್ರಮಗಳನ್ನು ಪಾಲಿಸುತ್ತಿದ್ದರೆ ಶೀಘ್ರವಾಗಿ ಈ ಸಮಸ್ಯೆ ಬಗೆಹರಿಯುತ್ತದೆ. ಅಷ್ಟೇ ಅಲ್ಲದೇ, ಉದರ ಭಾಗದಲ್ಲಿ ಶೇಖರಣೆಗೊಂಡ ಅಧಿಕ ಪಿಷ್ಟಕರಗಿ ಬೊಜ್ಜಿನ ಸಮಸ್ಯೆ ಕಡಿಮೆಯಾಗುತ್ತದೆ.

**ಹಸಿವು ಚೆನ್ನಾಗಿ ಆಗಲು**

ದಿನವೂ ಒಂದು ಬಾರಿ 100 ಮಿ.ಲೀ. ತಾಜಾ ಮಜ್ಜಿಗೆಯಲ್ಲಿ ಒಂದು ಗ್ರಾಂ ಚಿತ್ರಮೂಲ ಪುಡಿ ಕಲಸಿ ಸೇವಿಸುತ್ತಿದ್ದರೆ ಜೀರ್ಣರಸಗಳು, ಜಠರ ರಸಗಳು ಚೆನ್ನಾಗಿ ಉತ್ಪತ್ತಿಯಾಗಿ ಹಸಿವುಂಟಾಗಿ ಜೀರ್ಣಶಕ್ತಿ ವೃದ್ಧಿಸುತ್ತದೆ.

**ತನ್ನು ವ್ಯಾಧಿ ಶಮನವಾಗಲು**

ಚಿತ್ರಮೂಲ ಪುಡಿ, ಕಾರ್ಚಿಕಾಯಿಪುಡಿ, ಸಮಾನವಾಗಿ ಕಲಸಿ ಶೇಖರಿಸಿಟ್ಟುಕೊಂಡು ದಿನವೂ ಒಂದು ಬಾರಿ ತಕ್ಕಷ್ಟು ಪುಡಿಯಲ್ಲಿ ಬೇಕಾದಷ್ಟು ನಿಂಬೆರಸ ಕಲಸಿ ಪೇಸ್ಟಿನಂತೆ ಮಾಡಿ ತನ್ನು ಮಚ್ಚೆಯಿರುವ ಭಾಗದ ಮೇಲೆ ಲೇಪನ ಮಾಡುತ್ತಿದ್ದರೆ ಚರ್ಮಕ್ಕೆ ಬಣ್ಣ ನೀಡುವ ಮೆಲಾನಿನ್ ಎಂಬ ರಜಕ ಪದಾರ್ಥ.ತಯಾರುಗೊಂಡು ಈ ಸಮಸ್ಯೆ ಕಡಿಮೆಯಾಗುತ್ತದೆ.

**ಗುಳ್ಳೆ - ಹುಣ್ಣು ಸಮಸ್ಯೆಗಳಿಗೆ**

ಸ್ವಲ್ಪ ಚಿತ್ರಮೂಲ ಪುಡಿಯನ್ನು ತಕ್ಕಷ್ಟು ನೀರಿನಲ್ಲಿ ಕಲಸಿ ಪೇಸ್ಟಿನಂತೆ ಮಾಡಿ ಗುಳ್ಳೆಯ ಭಾಗಕ್ಕೆ ಹಚ್ಚಿದರೆ ತಕ್ಷಣವೇ ಉರಿ, ನೋವು, ಬಾಧೆ, ಸೆಳೆತ ಕಡಿಮೆಯಾಗುತ್ತವೆ.

**ದೇಹ ಸೆಳೆತಕ್ಕೆ:**

ಚಿತ್ರಮೂಲ, ಭೃಂಗರಾಜ, ಕಡ್ಲೆಕಳ್ಳಿ, ಅಮೃತಬಳ್ಳಿ ಒಂದೊಂದು 50 ಗ್ರಾಂನಂತೆ ಕಲಸಿಟ್ಟುಕೊಂಡು 200 ಮಿ.ಲೀ ನೀರಿನಲ್ಲಿ 5 ಗ್ರಾಂ ಪುಡಿಯನ್ನು ಹಾಕಿ 100 ಮಿ.ಲೀ. ನೀರು ಉಳಿಯುವಂತೆ ಮರಳಿಸಿ, ಕೆಳಗಿಳಿಸಿ, ಬಿಸಿಯಾರಿದ ನಂತರ ಬೆಳಗ್ಗೆ - ಸಂಜೆ ಬಾರಿಯೊಂದಕ್ಕೆ 50 ಮಿ. ಲೀ. ನಂತೆ ಒಂದು ಟೀ ಸ್ಪೂನ್ ಜೇನು ಅಥವಾ ಜೇನಿಲ್ಲದೆಯೇ ಹಾಗೆಯೇ ಸೇವಿಸುತ್ತಿದ್ದರೆ ಉತ್ತಮ ಪರಿಹಾರ ದೊರೆಯುತ್ತದೆ.

**ಮೂರ್ಛೆ ಬಾಧೆಗೆ :**

ಚಿತ್ರಮೂಲ, ಹಸಿ ಸರಸ್ವತಿ ಎಲೆಗಳ ಪುಡಿಯನ್ನು ಒಂದೊಂದನ್ನು 30 ಗ್ರಾಂನಂತೆ ತೆಗೆದುಕೊಂಡು ಕಲಸಿಟ್ಟುಕೊಂಡು ದಿನವೂ ಮೂರು ಬಾರಿ ಆಹಾರ ಸೇವನೆಗೆ 15 ನಿಮಿಷ ಮೊದಲು ಬಾರಿಯೊಂದಕ್ಕೆ ಒಂದು ಗ್ರಾಂನಂತೆ ತಕ್ಕಷ್ಟು ಜೇನಿನಲ್ಲಿ ಕಲಸಿ ಸೇವಿಸುತ್ತಿದ್ದರೆ ವ್ಯಾಧಿಯ ತೀವ್ರತೆ ಕಡಿಮೆಯಾಗಿ ಈ ಸಮಸ್ಯೆಯಿಂದ ಹೊರಬರಬಹುದು.

**ಉಗುರು ಸುತ್ತಿನ ಸಮಸ್ಯೆಗೆ :**

ಚಿತ್ರಮೂಲ,ಅಜ್ವಾನವನ್ನು ಹುರಿದು ಮಾಡಿದ ಚೂರ್ಣ,ಅರಿಶಿನ,ಯವಕ್ಷಾರ,ನೆಲ್ಲಿ ಬೀಜದ ಚೂರ್ಣ. ಸಮಾನವಾಗಿ ಕಲಸಿಟ್ಟುಕೊಂಡು ಬೆಳಗ್ಗೆ - ಸಾಯಂಕಾಲ ಬಾರಿಯೊಂದಕ್ಕೆ 2-3 ಗ್ರಾಂ ಔಷಧಿಯಲ್ಲಿ ಒಂದು ಟೀ ಸ್ಪೂನ್ ಜೇನು, ಅರ್ಧ ಟೀ ಸ್ಪೂನ್‌ತುಪ್ಪ ಕಲಸಿ ಸೇವಿಸುತ್ತಿದ್ದರೆ ಗುಣವಾಗುತ್ತದೆ.

**ಹುಳಿತೇಗಿಗೆ:**

ಚಿತ್ರಮೂಲಿ, ಶುಂಠಿಪುಡಿ ಒಂದೊಂದನ್ನು 20 ಗ್ರಾಂ ಅಜ್ವಾನವನ್ನು ಹುರಿದು ಮಾಡಿದ ಪುಡಿ, ಕಾಳಮೆಣಸಿನ ಪುಡಿ, ಸೈಂಧವ ಲವಣ ಪುಡಿ ಒಂದೊಂದನ್ನು 5 ಗ್ರಾಂ ಕಲಸಿಟ್ಟು ಕೊಂಡು ದಿನವೂ ಎರಡು ಬಾರಿ 100 ಮಿ.ಲೀ. ಉಗುರು ಬೆಚ್ಚಗಿನ ನೀರಿನಲ್ಲಿ ಅರ್ಧ ಟೀ ಸ್ಪೂನ್ ಬೆಲ್ಲ ಹಾಕಿ ಕರಗಿಸಿ ಒಂದು ಗ್ರಾಂ ಪುಡಿಯನ್ನು ಹಾಕಿ ಕಲಸಿ ಸೇವಿಸುತ್ತಿದ್ದರೆ ಶೀಘ್ರವಾಗಿ ಉತ್ತಮ ಪರಿಹಾರ ದೊರಕುತ್ತದೆ.

**ನೋಟ್ :**

ಮೇಲೆ ಹೇಳಿದ ಔಷಧಿ ದಿನಸುಗಳು ವರ್ಷ ಪೂರ್ತಿ ಗಿಡಮೂಲಿಕೆಗಳ ಔಷಧಾಲಯಗಳಲ್ಲಿ ಲಭ್ಯವಾಗುತ್ತವೆ. ಚಿತ್ರಕಾದಿವಡಿ, ಚಿತ್ರಕಹರೀತಕಿ, ಚಿತ್ರಕಾದಿತೈಲ, ಮೊದಲಾದ ಆಯುರ್ವೇದ ಔಷಧಿಗಳ ತಯಾರಿಕೆಗಳಲ್ಲಿ ತಮಿಳುನಾಡಿನಲ್ಲಿ ಪ್ರಸಿದ್ಧ ಸಿದ್ಧ ವೈದ್ಯ ಔಷಧಿಗಳ ತಯಾರಿಕೆಗಳಲ್ಲಿ ತಮಿಳುನಾಡಿನಲ್ಲಿ ಪ್ರಸಿದ್ಧ ಸಿದ್ಧ ವೈದ್ಯ ಔಷಧಿಗಳಾದ ವಾತಸೂರಕ ಕುಡಿನೀರ್, ಗಂಧಕರ ಸಾಯನಂ, ಕಾರುಣಯ್ ಲೇಹ್ಯ ಮಹೋಲ್ಲಾಲಿ, ಕೊರಪ್ಪ ವಿಷ್ಣುಚಕ್ರಂ, ವಿರಸಕಂತಿಮೆಜುಗು, ಮಹಾವೀರ ಮೆಜುಗು ಮೊದಲಾದ ಔಷಧಿಗಳ ತಯಾರಿಕೆಯಲ್ಲಿ ಈ ಚಿತ್ರಮೂಲವನ್ನು ಒಂದು ಉಪರಸಾಯನಿಕವಾಗಿ ಬಳಸುತ್ತಾರೆ.





# ಕನಕಧಾರಾ ಸ್ತೋತ್ರಗಳು

– ಡಾ॥ ಸುಮನಬದರೀನಾಥ್

ಕಲ್ಯಾಣಾನಾಂ ಅವಿಕಲನಿಧಿಃ ಕಾಪಿ ಕಾರುಣ್ಯ ಸೀಮಾ
ನಿತ್ಯಾಮೋದಾ ನಿಗಮ ವಚಸಾಂ ಮೌಳಿ ಮಂದಾರ ಮಾಲಾ
ಸಂಪದದಿವ್ಯಾ ಮಧು ವಿಜಯಿನಃ ಸಂನಿಧತ್ತಾಂ ಸದಾಮೇ
ಸೈಷಾದೇವೀ ಸಕಲ ಭುವನ ಪ್ರಾರ್ಥನಾ ಕಾಮಧೇನುಃ॥

## ಶ್ರೀ ಸ್ತುತಿ

ಶ್ರೀಮನ್ನಾರಾಯಣನಿಗೆ ಅನುರೂಪವೂ ಅಭಿಮತವೂ ಆದ ಸ್ವರೂಪ, ರೂಪ, ಗುಣ, ವಿಭವ, ಐಶ್ವರ್ಯ, ಶೀಲಾದಿ ಸಕಲ ಕಲ್ಯಾಣ ಗುಣ ಪರಿಪೂರ್ಣೆ ಲಕ್ಷ್ಮೀದೇವಿ. ಪುರುಷಾಕಾರ ಸ್ವರೂಪಿಣಿ. ಸದಾ ಅನುಗ್ರಹಮಯಿ. ನಿತ್ಯಂ ಅಜ್ಞಾತ ನಿಗ್ರಹ. ಶ್ರೀನಿವಾಸಸ್ಯ ಕರುಣಾಮಿವರೂಪಿಣಿ. ಶ್ರೀ ಎಂದರೆ ಸಂಪತ್ತು. ಶ್ರೀ ಎಂದರೆ ಸೌಂದರ್ಯ ಶ್ರೀ ಎಂದರೆ ಭಾಗ್ಯ ದೇವತೆ. ಮಂಗಳ ದೇವತೆ. ಶ್ರೀ ಎಂದರೆ ಸ್ತ್ರೀ ತತ್ವದ ಎಲ್ಲ ಸದ್ಗುಣಗಳ, ಸೌಂದರ್ಯದ ಸಾಕಾರ ಸ್ವರೂಪಿಣಿ. ಶ್ರೀದೇವಿಯ ಮಹಿಮೆಗೆ, ವೈಭವಕ್ಕೆ ಶ್ರೀಹರಿಯ ಹೊರತು ಮತ್ತಾರೂ ಸಮಾಭ್ಯಧಿಕರಿಲ್ಲ.ಅವಳು ಭಗವತಿ, ಭುವನೇಶ್ವರಿ.

ಸಾಕ್ಷಾಲ್ಲಕ್ಷ್ಮೀರ್ಭಾಗ್ಯಸ್ಯ ದೇವತಾ ಎಂದು ಕೀರ್ತಿತಳಾಗಿರುವಂತೆ ಅವಳು ಅಷ್ಟಲಕ್ಷ್ಮೀ ಸ್ವರೂಪಳಾಗಿ ಸಕಲ ವಿಧವಾದ ಸೌಭಾಗ್ಯ ಸಂಪತ್ತುಗಳಿಗೂ ಅಧಿದೇವತೆ. ಅವಳು ನೀಡಿದ. ನೀಡಲಾಗದ ಒಳಿತು ಯಾವುದೂ ಇಲ್ಲವೇ ಇಲ್ಲ. ಅವಳ ಕಟಾಕ್ಷ ವೀಕ್ಷಣೆ ಸಕಲ ಸಲ್ಲಕ್ಷಣ ಸಂಪನ್ನವೂ ಸಮಸ್ತ ಸಂಪತ್ಪ್ರದಾಯಕವೂ, ಸರ್ವಮಂಗಳಕಾರಕವೂ ಆದುದು. ಧನ, ಧಾನ್ಯ ವಿದ್ಯೆ, ಸಂತಾನ,ಯಶಸ್ಸು, ಐಶ್ವರ್ಯ ಆರೋಗ್ಯ, ಎಲ್ಲ ವಿಧವಾದ ಸಂಪತ್ತುಗಳೂ ಅಷ್ಟಲಕ್ಷ್ಮೀ ಸ್ವರೂಪಿಣಿಯ ಅಧೀನ. ಲಕ್ಷ್ಮೀದೇವಿಯ ಕಟಾಕ್ಷ ಯಾರ ಮೇಲೆ ಬೀಳುವುದೋ ಅವರು ಸರ್ವವಿಧವಾದ ಸಮೃದ್ಧಿಯನ್ನು ಎಲ್ಲ ಐಹಿಕ ಭೋಗ ಭಾಗ್ಯಗಳನ್ನು ಭಗವಂತನ ನಿತ್ಯ ಕೈಂಕರ್ಯವನ್ನು ಅವಳ ಅನುಗ್ರಹದ ಫಲವಾಗಿ ಪಡೆದು ಸುಖಿಸುವರು.

ಲಕ್ಷ್ಮೀ ಕಟಾಕ್ಷ ಪಡೆಯಲು ನಾನಾ ಮಾರ್ಗಗಳಿವೆ. ಲಕ್ಷ್ಮೀ ಸ್ತೋತ್ರಗಳ ಪಠಣೆ ಮಾಡಿ ಲಕ್ಷ್ಮೀ ಪ್ರಾರ್ಥನೆ ಮಾಡುವುದು ಲಕ್ಷ್ಮೀ ಅನುಗ್ರಹ ಪಡೆಯಲು ಎಲ್ಲಕ್ಕಿಂತ ಸುಲಭವಾದ ಸಾಧನ ಮಾರ್ಗ.ಲಕ್ಷ್ಮೀದೇವಿಯ ಮಹಿಮೆಯನ್ನು ಪ್ರತಿಪಾದಿಸುವ ಅಸಂಖ್ಯ ಸ್ತೋತ್ರಗಳಿವೆ. ಶ್ರೀ ಸೂಕ್ತ, ಲಕ್ಷ್ಮೀ ಹೃದಯ, ಲಕ್ಷ್ಮೀ ಸಹಸ್ರನಾಮಾವಳಿ, ಲಕ್ಷ್ಮೀ ಅಷ್ಟೋತ್ತರ ಶತನಾಮಾವಳಿ,



ಮುಂತಾದ ದಿವ್ಯ ಸ್ತೋತ್ರಗಳು ಪ್ರಾಚೀನ ಕಾಲದಿಂದಲೂ ಲಕ್ಷ್ಮೀ ಅನುಗ್ರಹ ಸಂಪಾದನೆಗಾಗಿ ಬಳಸಲ್ಪಟ್ಟಿವೆ. ವೇದೋಕ್ತ, ಶಾಸ್ತ್ರೋಕ್ತ ಸ್ತೋತ್ರಗಳಿಂದ ಪ್ರಾರಂಭವಾದ ಲಕ್ಷ್ಮೀ ಸ್ತೋತ್ರಾತ್ಮಕವಾದ ಈ ಪ್ರವಾಹವು ಇಂದಿನವರೆಗೂ ತುಂಬು ಹೊಳೆಯಂತೆ ಹರಿದಿದೆ.

ಅನೇಕ ಆಚಾರ್ಯರು, ಭಕ್ತರು, ತಪಸ್ವಿಗಳು, ಶ್ರೀದೇವಿಯನ್ನು ನಾನಾ ಬಗೆಯಾಗಿ ಶಾಸ್ತ್ರೀಯವಾಗಿ ಸ್ತೋತ್ರ ಮಾಡಿದ್ದಾರೆ. ಅವುಗಳಲ್ಲಿ ಶ್ರೀಶಂಕರಾಚಾರ್ಯ ವಿರಚಿತ ಕನಕಧಾರಸ್ತೋತ್ರ, ವೇದಾಂತ ದೇಶಿಕಾಚಾರ್ಯರಿಂದ ರಚಿತವಾದ ಶ್ರೀಸ್ತುತಿ, ಮತ್ತು ವಾದಿರಾಜ ಗುರು ಸಾರ್ವಭೌಮರಿಂದ ರಚಿತವಾದ ಶ್ರೀರಗುಣದರ್ಪಣ ಸ್ತೋತ್ರ ಇವು ಮೂರೂ ಸೋತ್ರಗಳು ಕನಕಧಾರಾ ಲಕ್ಷ್ಮೀ ಸ್ತೋತ್ರಗಳೆಂದೇ ಪ್ರಸಿದ್ಧಿ ಹೊಂದಿದೆ. ಏಕೆಂದರೆ ಈ ಮೂರು ಆಚಾರ್ಯರು ಈ ಸ್ತೋತ್ರಗಳನ್ನು ರಚಿಸಿ ಲಕ್ಷ್ಮೀದೇವಿಯನ್ನು ಸ್ತುತಿಸಿ ಬೇಡಿಕೊಂಡಾಗ ಭಕುತನ ಪ್ರಾರ್ಥನೆಗೆ ಓಗೊಟ್ಟು ದೇವಿ ಕನಕ ವರ್ಷವನ್ನೇ ಕರೆದಳಂತೆ. ಕನಕಧಾರೆ ವರ್ಷಿಸುವಂತೆ ಮಾಡಿದ ಈ ಸ್ತೋತ್ರಗಳು ಕನಕಧಾರಲಕ್ಷ್ಮೀ ಸ್ತೋತ್ರಗಳೆಂದೇ ಪ್ರಸಿದ್ಧಿಯಾದವು. ಈ ಮೂರು ಸ್ತೋತ್ರಗಳ ರಚನೆಯ ಹಿನ್ನೆಲೆಯಲ್ಲಿ ಅದ್ಭುತ ಘಟನೆಗಳ ಕಥಾನಕಗಳಿವೆ.

## ಕನಕಧಾರಾ ಸ್ತೋತ್ರ

ಅದ್ವೈತ ಮತ ಪ್ರತಿಷ್ಠಾಪನಾಚಾರ್ಯರಾದ ಶ್ರೀ ಶಂಕರಾಚಾರ್ಯರು ಬಹು ಸುಂದರವಾದ ಸುಮಾರು 80 ಕ್ಕೂ ಹೆಚ್ಚು ಸ್ತೋತ್ರಗಳನ್ನು ಸಂಸ್ಕೃತದಲ್ಲಿ ರಚಿಸಿದ್ದಾರೆ. ಭಾವಸೌಂದರ್ಯ ಅರ್ಥಗಾಂಭೀರ್ಯ, ಕವಿತಾ ಮಾಧುರ್ಯಗಳಿಂದ ಪ್ರಾಸಾನುಪ್ರಾಸಗಳಿಂದ ಶ್ರವಣ ಮನೋಹರವಾದ ಈ ಸ್ತೋತ್ರಗಳು ಸಂಸ್ಕೃತ ಸ್ತೋತ್ರ ಸಾಹಿತ್ಯ ಭಂಡಾರವನ್ನು ಶ್ರೀಮಂತಗೊಳಿಸಿವೆ. ಈ ಸಂಚಯದಲ್ಲಿ ಶಿವಪರವಾದ, ವಿಷ್ಣುಪರವಾದ, ದೇವೀ ಪರವಾದ ಕೃತಿಗಳಿವೆ. ಅವುಗಳಲ್ಲಿ ಲಕ್ಷ್ಮೀ ದೇವಿಯನ್ನು ಕುರಿತಾದ ಕನಕಧಾರಾ ಸ್ತೋತ್ರ ಗೃಹ ಮಂದಿರಗಳಲ್ಲಿ ಕನಕಧಾರೆಯನ್ನೇ ಸುರಿಸುವುದೆಂದು ಪ್ರಖ್ಯಾತವಾಗಿದೆ. ವರಪ್ರಸಾದಿಯಾದ ಈ ಸ್ತೋತ್ರದ ರಚನೆಯ ಹಿನ್ನೆಲೆಯ ಘಟನೆ ಇಂತಿದೆ.

ಶ್ರೀಶಂಕರಾಚಾರ್ಯರು ತಮ್ಮ ವಿದ್ಯಾಭ್ಯಾಸ ಕಾಲದಲಲ್ಲಿ ನಿತ್ಯವು ಭಿಕ್ಷೆ ಬೇಡುವುದು ಶಿಷ್ಯವೃತ್ತಿಯ ನಿಯಮಗಳಲ್ಲೊಂದಾಗಿತ್ತು ಒಂದು ದಿನ ಆಚಾರ್ಯರು ಕಡು ದರಿದ್ರ ನಾದ ಬ್ರಾಹ್ಮಣನೊಬ್ಬನ ಮನೆಯ ಮುಂದೆ ನಿಂತು ಭವತಿ ಭಿಕ್ಷಾಂ ದೇಹಿ' ಎಂದು ಕೇಳಿದರು. ಆ ಮನೆಯ ಗೃಹಿಣಿ ಯಾದರೋ ಜೀರ್ಣ ವಸ್ತ್ರವನ್ನುಟ್ಟು, ತಾನುಟ್ಟಿದ ಹರಿದ ಸೀರೆಯನ್ನೇ ಹೊಲಿದುಕೊಳ್ಳುತ್ತಿದ್ದವಳು ತೇಜಸ್ವಿಯಾದ ಈ ಬ್ರಹ್ಮಚಾರಿಗೆ ಭಿಕ್ಷೆ ನೀಡಲು ಮನೆಯಲ್ಲಿ ಏನೂ ಇಲ್ಲವಲ್ಲಾ ಮನೆಯೆಲ್ಲಾ ಹುಡುಕಿ ಕಡೆಗೆ ಸಿಕ್ಕಿದ ಒಂದು ಒಣ ನೆಲ್ಲಿ ಕಾಯಿಯನ್ನೇ ತಾನಿದ್ದ ದೀನ ಸ್ಥಿತಿಯಲ್ಲಿ ಹೊರ ಬರಲು ನಾಚಿ, ಬಾಗಿಲನ್ನು ತುಸುತೆರೆದು ಕೈ ಹೂರಗೆ ಚಾಚಿ ಶ್ರದ್ಧಾ ಭಕ್ತಿಗಳಿಂದ ಶಂಕರಾಚಾರ್ಯರ ಪಾತ್ರೆಗೆ ಹಾಕಿದಳು. ಆಕೆಯ ದಾರಿದ್ರ್ಯವನ್ನು ಕಂಡು ಮನ ಕರಗಿದ, ಮರುಗಿದ ಆರ್ಚಾರು ಅದನ್ನು ಬಗೆಹರಿಸ ತಿಳಿಸಿ ಸಮಸ್ತ ಸಂಪದಧಿ ದೇವತೆಯಾದ ಲಕ್ಷ್ಮೀ ದೇವಿಯಲ್ಲದೆ ಮತ್ತೆ ಯಾರು ಈ ದಟ್ಟ ದಾರಿದ್ರ್ಯವನ್ನು ಪರಿಹರಿಸಲಾರದೆಂದು ಮನಗಂಡು ಅಲ್ಲಿ ನಿಂತಿದ್ದಂತೆಯೇ.

ಅಂಗಂ ಹರೇಃ ಫಲಕ

ಭೂಷಣ ಮಾಶ್ರಿಯಂತೀಂ

ಭೃಂಗಾಂಗನೇವ ಮುಕುಲಾಭರಣಮ್

ತಮಾಲಮ್ ಅಂಗೀಕೃತಾಯಿ ವಿಭೂತಿರಪಾಂಗ

ಲೀಲಾ ಮಾಂಗಲ್ಯದಾಸ್ತು ಮಮ ಮಂಗಲ ದೇವತಾಯಾ॥

ಎಂದು ಪ್ರಾರಂಭಿಸಿ 21 ಶ್ಲೋಕಗಳಲ್ಲಿ ಲಕ್ಷ್ಮೀ ದೇವಿಯನ್ನು ಸ್ತುತಿಸಿದರು.

ಯತ್ಕಟಾಕ್ಷ ಮುಪಾಸನಾ ವಿಧಿಃ;

ಸೇವಕಸ್ಯ ಸಕಲಾರ್ಥ ಸಂಪದಃ;

ಸಂತನೋತಿ ವಚನಾಂಗ ಮಾನಸೈ

ಸ್ತ್ವಾಂ ಮುರಾರಿ ಹೃದಯೇಶ್ವರೀಂ ಭಜೇ॥

(ಜನನೀ, ನಿನ್ನ ಕಟಾಕ್ಷದ ವಿಧಿಪೂರ್ವಕ ಉಪಾಸನೆಯು ನಿನ್ನ ಸೇವೆಯನ್ನು ಮಾಡುವವರಿಗೆ ಸಕಲ ಸಂಪತ್ತನ್ನು ನೀಡುತ್ತದೆ.ಮುರಾರಿಯ ಪ್ರಾಣೇಶ್ವರಿಯೇ ನಾನು ನಿನ್ನನ್ನು ಕಾಯಾ, ವಾಚಾ, ಮನಸಾ, ಭಜಿಸುತ್ತೇನೆ.) ಎಂದು ಭಕ್ತಿಭಾವ ಪೂರ್ಣವಾಗಿ ದೇವಿಯ ಸಂಪತ್ ಪ್ರದಾಯಕ ಕಟಾಕ್ಷ ವೈಭವವನ್ನು ನಾನಾ ವಿಧವಾಗಿ ಸ್ತುತಿಸಿದರು. ಈ ಸ್ತೋತ್ರಕ್ಕೆ ಸುಪ್ರಸನ್ನಳಾದ ದೇವಿಯು ಅಶರೀರವಾಣಿಯಿಂದ ಈ ದರಿದ್ರ ದಂಪತಿಗಳು ಹಿಂದಿನ ಜನ್ಮಗಳಲ್ಲಿ ಯಾವ ದಾನವನ್ನೂ ಮಾಡದೆ ಈ ದುರ್ಗತಿಗೆ ಬಂದಿರುವರು. ಅವರಿಗೆ ಸಂಪತ್ತಿನ ಯೋಗವಿಲ್ಲ ಎಂದು ನುಡಿದಳು. ಶಂಕರಾಚಾರ್ಯರು ದೇವಿಯನ್ನು ಕುರಿತು " ದಯಾಮಯಿ ತಾಯೇ ಸಿರಿಲಕುಮಿಯೇ ಈ ಗೃಹಿಣಿ ಈಗ ಶ್ರದ್ಧೆ ಭಕ್ತಿಗಳಿಂದ ನನಗೆ ನೀಡಿರುವ ಈ ಒಣನೆಲ್ಲಿಕಾಯಿಯಿಂದಲೇ ಅವಳ ಪಾಪ ಪರಿಹಾರವಾಗಿರುವುದು.ಕರುಣಿಸಿ ಅವಳನ್ನು ನೋಡಮ್ಮಾ ಭಾಗ್ಯವನ್ನು ನೀಡಮ್ಮಾ ಎಂದು ಬೇಡಿಕೊಳ್ಳಲು ದೇವಿಯು ಸುಪ್ರಸನ್ನಳಾಗಿ ಆ ಮನೆಯಲ್ಲಿ ಬಂಗಾರದ ನೆಲ್ಲಿಕಾಯಿಗಳ ಸುರಿಮಳೆಯು ಸುರಿಯುವಂತೆ ಅನುಗ್ರಹಿಸಿದಳು. ಆ ದಂಪತಿಗಳ ಬಡತನ ಮಾಯವಾಗಿ ಅವರು ಸುಖ ಸೌಭಾಗ್ಯಗಳನ್ನು ಅನುಭವಿಸುತ್ತಾ ಆನಂದದಿಂದ ದೀರ್ಘಾಯುಗಳಾಗಿ ಬಾಳಿದರು. ಅವರಿಗೆ ಸಿರಿತನ ತಂದ, ಕನಕಧಾರೆಯನ್ನೇ ಸುರಿಸಿದ ಈ ಸ್ತೋತ್ರವು ಅಂದಿನಿಂದ ಕನಕಧಾರ ಸ್ತೋತ್ರವೆಂದೇ ಪ್ರಸಿದ್ಧಿಯಾಯಿತು.ಈ ಸ್ತೋತ್ರವನ್ನು ಪ್ರತಿನಿತ್ಯವೂ ಸಂಧ್ಯಾ ದೀಪಾರಾಧನೆಯ ಸಮಯದಲ್ಲಿ, ಅಥವಾ ಶುಕ್ರವಾರ ಸಾಯಂಕಾಲದ ಸಮಯದಲ್ಲಿ ಅಥವಾ ನವರಾತ್ರಿಯಲ್ಲಿ ಪಠಿಸುತ್ತಾ ಸರ್ವ ಸಂಪತ್ತುಗಳನ್ನು ಪಡೆದು ಸುಖಜೀವನ ನಡೆಸುತ್ತಿರುವ ಅಸಂಖ್ಯಾತ ಭಕ್ತರು ಇಂದಿಗೂ ಇದ್ದಾರೆ.

**ಶ್ರೀ ಸ್ತುತಿ**

ವಿಶಿಷ್ಟಾದ್ವೈತ ಸಿದ್ಧಾಂತದ ಆಚಾರ್ಯ ಪುರುಷರಲ್ಲಿ ಶ್ರೀ ವೇದಾಂತ ದೇಶಿಕರು ಅತ್ಯಂತ ಪ್ರಸಿದ್ಧರು. ಅವರ ನಿಜನಾಮಧೇಯ ವೆಂಕಟನಾಥರೆಂದು.ಅವರು ಘಂಟಾವತಾರ. ಸರ್ವತಂತ್ರ ಸ್ವತಂತ್ರ, ಕವಿತಾರ್ಕಿಕಸಿಂಹ ಮುಂತಾದ ಬಿರುದುಗಳಿಂದ ಪ್ರಖ್ಯಾತರಾದವರು. ವೇದಾಂತ ದೇಶಿಕರು ವಿಶಿಷ್ಟಾದ್ವೈತ ಮತದ ತತ್ವ, ಮಹತ್ವವನ್ನು ಪ್ರಚುರಪಡಿಸುತ್ತಾ ಅತ್ಯಂತ ಸುಂದರವಾದ ಸುಮಾರು 28 ಸ್ತೋತ್ರರತ್ನಗಳನ್ನು ರಚಿಸಿ ಸಂಸ್ಕೃತ ಸ್ತೋತ್ರ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ.ಲಕ್ಷ್ಮೀಪರ ಸ್ತೋತ್ರವಾದ ಶ್ರೀಸ್ತುತಿಯಲ್ಲಿ ಶ್ರೀತತ್ವವನ್ನು ವಿಸ್ತಾರವಾಗಿ ಪ್ರತಿಪಾದಿಸಿದ್ದಾರೆ. ಇದೊಂದು ವರಪ್ರಸಾದಿಯಾದ ಸ್ತೋತ್ರವಾಗಿದೆ. ವೇದಾಂತ ದೇಶಿಕರ ಈ ಶ್ರೀಸ್ತುತಿಯ ರಚನೆಗೆ ವಿಶೇಷವಾದ ಹಿನ್ನೆಲೆಯೂ ಘಟನೆಯೂ ಇದೆ.

ಒಮ್ಮೆ ವೇದಾಧ್ಯಯನ ಸಂಪನ್ನನಾದ ಬ್ರಹ್ಮಚಾರಿಯೊಬ್ಬನು ಮದುವೆ ಮಾಡಿಕೊಳ್ಳಲು ನಿಶ್ಚಯಿಸಿದನು. ಆದರೆ ಬ್ರಹ್ಮಚಾರಿಯ ಬಳಿ ಮದುವೆಗೆ ಬೇಕಾಗುವ ಧನವೆಲ್ಲಿಂದ ಬರಬೇಕು. ಅವನು ವೇದಾಂತ ದೇಶಿಕರ ಬಳಿ ಬಂದು ಧನ ಸಹಾಯ ಮಾಡಬೇಕೆಂದು ಬೇಡಿಕೊಂಡನು. ನಿರ್ಧನರಾದ ವೇದಾಂತ ದೇಶಿಕರ ಬಳಿಯೂ ಅವನಿಗೆ ಸಹಾಯ ಮಾಡಲು ಹಣವಿಲ್ಲ. ಆಗ ಅವರು ಕ್ಷಣಕಾಲ ಸುಮ್ಮನಿದ್ದು ಸಂಪತ್ತಿನ ಅಧಿದೇವತೆಯಾದ "ಸಕಲ ಭುವನ ಪ್ರಾರ್ಥನಾಕಾಮಧೇನು" ಎನಿಸಿದ ಲಕ್ಷ್ಮೀದೇವಿಯೆ ತಮ್ಮ ಕೋರಿಕೆಯನ್ನು ನೆರವೇರಿಸಬಲ್ಲವಳೆಂದು ಮಹಾಲಕ್ಷ್ಮಿಯನ್ನು ಸ್ತುತಿಸಲಾರಂಭಿಸಿದರು. ಹೀಗೆ ರಚಿತವಾದ ಸ್ತೋತ್ರವೇ ಶ್ರೀಸ್ತುತಿ.

ಮಾನಾತೀತ ಪ್ರಥಿತ ವಿಭವಾಂ ಮಂಗಳಂ ಮಂಗಳಾನಾಂ

ವಕ್ಷ ಪೀಠೀಂ ಮಧು ವಿಜಯಿ ನೋಭೂಷ ಯಂತೀಂ ಸ್ವಕಾತ್ಯಾ

ಪ್ರತ್ಯಕ್ಷಾನುಶ್ರವಿಕ ಮಹಿಮ ಪ್ರಾರ್ಥಿನೀನಾಂ ಪ್ರಜಾನಾಂ

ಶ್ರೇಯೋಮೂರ್ತೀಂ ಶ್ರೀಯ ಮಶರಣಃ ತ್ವಾಂ ಶರಣ್ಯಾಂ ಪ್ರಪದ್ಯೇ. ಎಂದು ಪ್ರಾರಂಭವಾದ ಸ್ತೋತ್ರಲಹರಿ

25 ಶ್ಲೋಕಗಳಲ್ಲಿ ತುಂಬು ತರಂಗಿಣಿ ಯಾಗಿ, ಭಕ್ತಿ ಭಾವಪೂರ್ಣವಾಗಿ ಪ್ರವಹಿಸಿತು.

ಯೋಗಾರಂಭಂ ಎಂದು ಪ್ರಾರಂಭವಾಗುವ ಇದರ 16ನೇ ಶ್ಲೋಕವನ್ನು ಶ್ರೀ ದೇಶಿಕರು ಹೇಳುವ ಸಮಯಕ್ಕೆ ಸರಿಯಾಗಿ ಅವರ ಮುಂದೆ ಇದ್ದಕ್ಕಿದಂತೆ ಕನಕವರ್ಷವಾಯಿತು.



ಯೋಗಾರಂಭ ತ್ವರಿತ ಮನಸೋಯುಷ್ಮದ್ವೆಕಾಂತ್ಯ ಯುಕ್ತಂ
ಧರ್ಮಂಪ್ರಾಪ್ತುಂ ಪ್ರಥಮವಿಹಯೇ ಧಾರಯಂತೇ ಧನಾಯಾಂ
ತೇಕ್ಷಾಂ ಭೂಮೇಃ ಧನಪತಿ ಗೃಹಾದಂಬರಾದಂಬು ಧೇರ್ವಾ
ಧಾರಾ ನಿರ್ಯಾಂತ್ಯಧಿಕಮಧಿಕಂ ವಾಂಛಿತಾನಾಂ ವಸೂನಾಂ ॥16॥

(ಯಾರು ಈ ಲೋಕದಲ್ಲಿ ಯೋಗಗಳನ್ನು ಆರಂಭಿಸುವುದರಲ್ಲಿ ತ್ವರೆಗೊಂಡ ಮನಸ್ಸುಳ್ಳವರಾಗಿ ದಿವ್ಯ ದಂಪತಿಗಳಾದ ನಿಮ್ಮಿಬ್ಬರಲ್ಲಿ ಏಕಾಗ್ರತೆಯಿಂದ ಕೂಡಿದ ಕರ್ಮಯೋಗಾದಿ ಧರ್ಮವನ್ನು ಹೊಂದುವುದಕ್ಕಾಗಿ ಮೊದಲು ಧನರಾಯನ್ನು ವಹಿಸುತ್ತಾರೋ ಅಂತಹವರಿಗೆ ಭೂಮಿಯಿಂದಲೋ, ಕುಬೇರನ ಗೃಹದಿಂದಲೋ, ಆಕಾರದಿಂದಲೋ, ಸಮುದ್ರದಿಂದಲೋ ಅಪೇಕ್ಷಿತವಾದ ಧನಗಳ ಧಾರೆಗಳು ಪ್ರಾರ್ಥಿಸಿದುದಕ್ಕಿಂತ ಹೆಚ್ಚು ಹೆಚ್ಚಾಗಿ ಹೊರ ಬರುತ್ತದೆ.)

ವೇದಾಂತ ದೇಶಿಕರು. ಭಕ್ತಿ ಪೂರ್ವಕವಾಗಿ ಪ್ರಾರ್ಥಿಸಿದಂತೆಯೇ ಕನಕಧಾರೆಯೇ ಸುರಿಯಿತು. ಬ್ರಹ್ಮಚಾರಿಯ ಅಪೇಕ್ಷೆಗಿಂತ ಎಷ್ಟೋ ಹೆಚ್ಚಾದ ಧನವು ದೊರೆಯಿತು. ದೇಶಿಕರು ಅವನಿಗೇ ಅದನ್ನೆಲ್ಲಾ ಕೊಟ್ಟು ಆಶೀರ್ವದಿಸಿ ಕಳಿಸಿದರು.ಮಹಾಲಕ್ಷ್ಮಿಯನ್ನು ಶ್ರೀ ಸ್ತುತಿಯಿಂದ ಸ್ತೋತ್ರಮಾಡಿ ದೇಶಿಕರು ಎಲ್ಲರೆದುರಿಗೆ ಕನಕ ವರ್ಷವೇ ಸುರಿಯುವಂತಾದ್ದರಿಂದ ಈ ಸ್ತೋತ್ರ ಕನಕ ಧಾರಲಕ್ಷ್ಮೀ ಸ್ತೋತ್ರವೆಂದೇ ಪ್ರಸಿದ್ಧಿಯಾಯಿತು. ಇಂದಿಗೂ ಈ ಸ್ತೋತ್ರ ಪಠಣೆಯಿಂದ ಸರ್ವ ಸಂಪತ್ತುಗಳೂ ಲಭಿಸುತ್ತವೆ.

## ಶ್ರೀಶ ಗುಣದರ್ಪಣ ಸ್ತೋತ್ರ

ದ್ವೈತ ಮತ ಸಿದ್ಧಾಂತ ಪರಂಪರೆಯಲ್ಲಿ ಶ್ರೀ ವಾದಿರಾಜ ಗುರುಸಾರ್ವಭೌಮರದು ಮೇರು ಸದೃಶ ಸ್ಥಾನ, ವ್ಯಕ್ತಿತ್ವ, ಅವರು ದ್ವೈತ ಮತಾಕಾಶದಲ್ಲಿ ಪ್ರಜ್ವಲಿಸಿದ ಧ್ರುವತಾರೆ. ವಾದಿರಾಜರಿಂದ ವಿರಚಿತವಾದ ಉದ್ದಾಮ ಸಂಸ್ಕೃತ ಗ್ರಂಥಗಳು, ಅವರ ಪ್ರತಿಭೆ, ಪಾಂಡಿತ್ಯಗಳ ಮಹೋನ್ನತ ಕೀರ್ತಿ ಪತಾಕೆಯಂತೆ ಮಧ್ವ ಸಿದ್ಧಾಂತದ ಬಾನಂ ಗಣದಲ್ಲಿ ಹಾರಾಡುತ್ತಿವೆ. ವಾದಿರಾಜರು ಬಹು ಸುಂದರವಾದ ಭಾವಾರ್ಥಪೂರ್ಣವಾದ, ಸುಭಗೆ ವಾಗ್ವಿಲಾಸದಿಂದ ಕೂಡಿದ ಸುಮಾರು 50ಕ್ಕೂ ಹೆಚ್ಚು ಸಂಖ್ಯೆಯ ಸಂಸ್ಕೃತ ಶ್ಲೋಕಗಳನ್ನು ರಚಿಸಿದ್ದಾರೆ. ಮಾಧ್ವ ವಾಙ್ಮಯದಲ್ಲಿ ಸ್ತೋತ್ರ ಸಾಹಿತ್ಯದ ಕೊರತೆ ನೀಗಿಸಿದ ಹಿರಿಮೆ ವಾದಿರಾಜರದು.

ವಾದಿರಾಜರಿಂದ ರಚಿತವಾದ ಲಕ್ಷ್ಮೀದೇವಿಯ ಪರವಾದ ಶ್ರೀಶಗುಣ ದರ್ಪಣ ಸ್ತೋತ್ರ ಕನಕಧಾರಾ ಲಕ್ಷ್ಮೀ ಸ್ತೋತ್ರವೆಂದೇ ಪ್ರಸಿದ್ಧವಾಗಿದೆ. ವಾದಿರಾಜರ ಶ್ರೀಶ ಗುಣ ದರ್ಪಣ ಸ್ತೋತ್ರರತ್ನ ಎನಿಸಿದ ಶ್ರೀ ಹರಿಯನ್ನು ಒಟ್ಟಿಗೆ ಸ್ತುತಿಸುವ ಸ್ತೋತ್ರರತ್ನ. ಶ್ರೀ ಎಂದರೆ ಲಕ್ಷ್ಮೀದೇವಿ. ಶ್ರೀಶ ಎಂದರೆ ಅವಳಿಗೆ ಒಡೆಯನಾದ ಶ್ರೀಮನ್ನಾರಾಯಣ. ದರ್ಪಣ ಎಂದರೆ ಕನ್ನಡಿ. ಅವರಿಬ್ಬರ ಗುಣಗಳನ್ನು, ಮಹಿಮೆಗಳನ್ನು ಒಡನೊಡನೆ ಕೊಂಡಾಡುವುದರಿಂದ ಇದು ಶ್ರೀಶಗುಣ ದರ್ಪಣ ಸ್ತೋತ್ರವೆಂದು ಹೆಸರಾಗಿದೆ.

ಒಂದು ಐತಿಹ್ಯದ ಪ್ರಕಾರ ಒಬ್ಬ ದಟ್ಟ ದರಿದ್ರ ಬ್ರಾಹ್ಮಣನು ಸಾಲಗಳಿಂದ ಬಹುವಾಗಿ ಪೀಡಿತನಾಗಿ ಋಣ ಪರಿಹಾರವಾಗುವಂತೆ ಅನುಗ್ರಹಿಸಬೇಕೆಂದು ವಾದಿರಾಜರನ್ನು ಬಹುಬಗೆಯಾಗಿ ಬೇಡಿಕೊಳ್ಳುತ್ತಿದ್ದನು.ಅವನ ಸಲುವಾಗಿ ಗುರುಗಳು ಈ ಸ್ತೋತ್ರದಿಂದ ಸಂಪದಭಿಮಾನಿಯಾದ ಮಹಾಲಕ್ಷ್ಮೀ ದೇವಿಯನ್ನು ಸ್ತುತಿಸಿದರು.

ಯಾ ಸುಗಂಧಾಸ್ಯನಾಸಾದಿ ನವದ್ವಾರಾಖಿಲೇನ ಯಾ
ಧುರಾಧರ್ಷ ಸರ್ವಸಸ್ಯೋದಯಾರ್ಥಂ ಯಾಕರೀಷಿಣಿ..
ಯಾನಿತ್ಯಪುಷ್ಟಾ ಸರ್ವಾಂಗ್ಯೆ ಸೌಂದರ್ಯಾದಿ ಗುಣೈರಪಿ
ಈಶ್ವರೀಂ ಸರ್ವಭೂತಾನಾಂ ತಾಮಿಹೋ ಪಹ್ವಯೋ ಶ್ರೀಯಮ್ ॥೨॥

ಎಂದು ಪ್ರಾರಂಭವಾದ ಸ್ತೋತ್ರಲಹರಿ 19 ಶ್ಲೋಕ ಗಳಲ್ಲಿ ಭಕ್ತಿ ಭಾವಪೂರ್ಣವಾಗಿ ಪ್ರವಹಿಸಿತು. ಅದ ರಿಂದ ಪ್ರಸನ್ನಳಾದ ಸುಪ್ರೀತಳಾದ ದೇವಿ ಕನಕ ವೃಷ್ಟಿಯನ್ನೇ ಕರೆದಳು. ವಾದಿರಾಜರು ಅದನ್ನೆಲ್ಲಾ ಸ್ವೀಕರಿ ಸುವಂತೆ ಆ ಬ್ರಾಹ್ಮಣನಿಗೆ ಅಪ್ಪಣೆ ಕೊಟ್ಟರು. ಆ ದರಿದ್ರನು ಮಹಾಪ್ರಸಾದವೆಂದು ಪರಮಾನಂದದಿಂದ ಅದನ್ನು ತೆಗೆದುಕೊಂಡು ಋಣಮುಕ್ತನಾದನು. ಅಂದಿನಿಂದ ಈ ಸ್ತೋತ್ರ ಕನಕಧಾರ ಲಕ್ಷ್ಮೀ ಸ್ತೋತ್ರವೆಂದು ಪ್ರಸಿದ್ಧವಾಗಿದ್ದು ಅಸಂಖ್ಯಾತ ಭಕ್ತರು ಇದನ್ನು ಪಠಿಸಿ, ಪಾರಾಯಣ ಮಾಡಿ ಐಶ್ವರ್ಯ ಪಡೆದಿರುತ್ತಾರೆ.

ಈ ಕೃತಿಗೆ ಒಂದು ಐತಿಹಾಸಿಕ ಹಿನ್ನೆಲೆಯೂ ಉಂಟು. ಅಚ್ಯುತರಾಯನೆಂಬ ಅರಸನು ವಿಜಯನಗರ ಸಾಮ್ರಾಜ್ಯವನ್ನು ಆಳುತ್ತಿದ್ದ ಕಾಲ.ಪ್ರಕೃತಿ ವಿಕೋಪದಿಂದ ದೇಶವು ಬರಗಾಲದಿಂದ ಪೀಡಿತವಾಯಿತು.ದೇಶ ಸಂಪತ್ತು ದಿನೇ ದಿನೇ ಕಡಿಮೆಯಾಗತೊಡಗಿತು. ರಾಜನೂ ಪ್ರಜೆಗಳೂ ಬಹಳ ಕಷ್ಟಗಳಿಗೆ ಒಳಗಾದರು. ಕಂಗೆಟ್ಟ ರಾಜನು ವಾದಿ ರಾಜರನ್ನು ಶರಣು ಹೊಂದಿ ಸಂಕಷ್ಟಗಳಿಗೆ ಪಾರುಮಾಡ ಬೇಕೆಂದು ಬೇಡಿಕೊಳ್ಳಲು ಗುರುಗಳು ದಯಾರ್ದ್ರ ಹೃದಯ ರಾಗಿ ಶ್ರೀ ಶಗುಣದರ್ಪಣ ಸ್ತೋತ್ರವನ್ನು ರಾಜನಿಗೆ ರಚಿಸಿ ಕೊಟ್ಟರು. ಇದನ್ನು ರಾಜನು ತಾನು ಪಠಣೆ ಮಾಡಿ ಸದ್ ಬ್ರಾಹ್ಮಣರಿಂದ ನಿರಂತರವಾಗಿ ಪಾರಾಣ ಮಾಡಿ ಸಲು ರಾಜನ ಭಂಡರದಲ್ಲಿ ಕನಕವೃಷ್ಟಿಯಾಗಿ ರಾಜ್ಯವು ಸುಭಿಕ್ಷವಾಯಿತು.

**ವೇದಾಂತ ದೇಶಿಕರು. ಭಕ್ತಿ ಪೂರ್ವಕವಾಗಿ ಪ್ರಾರ್ಥಿಸಿದಂತೆಯೇ ಕನಕಧಾರೆಯೇ ಸುರಿಯಿತು. ಬ್ರಹ್ಮಚಾರಿಯ ಅಪೇಕ್ಷೆಗಿಂತ ಎಷ್ಟೋ ಹೆಚ್ಚಾದ ಧನವು ದೊರೆಯಿತು. ದೇಶಿಕರು ಅವನಿಗೇ ಅದನ್ನೆಲ್ಲಾ ಕೊಟ್ಟು ಆಶೀರ್ವದಿಸಿ ಕಳಿಸಿದರು.ಮಹಾಲಕ್ಷ್ಮಿಯನ್ನು ಶ್ರೀ ಸ್ತುತಿ ಯಿಂದ ಸ್ತೋತ್ರಮಾಡಿ ದೇಶಿಕರು ಎಲ್ಲರೆದುರಿಗೆ ಕನಕ ವರ್ಷವೇ ಸುರಿಯುವಂತಾದ್ದರಿಂದ ಈ ಸ್ತೋತ್ರ ಕನಕ ಧಾರಲಕ್ಷ್ಮೀ ಸ್ತೋತ್ರವೆಂದೇ ಪ್ರಸಿದ್ಧಿಯಾಯಿತು.**

ಘೃತಪ್ರತೀಕಾಂ ತಾಂ ನಿತ್ಯಂ ಘೃತಪೂರ್ಣ
ನ್ನದಾ ಯಿನೀಂ ಯಥೇಷ್ಟೆ ವಿತ್ತದಾತ್ರೀಂ
ನತೋ ಸ್ಮ್ಯ ಭಯದಾಂ ಶ್ರಿಯಮ್॥
ವಾದಿರಾಜೇನ ರಚಿತಂ ಶ್ರೀ ಶ್ರೀಶಗುಣದರ್ಪಣಮ್
ಇಮಂ ಸ್ತ ವಂ ಪಠನ್ ಮರ್ತ್ಯಃ ಶ್ರೀಮಾನ್ಸ್ಯಾನಾತ್ರ ಸಂಶಯಃ

ಶ್ರೀ ವಾದಿರಾಜಯತೀಂದ್ರ ರಚಿತವಾದ ಶ್ರೀಶ ಗುಣ ದರ್ಪಣ ಸ್ತೋತ್ರ ಅತ್ಯಂತ ಮಹಿಮಾನ್ವಿತವೂ ವಾದಿರಾಜರ ತಪಶಕ್ತಿ ಪೂರ್ಣವೂ ಆದುದು. ಈ ಸ್ತೋತ್ರವನ್ನು ಪಠಣೆ ಪಾರಾಯಣ ಮಾಡುವವನು ಯಥೇಚ್ಛವಾಗಿ ಸಂಪತ್ತನ್ನು ಉಳ್ಳವನಾಗುತ್ತಾನೆ. ಈ ವಿಷಯದಲ್ಲಿ ಸ್ವಲ್ಪವೂ ಸಂಶಯ ವಿಲ್ಲ ಎಂದು ಫಲಶ್ರುತಿಯಲ್ಲಿ ವಾದಿರಾಜರೇ ಹೇಳಿರುತ್ತಾರೆ. ಶ್ರೀಶಿಗುಣದರ್ಪಣ ಸ್ತೋತ್ರದ ಪಠಣಿ ಶ್ರೀಕರ, ಶುಭಕರ, ಶ್ರೇಯಸ್ಕರ, ಸರ್ವ ಸಂಪತ್ಕರ.

ಹೀಗೆ ಈ ಮೂರು ಕನಕಧಾರಾ ಲಕ್ಷ್ಮೀ ಸ್ತೋತ್ರಗಳು ರಚಿಸಿದವರು ತಪಶಕ್ತಿಯಿಂದಲೂ, ಮಂತ್ರಸಿದ್ಧಿಯಿಂದಲೂ ಭಕ್ತಿಯಿಂದಲೂ ಬಹು ಮಹಿಮಾ ಸಂಪನ್ನವಾಗಿವೆ.ಈ ಸ್ತೋತ್ರಗಳನ್ನು ಪಠಣೆಮಾಡುವಾಗ ಹಿನ್ನೆಲೆಯ ಕತೆಗಳನ್ನ ರಿತು. ಅದನ್ನು ರಚಿಸಿದವರ ಮಂತ್ರ ಸಿದ್ಧಿಯನ್ನು ಮನಸ್ಸಿಗೆ ತಂದುಕೊಂಡು ಅದು ತೋರಿದ ಮಹಿಮೆಯನ್ನು ತಿಳಿದು ಪಠಿಸಿದರೆ ಶ್ರದ್ಧೆ ಹೆಚ್ಚುತ್ತದೆ. ಅದನ್ನು ರಚಿಸಿದವರ ತಪಶಕ್ತಿಯ ಪ್ರಸಾದವೂ ನಮ್ಮ ಮೇಲೆ ಹರಿದು ಬಂದು ದೇವಾನುಗ್ರಹ ಶೀಘ್ರವಾಗಿ ದೊರೆಯುತ್ತದೆ. ಸ್ತೋತ್ರ ಪಠಣೆ ಎಂದಿಗೂ ನಿಷ್ಫಲ ವಲ್ಲ. ನಮ್ಮನ್ನು ಕಾಪಾಡುವುದಲ್ಲದೆ ನಮ್ಮ ಸಂತಾನವನ್ನೂ ಕಾಪಾಡುತ್ತದೆ. ಜನ್ಮ ಜನ್ಮಾಂತರಗಳಲ್ಲೂ ನಮ್ಮೊಡ ನಿದ್ದು ನಮ್ಮನ್ನು ರಕ್ಷಿಸುತ್ತದೆ. ಅದುವೇ ಸ್ತೋತ್ರ ಪಠಣೆಯ ಸಾಧನೆ. ಸಿದ್ಧಿ, ಸಮೃದ್ಧಿ.



# ಮೊದಲಕಲ್ಲು ಶ್ರೀ ಶೇಷದಾಸರು (ಕ್ರಿ.ಶ. 1817 - 1885)

- ಡಾ॥ ರಾಮಚಂದ್ರ ದಾಸ್ ಸಿ.ಜೆ
9483384584



ಭಾರತೀಯ ಇತಿಹಾಸಗಳ ಅಸ್ಥಿಭಾರವು ಧರ್ಮದ ತಳಗಲ್ಲಿನ ಮೇಲೆ ಕಟ್ಟಲ್ಪಟ್ಟಿರುವುದರಿಂದ, ಸ್ಥಳ ಪುರಾಣಗಳಾಧಾರ, ಪುರಾತನ ಊರುಗಳನ್ನು ಕ್ಷೇತ್ರವೆಂದು, ಭಕ್ತಿ ಭಾವದಿಂದ ಜೀವಂತವಾಗಿರಿಸಿವೆ. ಇವುಗಳ ಪೈಕಿ "ಆದಿಶಿಲಾ" (ಮೊದಲು ಕಲ್ಲು) ಗದ್ವಾಲ ಸಂಸ್ಥಾನದಲ್ಲಿ, ಕೃಷ್ಣಾ, ತುಂಗಭದ್ರ ನದಿಗಳ ಮಧ್ಯಭಾಗದಲ್ಲಿದೆ, ಈ ಸ್ಥಳದಿಂದ ಅನತಿ ದೂರದಲ್ಲಿರುವ ದರೂರಿನಲ್ಲಿ ಸುಮಾರು ಕ್ರಿ.ಶ. 1817 (ಸಂಶೋಧಿಸಬೇಕಾಗಿದೆ) ರಲ್ಲಿ ಜನ್ಮ ತಾಳಿದವರು, ಅರ್ಜುನಾಂಶ ಸಂಭೂತರಾದ ಶ್ರೀ ಮೊದಲ ಕಲ್ಲು ಶೇಷದಾಸರು, ಇವರು ವೃತ್ತಿಯಲ್ಲಿ ಕುಲಕರಣಿಯಾಗಿದ್ದು, ಸದಾ ನಿರ್ಮಲ ಮತ್ತು ಗರಿಮುರಿಯಾದ ಜರತಾರಿಯ ಧೋತ್ರ, ನಿಲುವಂಗಿ, ಮತ್ತು ರುಮಾಲು ಧರಿಸುವುದು ಇವರಿಗೆ ವಾಡಿಕೆಯಾಗಿತ್ತು. ದಾನ ಶೌಂಢನೆಂಬ ಹೆಸರುಗಳಿಸಿ, ಬಹಳ ಜನಾನುರಾಗಿಯಾಗಿ ಬಾಳಿದವರು. ಇವುಗಳೇ ಅವರ ವೈರಾಗ್ಯ ಪ್ರಾಪ್ತಿಗೆ ಕಾರಣವಾಗಿದ್ದುದು ಭಗವತ್ಸಂಕಲ್ಪ. ಹರಿದಾಸ ಪೀಳಿಗೆಯಲ್ಲಿ ನಿರ್ಭಯವಾಗಿ ತಮ್ಮ ಸ್ವರೂಪಲಕ್ಷಣಗಳನ್ನು ವ್ಯಕ್ತ ಪಡಿಸಿದವರಲ್ಲಿ, ಶ್ರೀ ಮೊದಲ ಕಲ್ಲು ಶೇಷದಾಸರೊಬ್ಬರೇ, ಎಂದರೆ ಅತಿಶಯೋಕ್ತಿಯಲ್ಲ. ತಾವು ಇಂದ್ರಾಂಶರಾದ ಪಾರ್ಥನೆಂದು ತಮ್ಮ ಸುಳಾದಿಗಳಲ್ಲಿ ಶ್ರೀ ಕೃಷ್ಣ ಮತ್ತು ವಾಯುದೇವರ ಸಖ್ಯ ಮತ್ತು ಅನುಗ್ರಹದ ದೃಷ್ಟಾಂತಗಳನ್ನು ಸ್ಪಷ್ಟಪಡಿಸಿದ್ದಾರೆ.

ವಿಶಾಲಮನೋಭಾವದ, ಗೃಹಸ್ಥರಾದ ಶೇಷದಾಸರನ್ನು, ಆಗಿನ ಗದ್ವಾಲ ರಾಜ ಮನೆತನದ ದತ್ತು ಕುಮಾರನಾದ ಸೋಮ ಭೂಪಾಲನು, ಅವಮಾನಿಸಿ ರುಮಾಲು ಕೆಳಗುರುಳುವಂತೆ ಹೊಡೆಸಿದರ ಪರಿಣಾಮ, ಲೌಕಿಕವನ್ನು ತೊರೆದು, ಚಿಂತರವೇಲಿಯಲ್ಲಿರುವ ಮುಖ್ಯಪ್ರಾಣನ ಸೇವೆಯಲ್ಲಿ ನಿರತರಾದರು. ಬೇವಿನ ಸೊಪ್ಪನ್ನು ತಿಂದು, ಒಂಟಿಕಾಲಿನಲ್ಲಿ ನಿಂತು,ತಪಸ್ಸು ಮಾಡುತ್ತಿದ್ದರು. ದಿನದಿಂದ ದಿನಕ್ಕೆ ತಪಸ್ಸು ಕಠಿಣವಾಗುತ್ತಾ, ನಿರಾಹಾರದಿಂದ ಮಂತ್ರ ಪುನಶ್ಚರಣೆ ಮಾಡುತ್ತಿದ್ದರು. ಒಂದು ದಿನ ಸ್ವಪ್ನದಲ್ಲಿ, ಕೈಯಲ್ಲಿ ತಂಬೂರಿಯನ್ನು ಹಿಡಿದು ನಿಂತ ಭವ್ಯ ರೂಪ ಗೋಚರವಾಗಿ, ಶೇಷದಾಸರನ್ನು ಕುರಿತು, ನೀನಿಷ್ಟು ದೇಹದಂಡನೆ ಮಾಡಬೇಡ, ಸ್ವಲ್ಪಕಾಲದಲ್ಲಿಯೇ ನಿನ್ನ ಇಷ್ಟಾರ್ಥವು ಸಿದ್ಧಿಸುವುದು ಎಂದು ಹೇಳಿದಂತಾಯಿತು. ಹೀಗೆ ಹೇಳಿದವರು ಯಾರು ಎಂಬುದೇ ಅವರಿಗೆ ತಿಳಿಯದಾಯಿತು. ಮೂರು ನಾಲ್ಕು ದಿನಗಳ ನಂತರ, ಶೇಷದಾಸರು ವಿಶೇಷವಾಗಿ ಭಕ್ತಿ ಮಾಡುತ್ತಿದ್ದ ಶ್ರೀ ಯಳ ಮೇಲಿ ಹಯಗ್ರೀವಾಚಾರ್ಯರು, ಸ್ವಪ್ನದಲ್ಲಿ ದರ್ಶನವಿತ್ತು."ವಿಜಯರಾಯರ ಮಾತನ್ನು ಅನಾದರ ಮಾಡಬೇಡ, ಏಕ ಭುಕ್ತದಿಂದ ಉಪಾಸನೆ ಮಾಡು, ಪ್ರಾಣ ಪತಿಯು ಒಲಿಯುವನು. ನಿನಗೆ ಊಣ ಬಡಿಸುವುದಕ್ಕೆ ಭಕ್ತನೊಬ್ಬನು ತಾನಾಗಿ ಬರುವನು" ಎಂದು ಹೇಳಿ ಅದೃಶ್ಯರಾದರು. ಅವರು ಹೇಳಿದಂತೆ ಮರುದಿನ ತಿಮ್ಮಪ್ಪನೆಂಬ ಗೃಹಸ್ಥನು. ನಾನು ತಮ್ಮಸೇವೆ ಮಾಡುವುದಕ್ಕೆ ಬಂದಿದ್ದೇನೆ, ಎಂದು ಅವರಿಗೆ ನಮಸ್ಕರಿಸಿದನು.

ಚಿಂತರ ವೇಲಿಗೆ ದೇವರ ದರ್ಶನದ ಜೊತೆಗೆ ಶೇಷದಾಸರ ದರ್ಶನಕ್ಕೆ ಬರುವವರ ಸಂಖ್ಯೆ ವೃದ್ಧಿಸತೊಡಗಿತ್ತು. ಹಾಗೆಯೇ ಬಂದಿರುವ ಬ್ರಾಹ್ಮಣರಿಗೆ ಭೋಜನದ ವ್ಯವಸ್ಥೆಯ ಭಾರವು ತಿಮ್ಮಪ್ಪನ ಮೇಲೆ ಬಿದ್ದಿತು. ಬರಬರುತ್ತಾ ಸಾರ್ವಜನಿಕ ಭೋಜನ ವ್ಯವಸ್ಥೆಯು ನಿರ್ಮಾಣವಾಯಿತು. ನಂತರದಲ್ಲಿ ರಾಣಿ ವೆಂಕಟಲಕ್ಷ್ಮಮ್ಮಣ್ಣಿಯು ತಾನೇ ಭೋಜನ ವ್ಯವಸ್ಥೆಯ ಭಾರವನ್ನು ವಹಿಸಿಕೊಂಡಳು. ಕೆಲ ಕಾಲಾನಂತರ, ವಿಜಯರಾಯರ ಜನ್ಮಸ್ಥಳವಾದ ಚೀಕಲಪರವಿಯಲ್ಲಿ ಅಶ್ವತ್ಥನರಸಿಂಹನ ಸೇವೆ ಮಾಡಿ, ನಂತರ ಚಿಪ್ಪಗಿರಿಯಲ್ಲಿ ಸೇವಾ ಸಮಯದಲ್ಲಿ, ವಿಜಯರಾಯರು ನಿಜರೂಪದಿಂದ ದರ್ಶನವಿತ್ತು." ಶೇಷಪ್ಪಾ, ನಿನ್ನ ಅಧಿಕಾರ ದೊಡ್ಡದು (ಏಕೆಂದರೆ ಅವರು ದೇವರಾಜನಾದ ಇಂದ್ರದೇವರು), ಹಿಂದಿನ ಎರಡು ಜನ್ಮಗಳಲ್ಲಿ (1. ಶ್ರೀ ವೈಕುಂಠದಾಸರು,2. ಪಂಗನಾಮದ ತಿಮ್ಮಣ್ಣನವರು) ಭಗವದ್ದರ್ಶನ ಮಾಡಿದ್ದರೂ,ಅದು ನಿನಗೆ ಕೇವಲ ಬಾಹ್ಯಾಪರೋಕ್ಷವಾಗಿತ್ತು. ಬಿಂಬಾಪರೋಕ್ಷವಾದರೆ ಮಾತ್ರ ಅದು ಜನ್ಮ ಜನ್ಮಾಂತರಗಳಲ್ಲೂ ಸಹಾಯವಾಗುತ್ತದೆ. ಬಿಂಬಾಪರೋಕ್ಷದಿಂದ ಜನ್ಮ ಬಂಧನಗಳಿಲ್ಲ, ಇಚ್ಚಾಮಾತ್ರದಿಂದ ಆತನು ಜನ್ಮವೆತ್ತಿದ್ದರೂ, ಅವನ ಜ್ಞಾನಕ್ಕೆ ಲೋಪ ಬರುವುದಿಲ್ಲ. ನಿನಗೆ ಅಂಕಿತಕೊಟ್ಟು ನಿನ್ನನ್ನು ಹರಿದಾಸನನ್ನಾಗಿ ಮಾಡುವ ಕೆಲಸ ಮಾತ್ರ ನಮ್ಮ ಪಾಲಿಗೆ ಬಂದಿದೆ. ವಿಜಯವಿಠಲ ಪರಮಾತ್ಮನು ನಿನಗೆ ಗುರು ವಿಜಯವಿಠಲ" ಎಂಬ ಅಂಕಿತವನ್ನು ಕರುಣಿಸಿದ್ದಾನೆ. ನೀನು ಚಕ್ರತೀರ್ಥದಲ್ಲಿ, ನವವೃಂದಾವನದಲ್ಲಿ ಮತ್ತು ಮಹಾರುದ್ರದೇವರ (ಇಂದ್ರದೇವರಿಗೆ, ರುದ್ರ ದೇವರು ಗುರುಗಳು) ಉಪಾಸನೆಯಿಂದ ಈ ಜನ್ಮದಲ್ಲೇ ನಿನಗೆ ಬಿಂಬಾಪರೋಕ್ಷವಾಗುತ್ತದೆ. ನೀನು ಪ್ರಖ್ಯಾತ ಹರಿದಾಸನಾಗುವಿ" ಎಂದು ಅನುಗ್ರಹಿಸಿದರು.

ವಿಜಯರಾಯರ ಆಜ್ಞೆಯಂತೆ, ಚಕ್ರತೀರ್ಥದಲ್ಲಿ ಮುಖ್ಯಪ್ರಾಣನನ್ನು ಸ್ತುತಿಸುವ " ನಂಬಿದೆ ನಿನ್ನ ಪಾದ ಮುಖ್ಯಪ್ರಾಣ...." ಎನ್ನುವ ಕೃತಿಯೇ, ಗುರುವಿಜಯವಿಠಲದಾಸರ (ಮೊದಲಕಲ್ಲು ಶೇಷದಾಸರು) ಪ್ರಥಮ ಕೃತಿಯಾಯಿತು. ಪ್ರಾಣದೇವರ ಆಜ್ಞೆಯಂತೆ, ಚಿಂತರವೇಲಿಯಿಂದ ಮೊದಲಕಲ್ಲು (ಆದಿಶಿಲಾ) ಕ್ಷೇತ್ರಕ್ಕೆ ಬಂದು, ಅಲ್ಲಿ ಶ್ರೀನಿವಾಸ ಮತ್ತು ರುದ್ರದೇವರ ಉಪಾಸನೆಗೆ ತೊಡಗಿದರು. ಚಿಂತರವೇಲಿ ಬಿಡುವ ಸಮಯದಲ್ಲಿ "ಘನ ದಯಾನಿಧಿಯಾದ ಪವನ ರಾಯನೆ ನಮೋ...." ಎಂಬ ಸುಳಾದಿ ರಚಿಸಿದ್ದರು. ಸರಿ ರಾತ್ರಿಯಲ್ಲೂ ಅವರ ತಪಸ್ಸು ಮುಂದುವರೆದಿರುತ್ತಿತ್ತು. ಆ ಸಮಯದಲ್ಲಿ ತಿಮ್ಮಪ್ಪನ ಹೊರತು ಪಡಿಸಿ ಯಾರೂ ಇರುತ್ತಿರಲಿಲ್ಲ. ಆ ಸಮಯದಲ್ಲಿ ಸರ್ಪಗಳು ದಾಸರ ಕತ್ತಿನಲ್ಲಿ ಸುತ್ತಿಕೊಂಡು ಆಟವಾಡುತ್ತಿದ್ದವು. ಹಾಗೆಯೇ ರುದ್ರದೇವರ ದೇವಸ್ಥಾನದ ಬಾಗಿಲಬಳಿ ಹುಲಿಯು ಕಾದು ನಿಂತಿರುತ್ತಿತ್ತು. ದಾಸರು ಸಮಾಧಿ ಸ್ಥಿತಿಯಿಂದ ಬಹಿರ್ಮುಖರಾದಾಗ ಸರ್ಪಗಳ ಮೈದಡವಿ, ಹುಲಿಯ ಹಣೆಗೆ ಅಂಗಾರಹಚ್ಚಿ, ಅಲ್ಲಿಂದ ಹೊರಡುವಂತೆ ಸೂಚಿಸುತ್ತಿದ್ದರು. ಮುಸಲ್ಮಾನ ಅಧಿಕಾರಿಗೆ, ಪೂರ್ವ ಜನ್ಮದಲ್ಲಿ ಸಾವಿರಾರು ಪ್ರಾಣಿಗಳ ಪುಂಸ್ತ್ವಹರಣ ಮಾಡಿದ್ದರ ಪಾಪದ ಪರಿಣಾಮದಿಂದ, ಈ ಜನ್ಮದಲ್ಲಿ ಸುಂದರಳಾದ ಪತ್ನಿ ಇದ್ದರೂ ಸುಖ ಪಡದೆ, ಮನೋರೋಗ ಪೀಡಿತನಾಗಿದ್ದು, ಅವನ ರೋಗ ಇತ್ಯಾದಿಗಳನ್ನು ಪರಿಹರಿಸಿದರು. ಮಹಬೂಬ್‌ನಗರದಲ್ಲಿ ತಾಲೂಕುದಾರನಾಗಿದ್ದ ಹನುಮಂತ ರಾಯನ ಪತ್ನಿಗೆ ಬಂದಿದ್ದ ಪಿಶಾಚ ಬಾಧೆಯನ್ನು ಪರಿಹರಿಸಿದರು. ದಾಸರು ಬೆಟ್ಟದಲ್ಲಿ ವಾಸಮಾಡುತ್ತಿರುವಾಗ, ಅವರನ್ನು ಸುಲಿಗೆ ಮಾಡಬೇಕೆಂದು ಹೊಂಚಹಾಕಿದ ಕಳ್ಳರಿಗೆ, ಕಣ್ಣು ಕಾಣದಂತಾಗಿ ನಿರುಪಾಯರಾಗಿ ಏನೂ ತೋರದೆ, ರಾತ್ರಿಯೆಲ್ಲ ನರಳಿದ ಕಳ್ಳರಿಗೂ, ಕಣ್ಣು ಬರುವಂತೆ ಮಾಡಿ, ತಮ್ಮ ಆಭರಣಗಳನಿತ್ತು, ಅವರನ್ನು ಸನ್ಮಾರ್ಗಕ್ಕೆ ತಂದಂಥವರು. ದಾಸರ ಶಿಷ್ಯನಾದ, ಕೊಪ್ಪಳದ ಇಲಾಖೆಗೆ ಸೇರಿದ ಪೇಷ್ಕಾರ ವೆಂಕಟರಾಯನಿಗೆ, ಕಾಶಿಯಾತ್ರೆ ಮತ್ತು ಗಂಗಾಸ್ನಾನ, ತಾವು ಇದ್ದಲ್ಲಿಯೇ ಮಾಡಿಸಲು, ಒಮ್ಮೆ ತುಂಗಭದ್ರೆದಲ್ಲಿ ಭಾಗೀರಥಿಯು ಪ್ರವೇಶಿಸುವ ಕರ್ಕಾಟಕ ಸಂಕ್ರಮಣದ ಪವಿತ್ರ ಸಮಯದಲ್ಲಿ, ದಾಸರು ಶ್ರೀನಿವಾಸನ ದೇವಾಲಯದ ಗರ್ಭಗುಡಿಯಲ್ಲಿ ಕುಳಿತು, ಗಂಗಾದೇವಿಯನ್ನು ಮತ್ತು ಅಂತರ್ಯಾಮಿಯಾದ ಬಿಂಬರೂಪಿ ಶ್ರೀಹರಿಯನ್ನು ಸ್ಮರಿಸುತ್ತಾ ಧ್ಯಾನಾಸಕ್ತರಾಗಿ ಕುಳಿತ್ತಿದ್ದರು. ಆ ಸಮಯದಲ್ಲಿ ವೇಂಕಟೇಶನ ಪಾದದಿಂದ ಬುಳಬುಳನೆ ಬಿಳಿಯ ಬಣ್ಣದ ಜಲವು ಹರಿದು ಬರಲಾರಂಭಿಸಿತು. ಪದ್ಮಾಸನಾಸೀನರಾಗಿ ಕುಳಿತಿದ್ದ ದಾಸರ ವಸ್ತ್ರಗಳು ತೋಯ್ದುವು .ಹಾಗೆಯೇ ವೆಂಕಟರಾಯ, ಅವನ ಅನುಯಾಯಿಗಳು ಹಾಗೂ ಮೊದಲ ಕಲ್ಲಿನಲ್ಲಿನ ದಾಸರ ಶಿಷ್ಯರೆಲ್ಲರಿಗೂ ಗಂಗಾಜಲ ಪ್ರೋಕ್ಷಿಸಿ ಕಾಶಿಯಾತ್ರೆ ಮತ್ತು ಗಂಗಾಸ್ನಾನದ ಫಲವನ್ನು ನೀಡಿದಂಥ ಮಹಾಮಹಿಮರು. ಈ ಗಂಗಾವತರಣವನ್ನು ಪ್ರತ್ಯಕ್ಷನೋಡಿದ ಕೆಲವರು , ಈಗ್ಗೆ ಕೆಲವು ದಶಕಗಳವರೆಗೆ ಇದ್ದರೆಂಬುದು ವಿಶೇಷ.

ದಾಸರು ತಮ್ಮ ಜನ್ಮಸ್ಥಳವಾದ ದರೂರಿನಲ್ಲಿ, ತಮ್ಮ ಜ್ಞಾಪಕಾರ್ಥವಾಗಿ, ತಾವು ಅರ್ಜುನನಾಗಿ ಅವತರಿಸಿದಾಗ ಎಡೆಬಿಡದೆ ತಮ್ಮನ್ನು ರಕ್ಷಿಸಿದ ಪಾರ್ಥಸಾರಥಿಯನ್ನು ಪ್ರತಿಷ್ಠಾಪಿಸಿದರು. 'ಪ್ರತಿಮಾಯಾಂತು ಸಾನಿಧ್ಯಂ ! ಅರ್ಚಕಸ್ಯ ತಪೋಬಲಾತ್" ಎಂಬ ಪ್ರಮಾಣದಂತೆ, ಸ್ವತಃ ಅರ್ಜುನನಾಗಿ ತಾವು ಅವತರಿಸಿದಾಗ, ತಮ್ಮನ್ನು ಎಡೆಬಿಡದೆ ರಕ್ಷಿಸಿದ ಪಾರ್ಥಸಾರಥಿಯಾದ ಶ್ರೀ ಕೃಷ್ಣನು ಸ್ವತಃ ಶೇಷದಾಸರು ಕರೆದಾಗ ಬಾರದಿರುವನೇ? ತಮ್ಮ ಮಕ್ಕಳಾದ ಭೀಮದಾಸರು ಮತ್ತು ಗೋವಿಂದದಾಸರಿಗೆ ಅಂಕಿತೋಪದೇಶ ಮಾಡಿ ಅನುಗ್ರಹಿಸಿದರು. ಖಜಾನೆದಾರ ಶ್ರೀನಿವಾಸರಾಯನು ದಾಸರ ಶಿಷ್ಯರಲ್ಲಿ ಪ್ರಮುಖರು.

ಮೊದಲಕಲ್ಲಿನಲ್ಲಿರುವ ವೆಂಕಟೇಶದೇವರು, ರುದ್ರ ದೇವರ ತಪಸ್ಸಿಗೆ ಮೆಚ್ಚಿ, ಬೇಟೆಗಾರನ ರೂಪದಲ್ಲಿ ಸ್ವಯಂ ವ್ಯಕ್ತನಾದದ್ದು. ನಿತ್ಯಾವಿಯೋಗಿನಿಯಾದ ಲಕ್ಷ್ಮೀ ದೇವಿಯು ಸಹ ಸ್ವಯಂ ವ್ಯಕ್ತಳಾಗಿ ಉದ್ಭವಿಸಿದ್ದಾಳೆ.

ದಾಸರ ಅನುಬಂಧಿಯಾದ ಕಲ್ಲೂರ ಶ್ರೀನಿವಾಸರಾಮಚಂದ್ರ ಕುಲಕರ್ಣಿಯವರು, ದಾಸರೇ ಬರೆದಿಟ್ಟವಹಿಯಲ್ಲಿನ ಸುಳಾದಿಗಳು, ಕೃತಿಗಳು ಮತ್ತು ಉಗಾಭೋಗಗಳನ್ನು, ಸಂದರ್ಭದ ಸಮೇತ ಬರೆದಿಟ್ಟಿರುವುದು ಆಸ್ತಿಕರ ಭಾಗ್ಯ.

ಇಂತಹ ಮಹಾಮಹಿಮರು ಕ್ರಿ.ಶ. 1885 ರ ಪಾರ್ಥಿವ ಸಂವತ್ಸರದ ವೈಶಾಖ ಶುದ್ಧ ಅಷ್ಟಮಿಯಂದು ದಾಸರು ತಮ್ಮ ಮೂಲರೂಪದಲ್ಲಿ ಸೇರಿಕೊಳ್ಳಲು, ಈ ಪಾರ್ಥಿವ ಶರೀರವನ್ನು ತ್ಯಜಿಸಿ, ಪಾರ್ಥಸಾರಥಿಯ ಪಾದಾರವಿಂದದಲ್ಲಿ ಲೀನರಾದರು. ಅವರ ದೇಹ ಸಂಸ್ಕಾರ ಮಾಡಿದ ಸ್ಥಳದಲ್ಲಿ ಕಟ್ಟೆಯೊಂದನ್ನು ಕಟ್ಟಿದ್ದು, ಅದು ಪಾವನ ಕ್ಷೇತ್ರವೆಂದು ಪ್ರಸಿದ್ಧಿಯಾಗಿದೆ.

ಶ್ರೀ ಕೃಷ್ಣಾರ್ಪಣ ಮಸ್ತು

Edited and Published on behalf of T.T.Devasthanams by **Prof. K.Rajagopalan**, Phd.,
Chief Editor, T.T.D. and Printed at T.T.D. Press by **Sri P. Ramaraju**, M.A., Special Officer (Press & Publications), T.T.D. Press, Tirupati - 517 507.

**ತಿರುಮಲೆ ಸ್ವಾಮಿಯವರ ಆಲಯದೊಳಗೆ
ಏಕಾಂತವಾಗಿ ನಡೆದ ವಾರ್ಷಿಕ ಬ್ರಹ್ಮೋತ್ಸವಗಳಲ್ಲಿ
ಸ್ವಾಮಿಯವರಿಗೆ ನಡೆದ ವಿವಿಧ
ವಾಹನ ಸೇವೆಗಳ ದೃಶ್ಯಮಾಲಿಕೆ**























SAPTHAGIRI (KANNADA) ILLUSTRATED MONTHLY
Published by Tirumala Tirupati Devasthanams printing on 25-09-2020.
Regd. with the Registrar of Newspapers under "RNI" No.10742, Postal Regd.No.TRP/14 - 2018-2020
Licensed to post without prepayment No.PMGK/RNP/WPP-04/2018-2020

